ಶ್ರೀ ವಿಷ್ಣು ಪ್ರಭಾಕರರ

ನವ-ಪ್ರಭಾತ

[ಅಶೋಕ ಕಾಲೀನ ಐತಿಹಾಸಿಕ ನಾಟಕ]

ಅನುವಾದಕ:—

ಎಸ್. ಎಂ. ಶೆಟ್ಟಿ, ಶಿಮುಂಜೆಪರಾರಿ.

೧೯೫೯.

ಶ್ರೀ ಸದ್ಗುರು ಪ್ರಕಾಶನ,

ಶಿಮುಂಜೆಪರಾರಿ,
ಕ[illegible]ಮುಂಡ್ಕೂರು,
ಕಾರ್ಕಳ, ದ. ಕ.

ರೂಂ. ನಂ. ೩, ಕವಳೀ ಬಿಲ್ಡಿಂಗ್,
ಕಾಶೀನಾಥ್ ಧುರು ರೋಡ್,
ಮುಂಬಾಯಿ - ೨೮.

ಪ್ರಕಾಶಕ:—
ಶ್ರೀ ಶಿಮುಂಜೆಪರಾರಿ ಮುದ್ದಣ್ಣ ಶೆಟ್ಟಿ,
ಶ್ರೀ ಸದ್ಗುರು ಪ್ರಕಾಶನ,
ಮುಂಬಾಯಿ - ೨೮.

ಪ್ರಥಮ ಮುದ್ರಣ ೧೯೫೯.
ಪ್ರತಿಗಳು: ೧೫೦೦.

ಬೆಲೆ: ರೂ. ೧·೨೫.

ಮುದ್ರಕರು:—
ಜಯ ಮುದ್ರಣ ಪ್ರಕಟಣ, ಮೂಡುಬಿದ್ರಿ, ದ. ಕ.

ಯುದ್ಧದಿಂದ ತ್ರಸ್ತ

ಇಪ್ಪತ್ತನೆಯ ಶತಮಾನದ

ಮಾನವತೆಗೆ

ಕಿರಿಯ ಕಾಣಿಕೆ!

ವಿಷ್ಣು ಪ್ರಭಾಕರ,
[ಮೂಲ ಲೇಖಕರು]

ಗುರುಬ್ರಹ್ಮ ಗುರುವಿಷ್ಣು । ಗುರುರ್ದೇವೋ ಮಹೇಶ್ವರಾ ॥
ಗುರು ಸಾಕ್ಷಾತ್ ಪರಬ್ರಹ್ಮ । ತಸ್ಮೈ ಶ್ರೀಗುರುವೇ ನಮಃ ॥

ಅನುವಾದಕನ

ಒಂದು ಮಾತು.

ಸಹೃದಯ ವಾಚಕರೆ,

ಹಿಂದಿಯ ಸುಪ್ರಸಿದ್ಧ ಕಥೆಗಾರ ಹಾಗೂ ನಾಟಕಕಾರರಾದ ಶ್ರೀ। ವಿಷ್ಣು ಪ್ರಭಾಕರರ 'ನವ - ಪ್ರಭಾತ' ಎಂಬ ಐತಿಹಾಸಿಕ ನಾಟಕದ ಅನುವಾದಿತ ಕೃತಿಯನ್ನು ನಿಮ್ಮ ಮುಂದಿಡುವ ಸೌಭಾಗ್ಯ ನನಗೊದಗಿದುದಕ್ಕಾಗಿ ನಾನು ಅತೀ ಆನಂದಪಡುತ್ತೇನೆ.

ಈ ಏಕಾಂಕವನ್ನು 'ಹಿಂದಿ ರಾಷ್ಟ್ರಭಾಷಾ ಪ್ರಚಾರ ಸಮಿತಿ, ವಾರ್ಧಾ' ಇವರು ತಮ್ಮ ಹಿಂದೀ ಶಾಲೆಗಳ 'ಪರಿಚಯ' ವರ್ಗಕ್ಕೆ ಪಠ್ಯ ಪುಸ್ತಕವೆಂದು ಸ್ವೀಕರಿಸಿದ್ದಾರೆ.

ಈ ಕೃತಿಯ ಅನುವಾದನದ ಬಗ್ಗೆ ತನ್ನ ಸಂಪೂರ್ಣ ಸಹಾನುಭೂತಿ ಮತ್ತು ಅನುಮತಿಯನ್ನಿತ್ತ, ಮೂಲ ಲೇಖಕ ಶ್ರೀ। ವಿಷ್ಣು ಪ್ರಭಾಕರರಿಗೂ, ಮೂಲ ಕೃತಿಯ ಪ್ರಕಾಶಕರಾದ ದೆಹಲಿಯ 'ಸಸ್ತಾ' ಸಾಹಿತ್ಯ ಮಂಡಲದವರಿಗೂ ನಾನು ಚಿರಋಣಿ.

ಅನುವಾದನದ ನಂತರ ಹಲವಾರು ಸಂದೇಹ ಪರಂಪರೆಗಳ ಅಂಧಃಕಾರದಲ್ಲಿ ತೊಳಲಿದಾಗ, ಕರ್ತವ್ಯದ ದಿವ್ಯ ದೀವಿಗೆ ತೋರಿಸಿ ಮುನ್ನಡೆಯುವಂತೆ ಮಾಡಿದ ನನ್ನ ಪೂಜ್ಯ ಗುರುವರ್ಯ ಶ್ರೀ ಶ್ರೀ ಸ್ವಾಮಿ ಸದಾನಂದರವರಿಗೆ ನನ್ನ ಅನಂತ ಪ್ರಣಾಮಗಳು.

ನನ್ನ ಕೆಲವೊಂದು ಅನುವಾದಿತ ಕಿರುಗಥೆಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದ ಉಡುಪಿಯ 'ರಾಯಭಾರಿ' ಮತ್ತು ಮಂಗಳೂರಿನ 'ಸಂಗಾತಿ' ವಾರ ಪತ್ರಿಕೆಗಳ ಸಂಪಾದಕರಿಗೆ ನನ್ನ ವಂದನೆಗಳು.

ಈ ಅನುವಾದಿತ ಕೃತಿಯಿಂದಾಗಿ ಇತಿಹಾಸ ಪ್ರೇಮಿಗಳಿಗೂ, ಹಿಂದಿ ಶಾಲೆಯ 'ಪರಿಚಯ' ವರ್ಗದ ವಿದ್ಯಾರ್ಥಿ ವೃಂದಕ್ಕೂ ಮತ್ತು ಸಾಹಿತ್ಯಾಭಿಮಾನಿಗಳಿಗೂ ಸ್ವಲ್ಪವಾದರೂ ಆನಂದ ಉಂಟಾದರೆ ಅದು ಅನುವಾದಕನ ಅಹೋ ಭಾಗ್ಯ.

ಪುಸ್ತಕದ ಪ್ರಕಟನೆಯ ಭಾರವನ್ನು ವಹಿಸಿಕೊಂಡು, ಸಾಹಿತ್ಯಾಂಭೆಯ ಆರಾಧನೆ ಮಾಡಲು ನನಗೆ ಹೆಚ್ಚಿನ ಪ್ರೋತ್ಸಾಹವನ್ನಿತ್ತ ನನ್ನ ತೀರ್ಥರೂಪರಾದ ಶ್ರೀಯುತ ಶಿಮುಂಜೆಪರಾರಿ ಮುಪ್ದಣ್ಣ ಶೆಟ್ರವರಿಗೆ ನನ್ನ ಅನಂತ ಪ್ರಣಾಮಗಳು.

ಸರ್ವ ವಾಚಕರೂ ಈ ಕೃತಿಯ ಬಗ್ಗೆ ತಮ್ಮ ಅಮೂಲ್ಯ ಅಭಿಪ್ರಾಯಗಳನ್ನಿತ್ತು, ಅನುವಾದಕನನ್ನು ಪ್ರೋತ್ಸಾಹಿಸುವರೇ ವಿನಮ್ರವಾಗಿ ವಿನಂತಿಸುತ್ತೇನೆ ಹಾಗೂ ವಿದ್ಯಾರ್ಥಿಯೋರ್ವನ ಈ ಪ್ರಥಮ ಕೃತಿ ಪುಷ್ಪವನ್ನು ಕನ್ನಡ ಸದ್ಬಾಂಧವರೆಲ್ಲರೂ ಬಾಡದಂತೆ ಪ್ರೋತ್ಸಾಹಿಸಿದಲ್ಲಿ ಇನ್ನೂ ಹಲವಾರು ಅನುವಾದಿತ ಕೃತಿ ಪುಷ್ಪಗಳನ್ನು ಪ್ರಕಟಿಸಿ, ಕನ್ನಡಮ್ಮನ ಚರಣಾರವಿಂದಗಳಲ್ಲಿ ಅರ್ಪಿಸ ಬಯಸುತ್ತೇನೆ.

ಕೊನೆಯದಾಗಿ ಈ ಪುಸ್ತಕದ ಪ್ರಕಟನೆಗಾಗಿ ಪ್ರೋತ್ಸಾಹವನ್ನಿತ್ತ ನನ್ನ ಬಂಧುಮಿತ್ರರೆಲ್ಲರಿಗೂ ನನ್ನ ವಂದನೆಗಳು.

ಇತೀ,

ಎಸ್. ಎಂ. ಶೆಟ್ಟಿ,
ಶಿಮುಂಜೆಪರಾರಿ.

ಮುನ್ನುಡಿ.

ಈ ಐತಿಹಾಸಿಕ ನಾಟಕ ಬರೆಯಲು ಒಂದು ಇತಿಹಾಸವಿದೆ. ನನಗೆ ಇತಿಹಾಸವೆಂದರೆ ಅತೀ ಪ್ರೀತಿ. ಆದರೂ ಐತಿಹಾಸಿಕ ಕಥಾವಸ್ತುವನ್ನೊಳಗೊಂಡ ಯಾವುದೇ ಕಥೆ ಯಾ ಏಕಾಂಕವನ್ನು ನಾನು ಬರೆದಿಲ್ಲ. ವರ್ತಮಾನದಲ್ಲಿಯೇ ಭೂತಕಾಲದೆಡೆಗೆ ಮನಸ್ಸು ಹೋಗದಷ್ಟು ಕಥಾ ವಸ್ತುಗಳಿವೆ. ಇಂದಿನ ಈ ಯುಗವು ಸಾಮಾಜಿಕ ರಚನೆಯನ್ನು ಬೇಡುತ್ತದೆ. ಅದು ಇಂದಿನ ವಿಕಟ ಸಮಸ್ಯೆಗಳ ಪರಿಹಾರ ಬಯಸುತ್ತದೆ. ಈ ಜಗತ್ತಿನ ವೇಗವು ಸ್ವಲ್ಪ ನಿಂತು ಹಿಂದೆ ನೋಡುವಷ್ಟು ವ್ಯವಧಾನವೀಯುವುದಿಲ್ಲ. ಆದರೂ ಈ ನಾಟಕ ಬರೆಯಲಾಗಿದೆ.

ಕಳೆದ ವರ್ಷ ದೆಹಲಿಯ ಆಕಾಶವಾಣಿ ನಿಲಯದಿಂದ ಮಹಿಳಾ ವಿಭಾಗದಲ್ಲಿ 'ನಾನೂ ಮಾನವ' ಎಂಬ ಹೆಸರಿನ ಒಂದು ಕಾರ್ಯಕ್ರಮವನ್ನು ಪ್ರಸಾರ ಮಾಡತೊಡಗಿದರು. ಹಿಂದಿನ ಮಹಾನ್ ಪುರುಷರುಗಳ ಜೀವನವನ್ನು ವಿವರಿಸಿ ಅವರೂ ಮಾನವರೇ ಎಂಬುದನ್ನು ವಿವರಿಸುವುದೇ ಅದರ ಉದ್ದೇಶ. 'ಅಶೋಕ'ನು ಅವರಲ್ಲಿ ಮೊದಲಿಗನು. ಅವನ ಬಗ್ಗೆ ನಾನು ಬರೆಯಬೇಕಾಗಿತ್ತು. ಈ ನಾಟಕದ ಮೊದಲನೆಯ ಅಂಕವು ದಿಲ್ಲಿ ರೇಡಿಯೋದಿಂದ ಪ್ರಸಾರವಾಯ್ತು, ನಂತರ ಹಲವಾರು ಬಾರಿ ಇದು ಅಲ್ಲಿಂದ ಪ್ರಸಾರವಾಯ್ತು.

ಭಾರತದ ಹೊರದೇಶಗಳಿಗಾಗಿರುವ ರೇಡಿಯೋ ವಿಭಾಗದವರು, ಇನ್ನೊಂದು ಹೊಸ ವಿಭಾಗವನ್ನು 'ಇತಿಹಾಸ ಕಾ ಎಕ್ ಪೃಷ್ಠ' ಯಾ 'ಇತಿಹಾಸದ ಒಂದು ಪುಟ' ಎಂದು ಪ್ರಾರಂಭಿಸಿದರು. ಆ ವಿಭಾಗದವರು ಭಾರತದ ಐತಿಹಾಸಿಕ ಗೌರವಮಯ ಕಥೆಗಳನ್ನು ಪ್ರಸಾರಿಸುತ್ತಿದ್ದರು. ಅದಕ್ಕಾಗಿ ನಾನು ಬರೆದಿದ್ದ 'ಅಶೋಕ'ವನ್ನು ಆರಿಸಿ 'ದೇವನಾಮಪ್ರಿಯ' ಎಂಬ ರೇಡಿಯೋ ರೂಪಕವನ್ನು ಬರೆದೆ. ಅದರಲ್ಲಿ ಅಶೋಕನು ಬರೆಸುತ್ತಿದ್ದ 'ಧರ್ಮಲಿಪಿ' ಮತ್ತು ಅವನ ಜೀವನದ ಘಟನೆಗಳನ್ನು ನೆನೆಸುವಂತೆ ಬರೆಯಲಾಗಿದೆ. ಎರಡನೆಯ ಅಂಕದ ಕಥೆಯು ಅದರಿಂದಲೇ ಮುಂದುವರಿಸ

ಲಾಗಿದೆ. ಒಂದು ಶಿಲಾಲೇಖದಲ್ಲಿ— 'ಎಲ್ಲಿ ಮಾನವರು ಈ ರೀತಿಯಲ್ಲಿ ವಧೆ ಮತ್ತು ಮರಣ ಹೊಂದುತ್ತಾರೋ, ದೇಶವು ಬಂಜರಾಗುತ್ತದೋ ಅಂತಹ ಪ್ರದೇಶಗಳನ್ನು ಗೆದ್ದರೂ ಗೆದ್ದಿರದಂತೆ' ಎಂಬ ಶಬ್ದಗಳನ್ನು ಓದಿದಾಗ ಅಶೋಕನ ಕಲಿಂಗ ಯುದ್ಧದ ನೆನಪಾಗುತ್ತದೆ. ಹಾಗೆಯೇ ಈ ಶಬ್ದಗಳನ್ನು ಕಲಿಂಗದ ರಾಜಕುಮಾರಿ ಹೇಳಿದುದಾಗಿ ನೆನಪಾಗುತ್ತದೆ. ಇತಿಹಾಸದಲ್ಲಿ ಈ ಬಗ್ಗೆ ಚರ್ಚೆಯಾಗುವುದಿಲ್ಲ, ಆಗಲೂ ಸಾಧ್ಯವಿಲ್ಲ! ರಾಜಕುಮಾರಿಯು ನನ್ನ ಕಲ್ಪನಾ ಸೃಷ್ಟಿ. ಆದರೆ ಈ ಕಲ್ಪನಾ ಸೃಷ್ಟಿ ನವ್ಯವಲ್ಲ. ಈ ಮೊದಲು ಹಲವಾರು ಲೇಖಕರು ಈ ಕಲ್ಪನೆ ಮಾಡಿದ್ದಾರೆ. ಶ್ರೀ ಜಗದೀಶಚಂದ್ರ ಮಾಥುರರ ಏಕಾಂಕ *೧'ಜಯ ಪರಾಜಯ'ದಲ್ಲಿ ಈ ಕಲ್ಪನೆ ಮಾಡಲ್ಪಟ್ಟಿದೆ. ಆದರೂ ಸೃಷ್ಟಿಯಲ್ಲಿಯ ಸಾಮಾನ್ಯ ಮಾನವರಂತೆಯೇ ನನ್ನ ಮತ್ತು ಅವರ ದೃಷ್ಟಿ ಮಾತ್ರ ಭಿನ್ನವಾಗಿದೆ. ಕಲಿಂಗ ಯುದ್ಧದ ನಂತರ ಅಶೋಕನ ತೀವ್ರ ಬದಲಾವಣೆಗೆ ಯಾವುದಾದರೂ ನಿಸ್ಸಂದೇಹವಾದ ಪ್ರಬಲಕಾರಣವಿದ್ದೇ ಇರಬೇಕು. ಯುದ್ಧದಲ್ಲಿಯೇ ತಿರಸ್ಕಾರ ಹುಟ್ಟುವಂತೆ ಅವನ ಹೃದಯಕ್ಕೆ ಅಘಾತ ಒದಗಿಸಿದ ಯಾವುದಾದರೂ ಘಟನೆಯೂ, ಪರಿಸ್ಥಿತಿಯಂತೂ ಆತನಿಗೆ ಒದಗಿರಲೇ ಬೇಕು. ರಾಜಕುಮಾರಿಯ ಸೃಷ್ಟಿಯನ್ನು ನಾನು ಇದಕ್ಕಾಗಿಯೇ ಮಾಡಿದ್ದೇನೆ.

ಮೂರನೇ ಅಂಕದ ಕಥೆಯೇ ಈ ದೃಷ್ಟಿಕೋನದ 'ಚರಮ ಬಂಧು' ಇಂತಹ ಪ್ರಬಲ ಅಘಾತವಲ್ಲದೇ ಭಾರತದ ಇತಿಹಾಸವನ್ನೇ ಬದಲು ಮಾಡಿದ ಅಶೋಕನ ಮನಸ್ಸಿನಲ್ಲಿ ಎಂದೂ ಸಂಘರ್ಷ ಎದ್ದಿರಲಿಕ್ಕಿಲ್ಲ. ಈ ಅಂಕವು ನನ್ನ 'ಜೀವನ-ದೀಪ'ದ ರೂಪಾಂತರವಾಗಿದೆ. ದಿಲ್ಲಿಯ ಪ್ರಸಿದ್ಧ ಸಾಹಿತ್ಯ ಸಂಸ್ಥೆಯಾದ 'ಶನಿವಾರ ಸಮಾಜ'ದಲ್ಲಿ ನಾನೀ ಕಥೆಯನ್ನು ಓದಿದಾಗ, ಈ ಕಥೆಯ ಬಗ್ಗೆ ತುಂಬಾ ಚರ್ಚೆ ನಡೆಯಿತು. ಕೆಲವರು ಕುಮಾರನ ಆತ್ಮಹತ್ಯೆಯ ಬಗ್ಗೆ ಮಾತಾಡಿದರು. ಕುಮಾರನ ಕಲ್ಪನೆಯು ಹೊಸಸೃಷ್ಟಿಯಲ್ಲ, ಆದರೆ ಅಧಿಕಾಂಶ ಲೇಖಕರು ಅವನನ್ನು ಕಲಿಂಗ ಯುದ್ಧದಲ್ಲಿ ವೀರ ಮರಣ

*೧. ಈ ಏಕಾಂಕವು ಸುಮಿತ್ರಾನಂದ ಪಂತರಿಂದ ಸಂಪಾದಿತ 'ರೂಪಭ' ದಲ್ಲಿ ಪ್ರಕಟಿಸಲ್ಪಟ್ಟಿದೆ.

ಹೊಂದುವಂತೆ ಯಾ ಅಶೋಕನು ಅವನ ದಿಟ್ಟತೆಗೆ ಸಿಟ್ಟಾಗಿ ವಧೆಯ ಆಜ್ಞೆ ಕೊಟ್ಟಂತೆ ಚಿತ್ರಿಸಿದ್ದಾರೆ. ಆದರೆ ನಾನು ಅಶೋಕನು ರಾಜಕುಮಾರನ ವಧೆಯ ಆಜ್ಞೆ ಕೊಟ್ಟರೂ ಪಶ್ಚಾತ್ತಾಪದಿಂದಾಗಿ ಕ್ಷಮಿಸುತ್ತಾನೆ; ಆದರೆ ಸಾಮ್ರಾಟನ ಕ್ಷಮಾಗ್ರಹಣಮಾಡದೆ ಸಮಯ ಕಾದು ಕುಮಾರನು ಆತ್ಮಹತ್ಯೆ ಮಾಡಿಕೊಳ್ಳುವಂತೆ ಚಿತ್ರಿಸಿದ್ದೇನೆ. ಆದರೆ ಅವನ ಮರಣವು ಹೇಡಿತನವಲ್ಲ! ಅಶೋಕನ ಹೃದಯದಲ್ಲಿದ್ದ ಪಶ್ಚಾತ್ತಾಪದ ಕಿಡಿಯನ್ನು ಪ್ರಜ್ವಲಿಸಿ ಅವನ ದುಷ್ಟತೆ ಅವನನ್ನೇ ಸುಡುವಂತೆ ಮಾಡುವುದೇ ಈ ಆತ್ಮಹತ್ಯೆಯ ಉದ್ದೇಶ್ಯ. ಈ ಕಲ್ಪನೆಯೂ ಮೂಲತಃ ನನ್ನದಲ್ಲ. ಒಡಿಸ್ಸಾದ ಲೇಖಿಕೆ ಶ್ರೀಮತಿ ಸರಸ್ವತಿ ದೇವೀ ಪಾಣಿಗ್ರಾಹಿ ಇವರ ನಾಟಕ *೧'ಕಲಿಂಗ-ವಿಜಯ'ದ್ದಾಗಿದೆ ಅವರ ಲೇಖನದಲ್ಲಿ ಕುಮಾರನ ಆತ್ಮಹತ್ಯೆಯ ಉದ್ದೇಶ್ಯವು, ನನ್ನ ಉದ್ದೇಶ್ಯಕ್ಕಿಂತ ಭಿನ್ನವಾಗಿದ್ದರೂ, ಸಾದ್ದೇಶ್ಯವಾಗಿದೆ. ಇದು ಐತಿಹಾಸಿಕ ದೃಷ್ಟಿಯಿಂದ ಅಸತ್ಯವೆಂದು ಪ್ರಮಾಣಿತವಾಗಲೂ ಬಹುದು; ಆದರೆ ಅಕಾರಣವಾಗಿ ಪ್ರಕಟವಾಗಲು ಸಾಧ್ಯವಿಲ್ಲ. ಇತಿಹಾಸದ ಘಟನೆಗಳಿಗೆ ಮನ ಬಂದಂತೆ ಅರ್ಥಕಟ್ಟುವ ಅಧಿಕಾರ ನಮಗಿಲ್ಲ; ಆದರೆ ಪರಿಸ್ಥಿತಿಗನುಸಾರವಾಗಿ ಉಚಿತ ಕಲ್ಪನೆಯನ್ನು ಮಾಡುವ ಅಧಿಕಾರ ಅವಶ್ಯವಾಗಿ ನಮಗಿದೆ. ಹಾಂ, ಇಂತಹ ಕಲ್ಪನೆಯಿಂದ ಐತಿಹಾಸಿಕ ಸತ್ಯಕ್ಕೆ ಆಧಾರ ಸಿಗಬೇಕು. ಈ ಘಟನೆಯಿಂದ ಅಶೋಕನ ಹೃದಯ ಪರಿವರ್ತನೆಯ ಇತಿಹಾಸ ಘಟನೆಗೆ ತುಂಬಾ ಬಲ ಸಿಗುತ್ತದೆ. ಅವನು ತನ್ನ ಪಾಶವೀ ಕೃತ್ಯಗಳನ್ನು ಗುರುತಿಸಲಾರಂಭಿಸುತ್ತಾನೆ.

ಇನ್ನೂ ಒಂದು ಹೊಸ ಕಲ್ಪನೆಯು ಈ ನಾಟಕದಲ್ಲಿ ಮಾಡಲ್ಪಟ್ಟಿದೆ. ಸಾಧಾರಣತಃ ಮಹೇಂದ್ರ, ಸಂಘಮಿತ್ರಾರು ಅಶೋಕನ ಮಕ್ಕಳೆಂದು ಪ್ರಸಿದ್ಧರಿದ್ದಾರೆ. ನಾನವರನ್ನು ಅಶೋಕನ ಸಹೋದರ, ಸಹೋದರಿಯರೆಂದು ಸೂಚಿಸಿದ್ದೇನೆ. ಅಶೋಕನ ಪರಿವಾರದ ಬಗ್ಗೆ ಇತಿಹಾಸವು ಏನೊಂದು ವಿಷಯವನ್ನೂ ನಿರ್ವಿವಾದವಾಗಿ ಹೇಳುವುದಿಲ್ಲ. ಜನಶ್ರುತಿ, ಕಟ್ಟುಕಥೆ, ಪದ್ಯಗಳು, ಭಾರತ ಮತ್ತು ಲಂಕೆಯ ಬೌದ್ಧ ಗ್ರಂಥಗಳಿಂದ ತಿಳಿದೇ ಲೇಖಕರೂ, ಇತಿಹಾಸಕಾರರೂ ನಿಶ್ಚಯಿಸುತ್ತಾರೆ. 'ದಿವ್ಯಾವಧಾನ' ಮತ್ತು 'ಮಹಾವಂಶ'ಗಳು ಅವುಗಳಲ್ಲಿ ಪ್ರಮುಖವಾಗಿವೆ. ಅಶೋಕನು ಕೊರಿಯಿ

---

*೧. ನೋಡಿರಿ 'ಹಂಸ' ವರ್ಷ ೮, ಅಂಕ ೧೧.

ಸಿದ ಶಿಲಾಲೇಖ, ಸ್ತಂಭಲೇಖ, ಗುಹಾಲೇಖಗಳಿಂದ ಅವನಿಗೆ ಹಲವಾರು ರಾಣಿಯರೂ, ಪುತ್ರರೂ, ಸಹೋದರ-ಸಹೋದರಿಯರೂ ಇರುವಂತೆ ತಿಳಿದು ಬರುತ್ತದೆ. ಆದರೆ ಹೆಸರು ಅಲ್ಲೋ ಇಲ್ಲೋ ಒಬ್ಬಿಬ್ಬರದು ಮಾತ್ರ ಬರುತ್ತದೆ. ಉದಾಹರಣೆಗಾಗಿ 'ಮಹಾವಂಶ'ದ ಅನುಸಾರವಾಗಿ 'ಅಸಂಧಿಮಿತ್ರಾ'ಳು ಅಶೋಕನ ಪ್ರಧಾನ ರಾಣಿಯಾಗಿದ್ದಳು. ಇದರ ಹೇಳಿಕೆಯಂತೆ ಉಜ್ಜೈನಿಯಲ್ಲಿರುವ 'ದೇವಿ' ಎಂಬರಸಿಯು ಮಕ್ಕಳೇ ಸಂಘಮಿತ್ರಾ ಮತ್ತು ಮಹೇಂದ್ರರು. 'ದಿವ್ಯಾನಧಾನ' [ಪುಟ ೩೯೭-೩೯೮]ದಲ್ಲಿ ಸಾಮ್ರಾಟ ಅಶೋಕನಿಗೆ 'ತಿಷ್ಯರಕ್ಷಿತೆ' ಎಂಬೊಬ್ಬ ಮಡದಿಯಿದ್ದಳು. ಇವಳು ರಾಜನು ಮುದುಕನಾದ ಮೇಲೆ ಮದುವೆಯಾಗಿ, ಅವನ ಅತಿ ಸುಂದರ ಪುತ್ರನಾದ 'ಕುಣಾಲ'ನ ಕಣ್ಣು ಕೀಳಿಸಿದುದಾಗಿ ದಂತ ಕಥೆಯಿದೆ. ಶಾಕ್ಯ ಕುಮಾರಿ ಮತ್ತು ಪದ್ಮಾವತಿಯರೂ ಅಶೋಕನ ರಾಣಿಯರೆಂದು ತಿಳಿಸಲಾಗುತ್ತದೆ. ಪದ್ಮಾವತಿಯ ಹೆಸರು ಕೆಲವು ಹಾಡುಗಳಲ್ಲಿದೆ, ಹಾಗೂ ಇವಳನ್ನು 'ಕುಣಾಲ ಮಾತೆ' ಎಂದು ಹೇಳುತ್ತಾರೆ. ಕೆಲವೆಡೆ 'ಕುಣಾಲ'ನು 'ಅಸಂಧಿಮಿತ್ರಾ'ಳ ಪುತ್ರನೆಂದೂ ಸಂಬೋಧಿಸಲಾಗುತ್ತಿದೆ ಮತ್ತು 'ಗೌಣ ಸ್ಥಂಭ' [ಚತುರ್ಥ] ಲೇಖನದಲ್ಲಿ 'ಕಾರುವಾಕಿ' ಎಂಬ ರಾಣಿಯ ಹೆಸರು ಬರುತ್ತದೆ.

"ದೇವನಾಮಪ್ರಿಯನ ಅನುಶಾಸನವನ್ನು ಸರ್ವತ್ರ ಮಹಾಮಾತ್ರರುಗಳಿಗೆ ತಿಳಿಯಪಡಿಸುವುದೇನೆಂದರೆ— ಇಲ್ಲಿ ಏನೊಂದು ವಸ್ತು ದಾನಮಾಡಿದರೂ ಅದು ದ್ವಿತೀಯ ರಾಣಿ ಮಾಡಿದ ಹಾಗೆ— ಆಮ್ರಕುಂಜವಾಗಲೀ ಧರ್ಮಶಾಲೆಯಾಗಲೀ ಬೇರೇನೇ ಆಗಲಿ; ಅವೆಲ್ಲವೂ ದ್ವಿತೀಯ ರಾಣಿಯ ಹೆಸರಿನಲ್ಲಿ ಗಣಿಸಬೇಕು. ಇದು ದ್ವಿತೀಯ ರಾಣಿ 'ಕಾರುವಾಕಿ'*೩ ತಿವಾಲ ಮಾತೆಯ ವಿಸಯವಾಗಿದೆ."

ಇವಳು ಪ್ರಾಯಶಃ ಅಶೋಕನ ಒಲುಮೆಯ ರಾಣಿಯಾಗಿರಬೇಕು. ಆದುದರಿಂದಲೇ ಈ ನಾಟಕದಲ್ಲಿ ದ್ವಿತೀಯ ರಾಣಿ 'ಕಾರುರಾಕಿ'ಗೆ ಸ್ಥಾನವಿದೆ.

*೩. 'ಕಾರುವಾಕಿ' ಎಂಬುದು ಕುಲಗೋತ್ರದ ಹೆಸರಾಗಿರಬೇಕು ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಬಹುಶಃ 'ಕಾರುವಾಕಿ' ವಂಶದವಳಾದ ಕಾರಣ ಅವಳ ವ್ಯಕ್ತಿತಃ ಹೆಸರನ್ನು ಕೊಡಲಾಗಲಿಲ್ಲ.

ಇವೇ ಲೇಖದಲ್ಲಿ 'ಕಾರುವಾಕಿ'ಯ ಪುತ್ರ *೪'ತಿವಾಲ'ನ ಹೆಸರೂ ಬಂದಿದೆ. ಇವನಲ್ಲದೆ ಮಹೇಂದ್ರ, ಉಜ್ಜೈಗೋ, ಕುಣಾಲ, ಜಾಲೌಕರನ್ನೂ ಅಶೋಕನ ಪುತ್ರರೆಂದು ಹೇಳಲಾಗುತ್ತಿದೆ. ನಮಗೆ ಮಹೇಂದ್ರನ ವಿಷಯ ಚರ್ಚಿಸ ಬೇಕಾಗಿದೆ. ಏಕೆಂದರೆ ಅವನ ವಿನಃ ಈ ನಾಟಕದಲ್ಲಿ ಬೇರಾರಿಗೂ ಆಸ್ಪದ ವಿಲ್ಲ. "ಉತ್ತರೀ ಬೌದ್ಧ ಅನುಶ್ರುತಿಯಂತೆ ಮಹೇಂದ್ರನು ಅಶೋಕನ ತಮ್ಮನೂ, ಸಿಂಹಲೀ ವೃತ್ತಾಂತದಂತೆ ಮಹೇಂದ್ರನು ಅವನ ಪುತ್ರನೂ ಆಗಿರು ತ್ತಾನೆ. [ಭಾರತೀಯ ಇತಿಹಾಸ ಕೀ ರೂಪರೇಖಾ, ಜಯಚಂದ್ರ ವಿದ್ಯಾಲಂ ಕಾರ ಭಾಗ ೨, ಖಂಡ ೪, ೧೩೬ ಅ. ಪುಟ ೬೭೦] ಸಿಂಹಲೀ ವೃತ್ತಾಂತದ ತಾತ್ಪರ್ಯ 'ಮಹಾವಂಶ'ಕ್ಕೆ ಮಿಲನವಾಗಿದೆ. ಈ ವೃತ್ತಾಂತಗಳು ಅಸತ್ಯ ವಲ್ಲದಿದ್ದರೂ ಅನಿವಾರ್ಯ ರೂಪದಿಂದ ಅತಿರಂಜಿತವಾಗಿದೆ. ಬೌದ್ಧ ಧರ್ಮದ ಪ್ರಭಾವವು ಅಶೋಕನ ಮೇಲೆ ಹೇಗೆ ಬಿತ್ತು ಎಂಬುದನ್ನು ತೋರಿಸಲಿಕ್ಕಾಗಿ ಪ್ರಾರಂಭದಲ್ಲವನನ್ನು ಅತೀ ಕ್ರೂರಿಯೆಂದು ಕರೆಯ ಲಾಗಿದೆ. ತನ್ನ ೯೯ ಮಂದಿ ಸಹೋದರರನ್ನು ಕೊಂದು ಅಶೋಕನು ಪಟ್ಟ ಕ್ಕೇರಿದನು ಎಂದು ಹೇಳಲಾಗಿದೆ. ಅಂತಹ ಏನೊಂದು ಕ್ರೂರ ಕೃತ್ಯವೂ ನಡೆದಿರಲಿಲ್ಲವೆಂದು ಈಗ ಸಿದ್ಧವಾಗಿದೆ. ಹಾಂ, ಒಬ್ಬ ಅಣ್ಣನೊಡನೆ ಮಾತ್ರ ಅವನು ಜಗಳವಾಡಿದ್ದನು. ಆ ಅಣ್ಣನೇ ಮಲತಾಯಿ ಮಗನಾದ 'ಸುಸೀಮ.' ಈತನು ಸ್ವಾಭಾವಿಕವಾಗಿಯೇ ತಂದೆಯಿಂದ ಪ್ರೀತಿಸಲ್ಪಡುತ್ತಿದ್ದನು ಮತ್ತು ಈತನು ಬೌದ್ಧ ಧರ್ಮದಲ್ಲಿ ಅತೀ ಮಮತೆಯುಳ್ಳವನಾದುದರಿಂದ, ಮಗಧ ಪಟ್ಟಕ್ಕೇರಲು ಅನರ್ಹನೆಂದು ತಿಳಿಯಲಾಯ್ತು. ಏನೇ ಇರಲಿ, ಅಶೋಕನ್ನು ಇವನೊಬ್ಬನೊಡನಲ್ಲದೇ ಇನ್ನಾರಲ್ಲೂ ಜಗಳವಾಡಿರಲಿಲ್ಲ! ಏಕೆಂದರೆ ಅವನ ಕಾರುಭಾರ ಸಮಯದಲ್ಲಿ ಎಲ್ಲಾ ಸಹೋದರರು ಜೀವಿಸಿದ್ದರು." ಏಳನೇ ಸ್ತಂಭ ಲೇಖನದಲ್ಲಿ—

"ಇಲ್ಲಿ [ಪಾಟಲೀಪುತ್ರದಲ್ಲಿ] ಮತ್ತು ಹೊರಗೆ ನನ್ನ ಅವರೋಧದ ಮಹಾಪುತ್ರಗಣ ನನಗೆ ವಿವಿಧ ರೀತಿಯ ಆನಂದ ಕೊಡುವುದರಲ್ಲಿ ಮಗ್ನ ವಾಗಿದೆ. ಜಗತ್ತಿನ ಪುಣ್ಯಕಾರ್ಯಗಳ ಉನ್ನತಿಯಾಗಲು ಮತ್ತು ಧರ್ಮ ನಿಷ್ಠರಾಗಲು ನಾನವರಿಗೆ ಅನುಮತಿಯಿತ್ತಿದ್ದೇನೆ. ನನ್ನ ಮತ್ತು ನನ್ನ ರಾಣಿ

*೪. ಕೆಲವೆಡೆಗಳಲ್ಲಿ ತೀವರನೆಂದೂ ಕರೆಯುಬಹುದಾಗಿದೆ.

ಯರ ಹೊರತು ಇದು ನನ್ನ ಪುತ್ರರೂ, ಜಗತ್ತಿನ ಎಲ್ಲಾ 'ದೇವಿ-ಕುಮಾರ' ರಿಗೂ ಸಂಬಂಧಪಟ್ಟುದಾಗಿದೆ" ಎಂದು ಬರೆಯಲಾಗಿದೆ.

ಶ್ರೀ। ಭಗವತೀ ಪ್ರಸಾದ ಪಾಂಥರೀಯವರು ತನ್ನ ಲೇಖನ 'ಅಶೋಕ'ದ ಬಗ್ಗೆ ಟಿಪ್ಪಣಿ ಬರೆಯುತ್ತಾ— "ಈ ಸಂದರ್ಭದಲ್ಲಿ 'ದೇವೀ-ಕುಮಾರ' ಎಂಬ ಪದವನ್ನು ಅಶೋಕನ ರಾಣಿಯರ ಮಕ್ಕಳೆಂದು ತಿಳಿಯದೆ, ಅಶೋಕನ ತಂದೆಯ ರಾಣಿಯರ ಮಕ್ಕಳೆಂದು ತಿಳಿಯಬೇಕು— ಅಂದರೆ 'ಮಲತಾಯಿ'*೫ ಮಕ್ಕಳು [ದಾಯಾದಿ] ಎಂದು ತಿಳಿಯತಕ್ಕದ್ದು" ಎಂದು ಬರೆದಿದ್ದಾರೆ.

ಐದನೇ ಶಿಲಾಲೇಖದಲ್ಲಿ ಈ ವಿಷಯವಾಗಿ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ.

"ಇವರು [ಧರ್ಮ ಮಹಾತ್ಮ] ಇಲ್ಲಿ [ಪಾಟಲೀಪುತ್ರ] ತಥಾ ನಗರದಲ್ಲಿ ನನ್ನ ಸಹೋದರ ಸಹೋದರಿಯರ ಅಂತಃಪುರ ಮತ್ತು ನನ್ನ ಅನ್ಯ ಸಂಬಂಧಿಗಳಿಗಾಗಿ ಸರ್ವತ್ರ ನಿಯುಕ್ತವಾಗಿದೆ."*೬

ಇಷ್ಟೆ ಅಲ್ಲ, ಕಥೆಗಳ ಅನುಸಾರವಾಗಿ, ಅಶೋಕನು ತನ್ನ ಸಂಬಂಧಿಗಳಿಗೆ ಅತೀ ಕೃಪಾಳುವಾಗಿದ್ದನು ಮತ್ತು ಉದಾರನಾಗಿದ್ದನು. ಅಶೋಕನು ಅವರನ್ನು ಬಹುವಾಗಿ ಪ್ರೀತಿಸುತ್ತಿದ್ದನು. ಮಹೇಂದ್ರ ಮತ್ತು ಅಶೋಕನ ಕುರಿತಾಗಿ ಅನೇಕ ಕಥೆಗಳು ಪ್ರಚಲಿತವಿವೆ. ಒಂದು ಕಥೆಯಲ್ಲಿ ಮಹೇಂದ್ರನು ಅಶೋಕನ ಮಲತಾಯೀ ಮಗ ಹಾಗೂ ಬಹಳ ಕ್ರೂರಿ. ಅಂತೆಯೇ ಸಂಯಮಹೀನ ಅವಮರ್ಯಾದಿತನಾಗಿದ್ದನು. ಅಶೋಕನು ಅವನನ್ನು ಕರೆದು ತಂದೆಯ ವಾತ್ಸಲ್ಯವನ್ನೂ ಸಹೋದರನ ಸ್ನೇಹವನ್ನೂ ತಿಳಿಸಿದನು. ಮಹೇಂದ್ರನು ತನ್ನ ತಪ್ಪನ್ನು ಒಪ್ಪಿ 'ಅರ್ಹತ'ನಾದನು. ಸಾಮ್ರಾಟನು ಮಹೇಂದ್ರನಿಗಾಗಿ ಪಾಟಲೀಪುತ್ರದಲ್ಲಿ ಹಲವಾರು ಗುಹೆಗಳನ್ನು ಕೊರೆಯಿಸಿದನು. ಈ ಮಾತನ್ನು ಚೀನದ ಪ್ರಸಿದ್ಧ ಯಾತ್ರಿಕ 'ಫಾಹಿಯಾನ'ನು ತನ್ನ

---

*೫. ಪುಟ ೧೦-೧೧ [ಇವರ ಟಿಪ್ಪಣಿಯ ಆಧಾರ EP Indica ii ೨೭೬ರಲ್ಲಿ]

*೬. ಪುಟ ೧೭ 'ಅಶೋಕ' ಲೇ- ಶ್ರೀ। ಭಗವತೀ ಪ್ರಸಾದ ಪಾಂಥರೀ.

ಲೇಖನದಲ್ಲಿ "ಅಶೋಕನ ಸಹೋದರರಲ್ಲೊಬ್ಬನು ಗುಡ್ಡಕಾಡುಗಳಲ್ಲಿ ಏಕಾಂತದಲ್ಲಿ ವಾಸಿಸುತ್ತಿದ್ದಾನೆ" ಎಂದು ಬರೆದಿದ್ದಾನೆ. "ಸಾಮ್ರಾಟನು ಅವನನ್ನು ಅರಮನೆಯಲ್ಲೇ ಇರಲು ತಿಳಿಸಿದಾಗ್ಯೂ ಅವನು ಒಪ್ಪಲಿಲ್ಲ. ಆಗ ಸಾಮ್ರಾಟನು ಅವನಿಗಿರಲಿಕ್ಕಾಗಿ ಪಾಟಲೀಪುತ್ರದ ಹತ್ತಿರ ಗುಹೆಗಳನ್ನು ಕೊರೆಯಿಸಿದನು."*೭ 'ಫಾಹಿಯಾನ'ನು ತನ್ನ ಲೇಖನದಲ್ಲಿ ಅಶೋಕನ ತಮ್ಮನ ಹೆಸರು ಕೊಡದಿದ್ದಾಗ್ಯೂ ಅವನು ಮಹೇಂದ್ರನಾಗಿರಬೇಕು. 'ಹುಯೇನ್‌ತ್ಸಾಂಗ್'ನು ತನ್ನ ಲೇಖನದಲ್ಲಿ ಮಹೇಂದ್ರನನ್ನು ಅಶೋಕನ ಮಲತಾಯೀ ಮಗನೆಂದು ತಿಳಿಸಿ ಆ ಕಥೆಯನ್ನೇ ವರ್ಣಿಸುತ್ತಾನೆ.*೮ ಬೇರೆ ಬೇರೆ ಗ್ರಂಥಗಳಲ್ಲಿ ಮಹೇಂದ್ರನ ಬಗ್ಗೆ ಬೇರೆ ಬೇರೆ ಕಥೆಗಳಿವೆ. ಪಾಲೀ ಗ್ರಂಥಗಳವನನ್ನು 'ತಿಷ್ಯ'ನೆಂದು ಕರೆದಿವೆ. ಇನ್ನು 'ದಿವ್ಯಾವಧಾನ'ದಲ್ಲಿ ಅವನನ್ನು 'ವಿತಾಸೋಕ'ನೆಂದೂ; ಇನ್ನಿತರ ಕೆಲವು ಚೀನೀ ಗ್ರಂಥಗಳು ಅವನನ್ನು *೯'ಸುದಂತ' ಯಾ 'ಸುಗಾಮ' ಎಂದು ಕರೆದಿವೆ.

ಅದೇನೇ ಇರಲಿ ಮಹೇಂದ್ರನು ಅಶೋಕನ ತಮ್ಮನೆಂದು 'ಉಪರೋಕ್ತ ಉದ್ಧರಣ'ದಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿದೆ. ಕೆಲವು ವಿದ್ವಾಂಸರ ಅಭಿಪ್ರಾಯದಿಂದ ಅಶೋಕನಿಗೆ ಮಹೇಂದ್ರನೆಂಬೊಬ್ಬ ಮಗನೂ ಇದ್ದದೆಂದು ತಿಳಿದು ಬರುತ್ತದೆ. ಆದರೆ ಸ್ವಲ್ಪ ಮಂದಿಯ ಅಭಿಪ್ರಾಯಕ್ಕೆ ಹೆಚ್ಚಿನ ಬೆಲೆ ಕೊಡಲಾಗುವುದಿಲ್ಲ. *೧೦'ಭಾರತೀಯ ಇತಿಹಾಸ ಕಿ ರೂಪರೇಖಾ' ಎಂಬ ಗ್ರಂಥದಲ್ಲಿ ಶ್ರೀ। ಜಯಚಂದ್ರ ವಿದ್ಯಾಲಂಕಾರರು ಅನಿಶ್ಚಿತ ಮಾತನ್ನು ಬರೆದಿದ್ದಾರೆ— "ಸಂಗೀತ ಪೂರ್ಣವಾದ ನಂತರ 'ತಿಷ್ಯ'ನು ಬೇರೆ ಬೇರೆ ಪ್ರಾಂತಗಳಲ್ಲಿ ಬೌದ್ಧ ಧರ್ಮ ಪ್ರಸಾರ ಕಾರ್ಯಕ್ಕಾಗಿ ಭಿಕ್ಷುಗಳನ್ನಟ್ಟಿದನು. ಅಶೋನ ಸಹೋದರ ಯಾ ಪುತ್ರನಾದ ಮಹಿಂದನು [ಮಹೇಂದ್ರ] ಆ ವರ್ಗಗಳಲ್ಲೊಂದರ ಮುಖಂಡನಾಗಿದ್ದನು."

---

*೭. SI-Yuki, Volume ii P. 91. 'ಅಶೋಕಾ' ಪುಟ ೧೨ ರಲ್ಲಿ ಉಧೃತ.

*೮. ಹುಯೇನ್‌ತ್ಸಾಂಗನ ಭ್ರಮಣ ವೃತ್ತಾಂತ.

*೯. 'ಅಶೋಕ' ಪುಟ ೧೨ ಲೇ- ಶ್ರೀ। ಭಗವತೀ ಪ್ರಸಾದ ಪಾಂಥರೀ.

*೧೦. ಭಾಗ ೨, ಖಂಡ ೪, ಪ್ರಕರಣ ೧೬, ೧೩೫ ೭, ಪುಟ ೬೬೫.

ಇಂಥಹ ಅನಿಶ್ಚಿತ ಪರಿಸ್ಥಿತಿಯಲ್ಲಿ ನಾನು ಮಹೇಂದ್ರನನ್ನು ಅಶೋಕನ ಸಹೋದರನೆಂದು ಸ್ವೀಕರಿಸಿದ್ದೇನೆ. ಈ ಭಾವನೆಯು ಮಾನ್ಯತೆಗಾಧಾರವಾಗಿ 'ಉತ್ತರೀ ಬೌದ್ಧ ಗ್ರಂಥ'ಗಳಿವೆ. ಈ ಗ್ರಂಥಗಳ ಆಧಾರದಿಂದಲೇ ನಾನು ಅಶೋಕನ ಧರ್ಮಗುರುವಿಗೆ 'ಉಪಗುಪ್ತ'ನೆಂಬ ಹೆಸರಿತ್ತಿದ್ದೇನೆ. ಕೆಲವೆಡೆಗಳಲ್ಲಿ *೧೧'ತಿಷ್ಯ'ನೆಂಬ ಹೆಸರೂ ಕೇಳಿಬರುತ್ತದೆ, ಆದರೆ ಆವೆರಡೂ ಹೆಸರುಗಳು ಸಂಭವತಃ ಒಬ್ಬನವೇ ಆಗಿರಬೇಕು. ನಾನೋರ್ವನೇ ಅಲ್ಲ, ಇನ್ನೂ ಹಲವಾರು ಲೇಖಕರು ಮಹೇಂದ್ರನನ್ನು ಸಾಮ್ರಾಟನ ತಮ್ಮನೆಂದು ಸ್ವೀಕರಿಸಿದ್ದಾರೆ. ಮಹೇಂದ್ರನು ತಮ್ಮನಾದ ಕಾರಣ ಸಂಘಮಿತ್ರಾಳು ತಂಗಿಯಾಗಲೇ ಬೇಕು. ಏಕೆಂದರೆ ಸಂಘಮಿತ್ರಾ ಮತ್ತು ಮಹೇಂದ್ರರು ಒಂದೇ ತಾಯಿಯ ಮಕ್ಕಳೆಂಬುದು ನಿರ್ವಿವಾದವಾಗಿದೆ. ಸಂಘಮಿತ್ರಾಳನ್ನು ಅಶೋಕನ ತಂಗಿಯೆಂದು ಕರೆಯುಲು ಇನ್ನೂ ಒಂದು ಕಾರಣವಿದೆ. ಮಹೇಂದ್ರ ಮತ್ತು ಸಂಘಮಿತ್ರಾರನ್ನು ಪುತ್ರ-ಪುತ್ರಿಯರೆಂದು ಕರೆಯುವ 'ಮಹಾವಂಶ'ದನುಸಾರವಾಗಿ ಸಂಘಮಿತ್ರಾಳ ಮದುವೆಯಾಗಿತ್ತು. ಅವಳ ಗಂಡನ ಹೆಸರು 'ಅಗ್ನಿಬ್ರಹ್ಮ' ಮತ್ತು ಮಗನ ಹೆಸರು 'ಸುಮನ' ಎಂದು. ಅಗ್ನಿಬ್ರಹ್ಮ ಮತ್ತು ಸುಮನರ ಬಗ್ಗೆ ಅನೇಕ ಕಥೆಗಳಿವೆ. ತಿಥಿಗಳ ಗಲಿಬಿಲಿಯಿಂದ ಯಾವುದನ್ನೂ ನಂಬಲಾಗುವುದಿಲ್ಲ. 'ಮಹಾವಂಶ'ದಲ್ಲಿ 'ಸಂಘಮಿತ್ರಾ'ಳು ೫೯ ವರ್ಷ ಲಂಕೆಯಲ್ಲಿದ್ದಳೆಂದು ಉಲ್ಲೇಖವಿದೆ. ಮೃತ್ಯುವಿನ ಸಮಯದಲ್ಲಿ ಇದೇ ಗ್ರಂಥದಲ್ಲಿ ಅಶೋಕನ ಪಟ್ಟಾಭಿಷೇಕದ ೧೫ನೇ ವರ್ಷ ಲಂಕೆಗೆ ಹೋದಳೆಂದು ತಿಳಿಸಲಾಗಿದೆ. [ಮಹಾವಂಶ ಪ್ರಕರಣ ೨೦ನೇ] ಇದರ ಮೇರೆಗೆ ಕಲಿಂಗ ಯುದ್ಧದ ಸಮಯದಲ್ಲಿ ಅವಳಿಗೆ ೧೦ ವರ್ಷ ಪ್ರಾಯವಾಗಿತ್ತು. ಏಕೆಂದರೆ ಕಲಿಂಗ ಯುದ್ಧವು ಅಭಿಷೇಕದ ೮ ವರ್ಷಗಳ ನಂತರವಾಯ್ತು. 'ಮಹಾವಂಶ'ದ ಅನುಸಾರದಂತೆ ಸಂಘಮಿತ್ರಾಳು ಭಿಕ್ಷುಣಿಯಾದಾಗ ಅವಳಿಗೆ ೧೯ ವರ್ಷ ಪ್ರಾಯ, ಮತ್ತವಳು ಅಭಿಷೇಕದ ೬ನೇ ವರ್ಷ ಸಂಘದಲ್ಲಿ ಪ್ರವಿಷ್ಟಳಾದಳು. ಅರ್ಥಾತ್ ಕಲಿಂಗ ಯುದ್ಧ ಪೂರ್ವ, [ಮಹಾವಂಶ ಪ್ರಕರಣ ೫ನೇ] ಈ ಮಾನ್ಯತೆಯು ಸಾಧಾರಣವಾಗಿ ಸರಿಯಲ್ಲ, ಏಕೆಂದರೆ ಯುದ್ಧ ಪೂರ್ವದಲ್ಲಿ ಅಶೋಕನು ಬ್ರಾಹ್ಮಣ

*೧೧. 'ಭಾರತೀಯ ಇತಿಹಾಸ ಕಿ ರೂಪರೇಖಾ' ಪುಟ ೬೬೫.

ಧರ್ಮಾನುಯಾಯಿಯಾಗಿದ್ದನು. ಒಂದುವೇಳೆ ಈ ಮಾತನ್ನು ಸತ್ಯವೆಂದು ಕೊಂಡರೆ ಯುದ್ಧ ಸಮಯದಲ್ಲವಳಿಗೆ ೨೦, ವರ್ಷ ಪ್ರಾಯವಾಗುತ್ತದೆ. *೧೨'ಮಹಾವಂಶ'ದ ಪ್ರತಿಯೊಂದು ಮಾತೂ ಪ್ರಾಮಾಣಿಕ ಹಾಗೂ ವಿಶ್ವಾಸನೀಯವಲ್ಲವೆಂದು ನಾವು ತಿಳಿಯಬಹುದು.

ಇಷ್ಟೇ ಅಲ್ಲದೆ ನಾನು ಸಂಘಮಿತ್ರಾ ಮತ್ತು ಕಲಿಂಗ ಯುವರಾಜನ ಪ್ರಣಯ ಪ್ರಸಂಗವನ್ನು ನಿರೂಪಿಸಿದ್ದೇನೆ. ಇತಿಹಾಸವು ಈ ವಿಷಯದ ಬಗ್ಗೆ ಮೌನವಾಗಿದೆ. ಬೌದ್ಧ ಕಥೆ ಯಾ ಗ್ರಂಥಗಳಲ್ಲಿ ಈ ವಿಷಯದ ಬಗ್ಗೆ ಉಲ್ಲೇಖವಿಲ್ಲ. ಆದರೆ ಒಡಿಸ್ಸಾದ ಲೇಖಿಕೆ ಶ್ರೀಮತಿ ಸರಸ್ವತಿದೇವೀ ಪಾಣಿಗ್ರಾಹಿ ಅವರು ತನ್ನ 'ಕಲಿಂಗ-ವಿಜಯ' ಪುಸ್ತಕದಲ್ಲಿ ಈ ಪ್ರಣಯ ಪ್ರಸಂಗವನ್ನು ನಿರೂಪಿಸಿದ್ದಾರೆ. ಅವರು ತನ್ನ ಪುಸ್ತಕದಲ್ಲಿ ಸಂಘಮಿತ್ರಾಳನ್ನು ಅಶೋಕನ ಮಗಳೆಂದು ಸ್ವೀಕರಿಸಿದ್ದಾಗ್ಯೂ, ಮಹಾವಂಶದ ತಿಥಿಗಳ ಗಲಿಬಿಲಿಯಿಂದ ಇದು ಸಂಭವವಾಗುವುದಿಲ್ಲ. ಏಕೆಂದರೆ ಆ ಸಮಯದಲ್ಲವಳ ಪ್ರಾಯವು ೧೦ ವರ್ಷವಾದರೆ ಪ್ರಣಯ ಪ್ರಸಂಗ ಉಂಟಾಗಲು ಸಾಧ್ಯವೇ ಇಲ್ಲ. ೨೦ ವರ್ಷ ಪ್ರಾಯವಾದರೆ ಅವಳ ಪತಿ ಅಗ್ನಿಬ್ರಹ್ಮ ಮತ್ತು ಮಗ ಸುಮನ ಅವಳೊಟ್ಟಿಗಿದ್ದಿರಬೇಕು. ಅಂದ ಬಳಿಕ ಈ ಪ್ರಣಯ ಪ್ರಸಂಗ ಬರಲು ಸಾಧ್ಯವೇ ಇಲ್ಲ. ಆದುದರಿಂದ ನಾನು 'ಮಹಾವಂಶ'ದ ಯಾವೊಂದು ಮಾತನ್ನೂ ನಂಬದೇ ಸಂಘಮಿತ್ರಾಳನ್ನು ಅಶೋಕನ ಕಿರಿಯ ತಂಗಿ ಎಂದೇ ಸೂಚಿಸಿದ್ದೇನೆ. ಸಂಘಮಿತ್ರಾಳು ನಿಸ್ಸಂದೇಹವಾಗಿ ಅಶೋಕನ ವಿಮಾತಜ ಅರ್ಥಾತ್ ಮಲತಾಯಿ ಮಗಳಾಗಿರಲೇ ಬೇಕು ಯಾಕೆಂದರೆ, ಮಹೇಂದ್ರನು ಸಾಮ್ರಾಟನ ಮಲತಾಯಿ ಮಗ. ಈ ಪ್ರಯೋಗವನ್ನೂ ನಾನು ಅಶೋಕನ ಹೃದಯಕ್ಕುಂಟಾದ ಪ್ರಬಲ ಅಘಾತವನ್ನು ಚಿತ್ರಿಸಲಿಕ್ಕಾಗಿಯೇ ತೆಗೆದು ಕೊಂಡಿದ್ದೇನೆ.

ಇತಿಹಾಸ, ಲೇಖ, ಕಥೆಗಳು ಅಶೋಕನ ಹಲವಾರು ಸಹೋದರರ ಇರುವಿಕೆಯನ್ನು ಮಾತ್ರ ತಿಳಿಸುತ್ತದೆ. ಆದರೆ ತಂಗಿಯ ಇರುವಿಕೆಯನ್ನು

---

*೧೨. ನೋಡಿರಿ ಪುಟ ೨೩೪, ೨೩೮ ಮತ್ತು ೨೩೪. 'ಅಶೋಕ' ಲೇ- ಶ್ರೀ। ಭಗವತೀ ಪ್ರಸಾದ ಪಾಂಥರೀ.

'ಮಹಾವಂಶ'ವೊಂದು ಮಾತ್ರ ತಿಳಿಸುತ್ತದೆ. ನಾಲ್ಕನೇ ಪ್ರಕರಣದಲ್ಲಿ "ರಾಜನು ಸ್ವಪ್ನದಲ್ಲಿ ತನ್ನ ಆತ್ಮವನ್ನು ತುಂಬಿಯು ನರಕದಲ್ಲಿ ದೂಡಿದ ಹಾಗೆ ಕಂಡು ವ್ಯಾಕುಲಗೊಂಡನು. ಈ ಚಿಂತಾವಿಚಾರವನ್ನು ಕೊನೆಗಾಣಿಸಲು ಯೋಚಿಸುತ್ತಿರುವಾಗ ಅವನ ತಂಗಿಯಾದ 'ಪಾವನಿ ಭಿಕ್ಷುಣಿ'ಯು ಬಂಧನದಿಂದ ಮುಕ್ತಳಾದ ಆನಂದಿಯು ವಾಯುವೇಗದಲ್ಲಿ ಬಂದು ರಾಜನಿಗೆ ಹೇಳಿದಳು— ನೀನು ಮಾಡುತ್ತಿರುವ ಕೆಲಸ ಅರ್ಥಹೀನವಾಗಿದೆ. ಧರ್ಮಪ್ರಮುಖರಾದ ಆಚಾರ್ಯರಿಂದ ಇದರ ಪ್ರಾಯಶ್ಚಿತ್ತವನ್ನು ಮಾಡಿಸು. ಅವರಿಗೆ ಪೂರ್ಣ ಸಹಯೋಗ ಕೊಟ್ಟು *೧೩'ಸತ್ಯಧರ್ಮ' [ಬೌದ್ಧ ಧರ್ಮ]ದ ಪಕ್ಷ ಗ್ರಹಣ ಮಾಡು. ಹೀಗೆ ಮಾಡಿದಲ್ಲಿ ನಿನಗೆ ಶಾಂತಿ ಲಭಿಸುವುದು ಎಂದಳು" ಎಂದು ಹೇಳಿದೆ. ಅಶೋಕನು ತಂಗಿಯ ಮಾತನ್ನು ಅಕ್ಷರಶಃ ಪಾಲಿಸಿದನಾಗಿ ಎಂದು ಬರೆದಿದ್ದಾರೆ.

ಈ ಕಥೆ ಸತ್ಯವೇ ಇರಲಿ, ಅಸತ್ಯವೇ ಇರಲಿ, ಆದರೆ ಅಶೋಕನಿಗೊಬ್ಬ ತಂಗಿ ಇದ್ದಳೆಂದು ಸಿದ್ಧವಾಗುತ್ತಿದೆ. ಮೇಲೆ ಹೇಳಿದ ಮಾತನ್ನು ಕೆಲವು ಶಿಲಾಲೇಖಗಳೂ ಪುಷ್ಟೀಕರಿಸುತ್ತವೆ. ಆದುದರಿಂದ ನನ್ನ ಕಲ್ಪನೆಗಳು ಬರೇ ಕಲ್ಪನೆಗಳಷ್ಟೇ ಅಲ್ಲದೆ ಅವರಲ್ಲಿ ಸತ್ಯಾಂಶವೂ ಅಡಗಿದೆ. ಮತ್ತದರ ಬುನಾದಿಯು ಸುದೃಢವಾಗಿದೆ.

ಎಲ್ಲಿ ವರೇಗೆ ಮೂಲ ಕಥಾವಸ್ತುವಿನೊಡನೆ ಈ ನಾಟಕವು ಸಂಬಂಧ ವಿಡುತ್ತದೋ ಅಲ್ಲಿ ವರೇಗೆ ವಿಷಯದ ಬಗ್ಗೆ ಮತ ಭೇದವಿಲ್ಲ. ಯಾವ ರೀತಿಯಲ್ಲಿ ಕಲಿಂಗ ಯುದ್ಧವು ಐತಿಹಾಸಿಕ ಘಟನೆಯೋ, ಅಂತೆಯೇ ಅಶೋಕನ ಹೃದಯ ಪರಿವರ್ತನೆಯೂ ಒಂದು ಘಟನೆ. ಅವನ 'ಧರ್ಮಲಿಪಿ'ಯ ಭಾಷೆಯು ಅವನ ಪಶ್ಚಾತ್ತಾಪದ ಸಾಕ್ಷಿಯಾಗಿದೆ. ಅವನ ಪಶ್ಚಾತ್ತಾಪವು ಯಾವುದೋ ಬೆಲೆಯಿಲ್ಲದ ಭಾವುಕತೆಯ ಪರಿಚಯ ಕೊಡದೆ ಓರ್ವ ಮಹಾನ್ ರಾಜನೀತಿಜ್ಞ ಹಾಗೂ ಮಹಾನ್ ಮಾನವನ ಹೃದಯ ಮಂಥನದ ಕುರುಹಾಗಿದೆ. ಕಲಿಂಗ ಯುದ್ಧದಲ್ಲೇನಾಯ್ತು ಎಂಬುದನ್ನು 'ತ್ರಯೋದಶ ಪ್ರಧಾನ ಶಿಲಾಲೇಖ'ದಲ್ಲಿ ಬರೆದಿದ್ದಾರೆ—

---

*೧೩. 'ಅಶೋಕ' ಲೇ- ಶ್ರೀ। ಭಗವತೀ ಪ್ರಸಾದ ಪಾಂಥರೀ. ಪುಟ ೧೧೦, ೧೧೧.

*೧೪"ದೇವತೆಗಳಿಂದಲೂ ಪ್ರೀತಿಸಲ್ಪಡುವ ಪ್ರಿಯದರ್ಶಿ ರಾಜನು ಅಭಿಷಿಕ್ತನಾದ ಎಂಟನೇ ವರ್ಷದಲ್ಲಿ ಕಲಿಂಗವನ್ನು ಗೆದ್ದನು. ಇಲ್ಲಿಂದ ಒಂದೂವರೆಲಕ್ಷ ಜನರು ಹೊರಗೆ ಕೊಂಡುಹೋಗಲ್ಪಟ್ಟಿದ್ದರು. ಒಂದುಲಕ್ಷ ಜನರು ಗಾಯಗೊಂಡರು ಮತ್ತು ಇದರ ಎಷ್ಟೋ ಪಾಲು ಜನರು ಸತ್ತಿದ್ದರು [ಲೆಕ್ಕವೇ ಇಲ್ಲ] ತದನಂತರ ಕಲಿಂಗವು ಸಾಮ್ರಾಜ್ಯಕ್ಕೆ ಸೇರಿಸಲ್ಪಟ್ಟಿತು. [ಕಲಿಂಗ ವಿಜಯವಾಯ್ತು] ಅಂದಿನಿಂದ ದೇವತೆಗಳ ಪ್ರಿಯನಾದ ಈ ರಾಜನ ಧರ್ಮಾಚರಣೆ ಬೆಳೆಯಿತು. ಧರ್ಮದಲ್ಲಿ ಸ್ನೇಹವುಂಟಾಯಿತು ಅಲ್ಲದೆ ಧರ್ಮವು ಅತ್ಯಧಿಕ ವಿಸ್ತಾರವಾಯ್ತು."

ಇದೇ ಶಿಲಾಲೇಖದಲ್ಲಿ ಮುಂದೆ—*೧೫"ಕಲಿಂಗ ಯುದ್ಧದಲ್ಲಿ ಮಡಿದ, ಕೈದುಮಾಡಲ್ಪಟ್ಟ ಜನಸಂಖ್ಯೆಯ ೧೦೦ನೇ ಯಾ ೧೦೦೦ನೇ ಒಂದು ಭಾಗದ ನಾಶವಾದಾಗ್ಯೂ ಮಹಾರಾಜನಿಗೆ ಅಪಾರ ದುಃಖವಾಗುತ್ತದೆ" ಎಂದುಲ್ಲೇಖಿಸಿದ್ದಾರೆ.

*೧೬"ಯಾವುದರಲ್ಲಿ ಧರ್ಮದ ವಿಜಯವು ಮುಖ್ಯವೋ ಅದನ್ನೇ ದೇವತೆಗಳಿಗೆ ಪ್ರಿಯನಾದವನು ಮುಖ್ಯವೆಂದು ಬಗೆಯುತ್ತಾನೆ ಮತ್ತು ದೇವತೆಗಳಿಂದಲೂ ಪ್ರೀತಿಸಲ್ಪಡುವ ಈ ರಾಜನಿಗೆ ಇಲ್ಲಿ ಮತ್ತು ಎಲ್ಲಾ ಹಂತದಲ್ಲಿಯೂ ನೂರಾರು ಯೋಜನ ದೂರದಲ್ಲಿ ಅಸೋರ್ [ಪ. ಏಶಿಯಾ] ಎಂಬಲ್ಲಿ 'ಅಂತಿಯೋಕ'ನೆಂಬ 'ಯೋನ' ರಾಜನಿದ್ದಾನೆ. ಅವನ ಸುತ್ತಲೂ ನಾಲ್ಕು ರಾಜರಿದ್ದಾರೆ. ಅವರು ತುರುಮಯ, ಅಂತಿಕಿನ್, ಮಕ, ಪುಲಿಕ ಸುಂದರ್ ಎಂಬ ಹೆಸರಿನವರು. ಅಲ್ಲದೇ ಕೆಳಗೆ [ದಕ್ಷಿಣದಲ್ಲಿ] ಚೋಳ, ಪಾಂಡ್ಯ, ತಾಮ್ರಪರ್ಣಿಯ ವರೆಗೆ ಅಂತೆಯೇ ಇಲ್ಲಿ ರಾಜವಿಷಯದೊಂದಿಗೆ [ಯಾ ವಿಷ ವಾಜ್ರಿ] ಯೋನಕುಂಭಜದಲ್ಲಿ, ನಾಭಕದಲ್ಲಿ, ನಾಭಕಮುಕ್ತಿಯಲ್ಲಿ, ಭೋಜಪಿತಿನಕಾದಲ್ಲಿ, ಆಂಧ್ರ ಪುಲಿಂದದಲ್ಲಿ [ಎಲ್ಲಾ ಕಡೆಯಲ್ಲಿಯೂ]

---

*೧೪. 'ಅಶೋಕಾಲೇ-ಶ್ರೀ। ಭಗವತೀ ಪ್ರಸಾದ ಪಾಂಥರೀ. ಪುಟ೧೦೪.

*೧೫. 'ಬೌದ್ಧ ಕಾಲೀನ ಭಾರತ' ಶ್ರೀ। ಜನಾರ್ಧನ ಭಟ್ಟ, M.A., ಪುಟ ೧೨೪.

*೧೬. 'ಭಾರತೀಯ ಇತಿಹಾಸ ಕಿ ರೂಪರೇಖಾ' ಜಯಚಂದ್ರ ವಿದ್ಯಾಲಂಕಾರ. ಭಾಗ ೨, ಖಂಡ ೪, ಪ್ರಕರಣ ೧೬, ೧೩೫ ಎ., ಪುಟ ೬೬೬.

ಕೀರ್ತಿಪ್ರಸಿದ್ಧನಾಗಿ, ಎಲ್ಲಾ ಕಡೆಯಲ್ಲಿಯೂ ಈ ದೇವತೆಗಳಿಂದ ಪ್ರೀತಿಸಲ್ಪಡುವ ರಾಜನ ನೀತಿಯನ್ನು ಅನುಕರಿಸಲಾಗುತ್ತಿದೆ. ಎಲ್ಲೆಲ್ಲೂ ಈ ರಾಜನ ದೂತನು ಹೋಗದಿದ್ದಾಗ್ಯೂ ಎಲ್ಲರೂ ರಾಜನ ನೃತ್ತ ಮತ್ತು ವಿಧಾನ ಹಾಗೂ ಧರ್ಮಾನುಶಾಸನ ಕೇಳಿ ಆಚರಣೆ ಮಾಡುತ್ತಾರೆ. ಹೀಗೆ ಈ ರಾಜನಿಗೆ ಎಲ್ಲಾ ಕಡೆಯಲ್ಲಿಯೂ 'ಪ್ರೀತಿರಸಪೂರ್ಣ' ವಿಜಯವು ಪ್ರಾಪ್ತವಾಗಿದೆ."

ನಿಜವಾಗಿಯೂ ಈ ಪರಿವರ್ತನೆ ಅದ್ಭುತ ಮತ್ತು ಮಹಾನ್ ಆಗಿದೆ. ಆದರೆ ಇದು ಒಂದೇ ಬಾರಿ ಜರಗಲಿಲ್ಲ. ಇದು ಹೇಗಾಯ್ತು ಎಂಬುದನ್ನು ಅಶೋಕನು ಕಲಿಂಗ ವಿಜಯದ ನಾಲ್ಕನೇ ವರ್ಷದಲ್ಲಿ ಬರೆಯಿಸಿದ 'ಧರ್ಮಲಿಪಿ' [ಅಭಿಲೇಖ]ಯಲ್ಲಿ ಸುಂದರ ಹಾಗೂ ಸ್ಪಷ್ಟ ರೀತಿಯಲ್ಲಿ ವರ್ಣನೆ ಮಾಡಿದ್ದಾನೆ—

ಎರಡೂವರೆ ವರ್ಷದಿಂದ ನಾನು ಶ್ರಾವಕ [ಉಪಾಸಕ]ನಾಗಿದ್ದಾಗ್ಯೂ ಪ್ರಕ್ರಮ [ಉದ್ಯಮ] ಮಾಡಲಿಲ್ಲ. ಸಂಘದ ಹತ್ತಿರ ಸೇರಿ ಉದ್ಯಮ ಮಾಡಲು ತೊಡಗಿ ಒಂದು ವರ್ಷ ಮೇಲಾಯ್ತು. ಇದರಿಂದಾಗಿಯೇ ಜಂಬೂದ್ವೀಪದ [ಭಾರತದ] ಮಾನವರು ನಿಜವಾದ ಸ್ವರ್ಗವನ್ನು ಕಂಡರು. ಇದೇ ಉದ್ಯಮದ ಫಲ. ದೊಡ್ಡವರೇ ಈ ಫಲ ಪಡೆಯಲು ಸಾಧ್ಯವೆಂದೇನಿಲ್ಲ. ಬಡವರೂ ಉದ್ಯಮದಿಂದ ವಿಪುಲಸ್ವರ್ಗವನ್ನು ಕಾಣಬಹುದು. ಆದುದರಿಂದಲೇ ಕಿರಿಯ, ಹಿರಿಯ, ಶ್ರೀಮಂತ, ಬಡವ ಎಲ್ಲರೂ ಉದ್ಯಮಿಗಳಾಗಬೇಕೆಂದು ಉಪದೇಶಿಸಲಾಯ್ತು. ಇದು ನಮ್ಮ ಉದ್ಯಮ. ಇದು ಎಂದೆಂದೂ ಚಿರಸ್ಥಾಯಿಯಾಗಬೇಕೆಂದು ಗಮನದಲ್ಲಿಡಬೇಕು. ಈ ಕಾರ್ಯವು ನಿಶ್ಚಯವಾಗಿ, ನಿರಂತರವಾಗಿ, ಹೆಚ್ಚಾಗಿ, ದಿನದಲ್ಲಿ ಎರಡು ಪಟ್ಟಾದರೆ ರಾತ್ರಿಯಲ್ಲಿ ನಾಲ್ಕು ಪಟ್ಟಿನಂತೆ ಬೆಳೆಯುತ್ತದೆ.

ಈಗ ಅಶೋಕನು ಕಲಿಂಗ ವಿಜಯ ಏಕೆ ಮಾಡಿದನು? ಎಂಬ ಪ್ರಶ್ನೆ ಏಳುತ್ತದೆ. ಈ ನಾಟಕಕ್ಕೂ ಅದಕ್ಕೂ ಏನೂ ಸಂಬಂಧವಿಲ್ಲದಿದ್ದರೂ, ಈ ಪ್ರಶ್ನೆ ಇಲ್ಲಿ ಅಸಂಗತವಲ್ಲ. ಇದರ ಉತ್ತರವೂ ಸರಳವಾಗಿದೆ. ಅಶೋಕನು ಕುಶಲ ರಾಜನೀತಿಜ್ಞನಾಗಿದ್ದನು. ಅವನು ಚಾಣಕ್ಯನ ನೀತಿಯನ್ನು ಪ್ರಯೋಗಿಸಿ ಸಮಸ್ತ ಭಾರತವನ್ನು ಮೌರ್ಯ ವಂಶದ ಏಕಚಕ್ರಾಧಿಪತ್ಯದಲ್ಲಿಡಬೇಕೆಂದು

ಬಯಸಿದನು. ಕಲಿಂಗ ರಾಜ್ಯವು ಮೌರ್ಯ ರಾಜ್ಯಕ್ಕೆ ಸೇರುವ ಮೊದಲು ಮಗಧದ ಅಧೀನವಿತ್ತೆಂದು ಒಳ್ಳೆಯ ಇತಿಹಾಸ ಓದಿದರೆ ತಿಳಿಯುತ್ತದೆ ಚಂದ್ರಗುಪ್ತನು ನಂದರ ವಿರೋಧದ ಸಂಚು ಹೂಡುತ್ತಿರುವಾಗಲೇ ಕಲಿಂಗವು ಸ್ವತಂತ್ರವಾಯ್ತು. ಚಾಣಕ್ಯನು ಚಂದ್ರಗುಪ್ತ ಮತ್ತು ಭಿಂದುಸಾರರ ಕಾಲ ದಲ್ಲಿ ಅದನ್ನು ತನ್ನ ರಾಜ್ಯದಲ್ಲಿ ಸೇರಿಸಲು ನಿರಂತರವಾಗಿ ಪ್ರಯತ್ನಿಸಿದ್ದನು. ತಿಬೇಟಿನ ಲಾಮಾ ತಾರಾನಾಥರ ಬೌದ್ಧ ಧರ್ಮ ಇತಿಹಾಸದಲ್ಲಿ [ಅಂಕ ೧೯] ಬರೆದಿದ್ದಾರೆ— "ಅವನು ಕಡಿಮೆಯೆಂದರೆ ೧೬ ರಾಜಧಾನಿಯ ರಾಜಮಂತ್ರಿ ಯರನ್ನು ಕಿತ್ತೊಗೆದು ಒಂದು ಬಹಳ ದೊಡ್ಡ ಯುದ್ಧದ ನಂತರ ಪೂರ್ವ ಪಶ್ಚಿಮದಲ್ಲಿಯ ಸಂಪೂರ್ಣ ಭೂಮಿಯನ್ನು ರಾಜಾ ಭಿಂದುಸಾರನ ರಾಜ್ಯಕ್ಕೆ ಸೇರಿಸಿದನು." ಆದರೆ ಕಲಿಂಗವನ್ನು ಗೆಲ್ಲಲವನಿಂದಾಗಲಿಲ್ಲ. ಅವನು ಜಗತ್ತಿ ನಲ್ಲಿಯೇ ಏಕೈಕ ಮೌರ್ಯ ಸಾಮ್ರಾಟನಾಗಿ ಮೆರೆಯುತ್ತಿರಲೂ ತನ್ನ ಶಕ್ತಿಶಾಲೀ ಗಜಬಲ ಮತ್ತು ಜಲಸೇನೆಯಿಂದಾಗಿ ಕಲಿಂಗವು ಮಗಧದಿಂದ ಲೋಹವನ್ನು ತೆಗೆದುಕೊಳ್ಳುತ್ತಿದ್ದಿತು. ಚಾಣಕ್ಯನ ಚಾತುರ್ಯದ ನೀತಿ ಯನ್ನು ಪೂರೈಸಲಿಕ್ಕಾಗಿ ಅಶೋಕನು ಕಲಿಂಗ ವಿಜಯ ಮಾಡಲೇ ಬೇಕಾಗುತ್ತಿತ್ತು. ಒಂದೊಮ್ಮೆ ಅವನು ಹಾಗೆ ಮಾಡದಿರುತ್ತಿದ್ದರೆ ಕಲಿಂಗವು ತನ್ನ ಸಮೃದ್ಧಿ ಮತ್ತು ಶಕ್ತಿಯ ಕಾರಣದಿಂದಾಗಿ ಮೌರ್ಯ ಸಾಮ್ರಾಜ್ಯಕ್ಕೇ ಘಾತಕವಾಗುತ್ತಿತ್ತು.

ಸಾಮ್ರಾಜ್ಯವಾದದ ಈ ನೀತಿಯು ಒಳ್ಳೆಯದೋ? ಕೆಟ್ಟದೋ? ಎಂಬ ವಿಚಾರದ ಚರ್ಚೆ ಇಲ್ಲಿ ಅಸಂಗತ. ಆದರೆ ಕಲಿಂಗ ಯುದ್ಧದ ಕ್ರೂರತೆ ಮತ್ತು ಬರ್ಬರತೆಯಿಂದಾಗಿ ಅಶೋಕನ ಮನಸ್ಸು ತೃಸ್ತವಾಯ್ತು. ಮುಂದೆಂದೂ ಯುದ್ಧ ಮಾಡಲಾರೆನೆಂದವನು ಘೋಷಣೆ ಮಾಡಿದನು. ಭೇರಿಯ ಮರ್ಮ ಭೇದೀ ನಾದವು ಧರ್ಮಘೋಷದಲ್ಲಿ ಬದಲಾಯ್ತು. ಈ ಪ್ರಕಾರ ಸಾಮ್ರಾಜ್ಯ ಕಟ್ಟಲ್ಪಟ್ಟರೂ ಅವರ ತಳವು ಅಹಿಂಸೆ, ಸಹಿಷ್ಣುತೆ, ಮೃದುತೆ, ಉದಾರತೆ ಗಳಿಂದ ತುಂಬಿದ್ದಿತು. ಇಂದಿನ ಯುಗವನ್ನು ಸಾಧಾರಣ ಅಶೋಕ ಕಾಲೀನ ಸಮಯಕ್ಕೆ ಹೋಲಿಸಬಹುದು. "ಸಾಮ್ರಾಜ್ಯ ಲಿಪ್ಸತೆಯು ಮಾನವನನ್ನು ತೃಸ್ತನನ್ನಾಗಿಸಿದೆ. ಮಾನವನಿಂದು ಏಕಮಾತ್ರ ಶಸ್ತ್ರವನ್ನು ಅವಲಂಬಿಸುತ್ತಿ ದ್ದಾನೆ. ಶಸ್ತ್ರಗಳ ಸಂಘರ್ಷಣದಿಂದ ಒಬ್ಬನು ಗಾಯಗೊಂಡು ಬೀಳುತ್ತಾನೆ.

ಇನ್ನೊಬ್ಬನು ಮಾನವತೆ ಕಳೆದುಕೊಳ್ಳುತ್ತಾನೆ." ತನ್ನ ಮುಂದಿನ ಪೀಳಿಗೆಗಾಗಿ ಅಶೋಕನು ಕೊಟ್ಟ ನೀತಿ ಎಷ್ಟು ಮಹತ್ವಪೂರ್ಣವಾಗಿದೆ.

"ನನ್ನ ಪುತ್ರರು ಮತ್ತು ಪ್ರಜಾ ಪುತ್ರ-ಪೌತ್ರರು ಶಸ್ತ್ರಗಳಿಂದ ಎಂದೂ ಜಯುವನ್ನು ಗಳಿಸದಿರಲಿ. ಅವರು ಉದಾರತೆ [ಶಾಂತಿ] ಸಹಿಷ್ಣುತೆ ಅಥವಾ ದಂಢಷಾವು [ಮೃದುತೆ]ದಿಂದಲೇ ಆನಂದಿಸಬೇಕು. ಒಂದೊಮ್ಮೆ ಅವರಿಗೆ ವಿಜಯುವೇ ಬೇಕಿದ್ದರೆ ಧರ್ಮವಿಜಯುವನ್ನೇ ಅವರು ತಮ್ಮ ವಿಜಯುವೆಂದು ತಿಳಿಯಲಿ. ಇದೇ ವಿಜಯುವಲ್ಲವರು ಆನಂದೋತ್ಸಾಹ ಮಾಡಲಿ."

ಆದರೆ ಈ ಸಂದೇಶದ ಅರ್ಥ ನಿಷ್ಕ್ರಿಯತೆಯಲ್ಲಿ ಕ್ರಿಯೆ ಮತ್ತು ಈ ನಾಟಕದ ಭಿಕ್ಷುಣಿಯ ಮಾತಿನಲ್ಲಿ— "ಕ್ರಿಯೆಯಲ್ಲಿ ಅಗ್ನಿಯಿದೆ, ಅಗ್ನಿಯೇ ಜೀವನದ ಶರ್ತ [ಪಣ] ಅದು ಬೆಳಕನ್ನೀಯಲೂ ಬಲ್ಲುದು; ಸುಡಲೂ ಬಲ್ಲುದು. ಇನ್ನೊಂದು ವಿಚಾರವೇನೆಂದರೆ ಅಗ್ನಿಯಲ್ಲಿ ಕೆಲವರು ತನ್ನನ್ನು ತಾನು ಸುಟ್ಟುಕೊಳ್ಳುತ್ತಾರೆ. ಇನ್ನು ಕೆಲವರು ತಮ್ಮ ದೌರ್ಬಲ್ಯ ವನ್ನು ಸುಟ್ಟುಕೊಳ್ಳುತ್ತಾರೆ."

ನೈಜವಾಗಿ ಈ ನಾಟಕಕ್ಕೆ ಈ ಕಥೆಯೇ ಮೂಲ. ನನ್ನ ಮನಸ್ಸಿನಲ್ಲಿ ದ್ದಾಗ್ಯೂ ಇದು ಬರೆಯಲ್ಪಟ್ಟಿತು. ಮೂರು ಬಾರಿ ಮೂರು ಸ್ವತಂತ್ರ ಏಕಾಂಕಗಳನ್ನು ಬರೆದ ಕಾರಣ ನಾಟಕವನ್ನು ಮೂರೇ ಅಂಕಗಳಲ್ಲಿ ಮುಗಿಸಿ ದ್ದೇನೆ. ಈ ರೀತಿಯಲ್ಲಿ ದೃಶ್ಯಗಳ ಪ್ರಯೋಗವು ಸ್ವಲ್ಪವೂ ಆಗಲಿಲ್ಲ. ಹಾಂ ಕೆಲವು ಸಂಗತಿಗಳನ್ನು ಸ್ಪಷ್ಟೀಕರಿಸಲು 'ಪ್ರಾಸ್ತಾವಿಕ' ಮತ್ತು 'ಉಪಸಂಹಾರ' ಗಳನ್ನು ಜೋಡಿಸಿದ್ದೇನೆ. ಅವುಗಳು ಇಲ್ಲದಿದ್ದಾಗ್ಯೂ ನಾಟಕವು ತನ್ನಿಂದ ತಾನೇ ಪೂರ್ಣವಾಗಿದೆ.

ಅಂತ್ಯದಲ್ಲಿ ಈ ನಾಟಕದ ಸೃಜನೆಗೆ ಕಾರಣರಾದ ಇವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ. ವಿಶೇಷತಃ ಆಕಾಶವಾಣಿಯ ಅಧಿಕಾರಿಗಳಿಗೆ ಪ್ರೀತಿ ಪೂರ್ವಕವಾಗಿ ಎರಡು ಪದ್ಯಗಳನ್ನು ಬರೆದುಕೊಟ್ಟ ಸಹೋದರ ಚಿರಂಜೀತ ನಿಗೂ ನಾನು ತುಂಬಾ ಕೃತಜ್ಞ. ನಾನು ಒಟ್ಟುಮಾಡಿದ ಈ ನಾಟಕದ ಮೂಲವಸ್ತುಗಳ ಗ್ರಂಥಕರ್ತರಿಗೆ ನಾನು ಅಪಾರ ಚಿರಋಣಿ.

೨ನೇ ಸಂಸ್ಕರಣ:—

ಈ ವರ್ಷ ೧೯೫೬ನೇ ಇಸವಿಯಲ್ಲಿ ಬುದ್ಧನ ೨೫೦೦ನೇ ಜನ್ಮದಿನಾಚರಣೆಯ ಸಮಯ ನನ್ನ ಪುಸ್ತಕದ ದ್ವಿತೀಯ ಸಂಸ್ಕರಣವಾಗುವುದು ನನ್ನ ಸೌಭಾಗ್ಯ. ಶಾಂತಿ ಸೌಖ್ಯಕ್ಕಾಗಿ ಜನರನ್ನು ಈ ಸಮಯದಲ್ಲಿ ಒತ್ತಾಯ ಪಡಿಸಿದಷ್ಟು ಇನ್ನಾವ ಸಮಯಲ್ಲೂ ಒತ್ತಾಯಪಡಿಸಿಲ್ಲ. ನಿಜವಾಗಿಯೂ ಭಾರೀ ಯುದ್ಧದ ಕಲ್ಪನೆಯಿಂದ ಕಂಪಿಸುವ ವಿಶ್ವ ಅಶೋಕನ ಚರಿತ್ರೆಯನ್ನು ಈಗ ತಿಳಿದಷ್ಟು ಇನ್ನಾವ ಸಂದರ್ಭದಲ್ಲೂ ತಿಳಿಯಲಾರದು.

[ರಂಗಮಂಚದ ದೃಷ್ಟಿಯಿಂದ ಕೆಲವೊಂದು ಸಂಶೋಧನೆ ಮಾಡಲಾಗಿದೆ]

೩ನೇ ಸಂಸ್ಕರಣ:—

ಈ ಸಂಸ್ಕರಣೆಯಲ್ಲಿ ಭಾಷೆಯ ದೃಷ್ಟಿಯಿಂದ ಒಂದೆರಡು ಸಂಶೋಧನೆ ಮಾಡಲಾಗಿದೆ ಮತ್ತು ರಂಗಮಂಚದ ದೃಷ್ಟಿಯಿಂದ ಕೆಲವೊಂದು ಸೂಚನೆ ಕೊಡಲಾಗಿದೆ.

ಸಪ್ಟೆಂಬರ ೧೯೫೭.

ವಿಷ್ಣು ಪ್ರಭಾಕರ,
[ಮೂಲ ಲೇಖಕರು]

ಪ್ರಾಸ್ತಾವಿಕ.

[ರಂಗಮಂಚವಲ್ಲಿ ಅಸ್ತಗಾಮಿ ಸೂರ್ಯನ ಲಾಲಿಮತೆಯು ಉಕ್ಕಿ ಬರುತ್ತದೆ. ಮುಂದೆ ಬರುವ ಮೃತ್ಯುವಿನಂತೆ ಅಂಧಕಾರದಲ್ಲಿ ಕ್ಷಯಿಸುತ್ತಾ ಹೋಗುತ್ತಿದ್ದಾನೆ. ದೂರದಲ್ಲಿಯ ಸೈನಿಕ ಶಿಬಿರಗಳಲ್ಲಿ ಅಗ್ನಿಯು ಶೋಣಿತ ಋತುವಿನ ಮೋಡಗಳಂತೆ ಕಾಣುತ್ತಿದೆ. ಕೆಲವೊಮ್ಮೆ ಅಗ್ನಿಯ ಕೆನ್ನಾಲಗೆಯು ಬಹಳ ಎತ್ತರದ ವರೆಗೆ ಹಾರುತ್ತಾ ಆಕಾಶವನ್ನೇ ನುಂಗುವುದೋ ಎಂಬಂತೆ ಕಾಣುತ್ತಿದೆ. ಕೆಲವೊಮ್ಮೆ ಗಿಡುಗಗಳು ಅಪಸ್ವರದಂತೆ ಭಯಂಕರ ಅಗ್ನಿ ಸಮೂಹವನ್ನು ರೆಕ್ಕೆಗಳನ್ನು ಫಡಫಡಿಸುತ್ತಾ ದಾಟುತ್ತವೆ. ಗುಂಪಿನಿಂದ ತಪ್ಪಿಹೋದ *ಗಿಡುಗಗಳು ವಾಸನೆಗೆ ಹತ್ತಿರ ಬಂದು ಪುನಃ ಅಲ್ಲಿಂದಲೇ ಹಿಂತಿರುಗುತ್ತಿದ್ದವು. ವಾತಾವರಣದ ಕೋಲಾಹಲದಲ್ಲಿ ಉತ್ತೇಜನ ಯಾ ಶಾಂತಿಯು ಲವಲೇಶವೂ ಇಲ್ಲ. ಚೀತ್ಕಾರದ ಕುತ್ತಿಗೆಯನ್ನು ಯಾರೋ ಅಮುಕಿ ಹಿಡಿದಂತೆ ಭಾಸವಾಗುವ ಮೌನ. ಬಹುಶಃ ಮಹಾನಾಶದ ಲೀಲೆ ಯನ್ನು ಕಂಡ ಶಾಂತಿದೇವಿಯು ದುಃಸ್ವಪ್ನ ಕಂಡವಳಂತೆ ಸಂಜ್ಞಾಹೀನ ಳಾಗಿದ್ದಾಳೆ. ಜವನಿಕೆಯು ಮೇಲೇರಿದ ಸ್ವಲ್ಪ ಹೊತ್ತಿನ ನಂತರ ನಿಧಾನವಾಗಿ ವೀಣೆಯ ಸ್ವರವು ಕೇಳಿಬರುತ್ತದೆ. ನಿಧಾನವಾಗಿ ವೀಣೆಯ ನಾದವು ಹತ್ತಿರ ಬಂದಂತೆ ಕೇಳುತ್ತದೆ. ಆದರೆ ಸಂಗೀತದಲ್ಲಿ, ವೀಣೆಯ ನಾದದಲ್ಲಿ ಆನಂದದ ಉದ್ರೇಕವಿಲ್ಲ. ವೇದದೆಯ ಬಿಕ್ಕಳಿಕೆಯಿಲ್ಲ. ಅದು ಸಂಗೀತದಂತೆ ಕೇಳದೆ ಚೀತ್ಕಾರ ಮಾಡುವ ಮನುಷ್ಯನ ಒಣಗಂಟಲಿನ ರೋಧನದಂತೆ ಕೇಳಿಸುತ್ತದೆ. ಆ ನಿನಾದವು ಹತ್ತಿರಕ್ಕೆ ಬಂದಂತೆ ಹೃದಯದಲ್ಲಿ ಭಯ, ಅಶಂಕೆ, ವಿಷಾದ ಮುಂತಾದುವುಗಳು ಹೃದಯವನ್ನು ಹೊಕ್ಕು ಕಂಪಿಸುತ್ತದೆ. ಅಷ್ಟರಲ್ಲಿ ಒಬ್ಬ ಗಾಯಕಿಯು ಹಾಡುತ್ತಾ ರಂಗಮಂಚವನ್ನು ಪ್ರವೇಶಿಸುತ್ತಾಳೆ. ಆ ಸ್ತ್ರೀ ನಿಜವಾಗಿಯೂ ಸುಂದರಿ. ಆದರೆ ಅವಳ ನಿರಾಶಾಪೂರ್ಣ ಅಕ್ಷಿದ್ವಯಗಳು ಮತ್ತು ಅಂಧಕಾರಪೂರ್ಣ ವದನಾರವಿಂದವನ್ನು ಕಂಡರೆ ಯಾರಿಗೂ ಭಯವಾಗದಿರದು. ಅವಳ ಕೇಶರಾಶಿಯು ಸಡಿಲಾಗಿದೆ. ತತ್ಪರಿಣಾಮವಾಗಿ ತಲೆಯಮೇಲಿದ್ದ ಬಕುಲಪುಷ್ಪಮಾಲೆಯು ತೂಗುತ್ತಿದೆ. ಅವಳ ಸೀರೆಯು

ಅಸ್ತವ್ಯಸ್ತವಾಗಿದೆ. ಆದರೆ ಅವಳಿಗತ್ತ ಲಕ್ಷವಿಲ್ಲ. ಅವಳು ದಿಗಂತದೆಡೆಗೆ ನೋಡುತ್ತಾ ಕರುಣೆ ಹಾಗೂ ವಿಷಾದದ ಪ್ರತೀಕವಾಗಿ ಹಾಡುತ್ತಿದ್ದಾಳೆ. ಅವಳ ಕೋಮಲ ಬೆರಳುಗಳಿಂದು ವೀಣೆಯಿಂದ ಪ್ರಲಯ ಝೇಂಕಾರವನ್ನು ಹೊರಡಿಸುತ್ತಿವೆ.]

[* ಗಿಡುಗಗಳು ರಂಗ ಮಂಚದ ಮೇಲೆ ಬರಲು ಸಾಧ್ಯವಿಲ್ಲವಾದುದ ರಿಂದ ರಂಗಮಂಚದಲ್ಲಿ ಈ ದೃಶ್ಯವನ್ನು ಬಿಟ್ಟುಬಿಡಬಹುದು.]

೧.

ಎಲ್ಲಿರುವೆ ತಾಯಿ ನೀ ಸಂಕಟ ಸಮಯದೀ।
ಇಲ್ಲಿ ನಿನ್ನಂಗಳದಿ ಜ್ವಾಲೆಯುರಿ ಏಳುತಿದೆ॥
ಝಗಝಗನೆ ಉರಿಯುತಿದೆ ನಾಶ ಮಹಾನಾಶವಿದೆ।
ಧಗಧಗಿಪ ಜ್ವಾಲೆಯುರಿ ಬಾನನ್ನು ತಲಪುತಿದೆ ॥ ೧ ॥

ಪಶ್ಚಿಮದ ದಿಕ್ಕಿನಲಿ ಮುಳುಗುತಿಹ ಸೂರ್ಯನೇ।
ನಿಶ್ಚಯದಿ ಕಾಣುವನು ರಕ್ತವೋ ಎಂಬಂತೆ॥
ಅರಿಯುವುದು, ಸೂರ್ಯನಾ ಲಾಲಿಮತೆ ಈ ಸಮಯ
ಹರಿಯುವುದು ರಕ್ತ ಪ್ರವಾಹವೆಂಬಂತೆ ॥ ೨ ॥

ಎಲ್ಲೆಲ್ಲೂ ಉರಿಯುತಿದೆ ಚಿತೆಗಳೈ ಸಾಲಿನಲಿ।
ಅಲ್ಲಲ್ಲಿ ಉರಿಯುತಿವೆ ಅರ್ಧರ್ಧ ದೇಹಗಳು॥
ತೋರುತ ಸಮಾಜವನು ಸಾರುವವು ತಪ್ಪನ್ನು।
ಉರಿಯುತಿಹಗಿದರ್ಧ ದೇಹಗಳ ಪಾಡೊಳಗೆ ॥ ೩ ॥

ಭಗ್ನಾವಶೇಷಗಳು, ರಕ್ತರಂಜಿತ ದಾರಿ!
ನಗ್ನವಾಗಿಯೆ ಕೊಳೆತು ನಾರುತಿಹ ದೇಹಗಳು॥
ರಣ ಚಂಡಿ ತೃಷೆಗಾಗಿ ಭೋರ್ಗರೆದು ಬೊಬ್ಬಿಡಲು।
ಝುರಝುರನೆ ಹರಿಯುತಿಹ ರಕ್ತನದಿ ಸಾಲದಿದು ॥ ೪ ॥

ತಾಯಿಯೇ ನಿನ್ನ ಈ ನಿಟ್ಟುಸಿರ ಕಡೆಗಣಿಸು।
ಮಾತೆಯೇ ಕರಗದೀ ವಜ್ರ ಹೃದಯ॥

ನಿನ್ನ ಈ ಮೃಗಜಲದಿ ಶಾಂತಿಯೇ ತಾಯಿಯೇ।
ತಣ್ಣಗಾಗದೆ ಇಹುದು ಈ ಭಯಂಕರ ಜ್ವಾಲೆ ॥ ೫ ॥

ಅಂಬುಧಿಯು ವಸುಂಧರೆಗಿಳಿಸಿದವರೀಗೆಲ್ಲಿ ?
ಎಂಬಂತೆ ಹಾರುವವು ಚಿತೆಗಳಿಂ ಭಸ್ಮಗಳು।
ಎಲ್ಲಿರುವೆ ತಾಯೆ ಒಂದಿನಿತು ಪೇಳು ನೀ।
ಇಲ್ಲಿ ನಿನ್ನಂಗಳದಿ ಜ್ವಾಲೆ ಚಿತೆಯುರಿಯುತಿದೆ ॥ ೬ ॥

[ಹಾಡುತ್ತಾ ಗಾಯಕಿಯು ತನ್ನನ್ನು ತಾನೇ ಮರೆತು ಆನಂದದಲ್ಲಿ ತನ್ಮಯಳಾಗುತ್ತಾಳೆ. ಶ್ರಾವಕರ ಹೃದಯವು ಮಹಾನಾಶದ ಭಯ, ವೇದನೆಗಳಿಂದ ಧಕ್-ಧಕ್ ಎಂದು ಹೊಡೆದುಕೊಳ್ಳಲಾರಂಭಿಸುತ್ತದೆ. ಇದೇ ಸಮಯದಲ್ಲಿ ರಂಗಮಂಚಕ್ಕೆ ಇನ್ನೋರ್ವ ಸ್ತ್ರೀ ಪ್ರವೇಶಿಸುತ್ತಾಳೆ. ಅವಳೇ ಸಂಘಮಿತ್ರಾ. ಅವಳು ಸೈನಿಕ ಪೋಷಾಕಿನಿಂದ ಸುಸಜ್ಜಿತಳಾಗಿದ್ದಾಳೆ. ಸೊಂಟಕ್ಕೆ ಕತ್ತಿಯನ್ನು ತೂಗಾಡಿಸಿದ್ದ ಈ ಯುವತಿ ಯಾವ ಪರಾಕ್ರಮಿಗೂ ಕಡಿಮೆಯಿರಲಿಲ್ಲ. ಆದರೆ ಅವಳಿಂದು ಉದ್ವಿಗ್ನಳಾಗಿದ್ದಾಳೆ. ಅವಳ ಮುಖವು ಕಾಂತಿಹೀನವಾಗಿದೆ. ಬರುತ್ತಲೇ ಕರುಣಾಪೂರ್ಣ ಸ್ವರದಲ್ಲಿ ಕರೆಯುತ್ತಾಳೆ-]

ಸಂಘಮಿತ್ರಾ:— ರೇಖಾ ! ರೇಖಾ !!

ರೇಖಾ:— ಯಾರು? (ನೋಡಿ) ದೇವಿ! (ತಲೆತಗ್ಗಿಸಿ) ಪ್ರಣಾಮದೇವಿ!

ಸಂಘಮಿತ್ರಾ:— ಸರಿ ರೇಖಾ! ನಿನ್ನ ಪ್ರಫುಲ್ಲಿತ ವಾಣಿಯನ್ನು ವೇದನೆಯ ಬಿಕ್ಕಳಿಕೆಗೆ ಏಕೆ ಮಾರ್ಪಡಿಸುತ್ತಿದ್ದಿಯೇ? ಮಹಾನಾಶಕ್ಕಾಗಿ ಶಸ್ತ್ರಾಸ್ತ್ರಗಳೇ ತುಂಬಿಹೋಗಿರುವಾಗ ನಿನ್ನ ಸಂಗೀತ ಚೇತನವನ್ನೂ ಅದರ ದಾಸಿಯನ್ನಾಗಿ ಏಕೆ ಮಾಡುತ್ತಿದ್ದಿ?

ರೇಖಾ:— ದೇವಿ! ಮಹಾನಾಶದ ಈ ಸಮಯದಲ್ಲಿ ಪ್ರೇತವಲ್ಲದೆ ಇನ್ನಾವುದೂ ಕುಣಿಯಲಾರದು. ಗಿಡುಗಗಳಲ್ಲದೆ ಇನ್ನಾವುದೂ ಆನಂದ ಪಡಲಾರವು. ಉಳಿದುದೆಲ್ಲವೂ ಮೃತ್ಯುವಿನ ದಾನವೀಲೀಲೆಯಲ್ಲವೇಸು? ಈ ಭೂತಳದ ಅಸಂಖ್ಯಾತ ನಾರಿಯರ ಕಣ್ಣೀರಿನಲ್ಲೇ ಈ ಸಮರದ ಕ್ಷತ ವಿಕ್ಷಿತ ಶವಗಳು ತೇಲುತ್ತವೆ. ದೇವಿ! ಮೇಲೆ ಆಕಾಶದಲ್ಲಿ ಅವರ ಪ್ರೇತಾತ್ಮಗಳು ಸ್ವರ್ಗದಲ್ಲಿ ಸ್ಥಳ ಸಿಗದುದರಿಂದ ತಮ್ಮ ಶವದ ಮೇಲೆಯೇ ಆಕ್ರಮಣ

ಮಾಡುವ ಈ ಭೀಬತ್ಸ ಲೀಲೆಯನ್ನು ಮಾನವನು ವಿಜಯವೆಂದೆನ್ನುತ್ತಾನೆ! ಸಭ್ಯತೆ ಮತ್ತು ಸಂಸ್ಕೃತಿಯ ವಿಜಯ! (ಹಿಂತಿರುಗಿ ನೋಡಿ) ದೇವಿ! ಇಂಥಾ ಮಹಾದುಃಖ ಪರ್ವದಲ್ಲಿಯೂ ತಾವು ಪ್ರೇಮಪೂರಿತ ಶೀತಲ ಸಂಗೀತ ವನ್ನಪೇಕ್ಷಿಸುತ್ತೀರೇನು? ಮೃತ್ಯುವಿನ ದರ್ಶನದ ಬದಲು ಜೀವನದ ಸಂದೇಶವನ್ನು ಶ್ರವಣ ಮಾಡಲಚ್ಛಿಸುತ್ತೀರೇನು?

ಸಂಘಮಿತ್ರಾ:— (ಅವಳ ಹೆಗಲು ತಟ್ಟುತ್ತಾ) ಶಾಂತಳಾಗು ರೇಖಾ! ಶಾಂತಳಾಗು! ನಡೆಯುತ್ತಿರುವ ಎಲ್ಲಾ ದೃಶ್ಯಗಳನ್ನು ನಾನು ನೋಡುತ್ತಿದ್ದೇನೆ. ಮಾನವನಿಂದು ದಾನವನಾಗಿದ್ದಾನೆ ರೇಖಾ! ಈ ಮಹಾನಾಶದ ಸೂತ್ರರಾದ ಸ್ವಯಂ ಸಾಮ್ರಾಟರೇ ಇಂದು ಉದ್ವಿಗ್ನರಾಗಿದ್ದಾರೆ! ಇದು ತನ್ನಪರಾಜಯವೋ ಯಾ ಕಲಿಂಗದ ಪರಾಜಯವೋ ಎಂದವರಿಗೆ ಶಂಕೆ ಬರಹತ್ತಿದೆ. ಇದು ಕ್ರಾಂತಿಯ ರಕ್ತವೋ ಅಥವಾ ಮಹಾನಾಶದ ಶೋಣಿತವೋ ಎಂದವರಿಗೆ ಅರ್ಥವಾಗುತ್ತಿಲ್ಲ!

ರೇಖಾ:— (ಚಕಿತಳಾಗಿ) ದೇವೀ!!

ಸಂಘಮಿತ್ರಾ:— ಹಾಂ ರೇಖಾ! ನಾನು ನಿಜ ಹೇಳುತ್ತಿದ್ದೇನೆ. ಸಾಮ್ರಾಟರಿಗೆ ತನ್ನಲ್ಲಿಯೇ ಶಂಕೆ ಬರತೊಡಗಿದೆ.

ರೇಖಾ:— (ಮೊದಲಿನಂತೆಯೇ) ಸಾಮ್ರಾಟರಿಗೇ ಸಂಶಯ ಬರ ತೊಡಗಿದೆ?

ಸಂಘಮಿತ್ರಾ:— ಹಾಂ ರೇಖಾ, ಹಾಗೇ ಕಾಣುತ್ತದೆ. ಕಳೆದ ನಾಲ್ಕೈದು ದಿವಸಗಳಿಂದ ಅವರ ಸ್ವಭಾವದಲ್ಲಿ ಅದ್ಭುತ ಪರಿವರ್ತನೆಯಾಗಿದೆ. ಇತ್ತೀಚೆಗೆ ಅವರು ರಣಭೂಮಿ ಯಾ ಬಂಧೀ ಗೃಹದಿಂದ ಹೊರಬರುವಾಗ ತಳಮಳಿಸುತ್ತಿರುವಂತೆ ಕಾಣುತ್ತಾರೆ.

ರೇಖಾ:— ಅದನ್ನು ನಾನೂ ಕಂಡಿದ್ದೇನೆ ದೇವಿ! (ಗಂಭೀರ ಸ್ವರದಲ್ಲಿ) ಅವರು ಇತ್ತೀಚೆಗೆ ಮಧುಮಧುರ ಗಾನವನ್ನು ಕೇಳುವಾಗಲೂ ಬೆಚ್ಚಿಬೀಳು ತ್ತಾರೆ. ಇದ್ದಕ್ಕಿದ್ದಂತೆ ಅವರು ತನ್ನ ಕೈಯನ್ನು ಅಡಿಮೇಲು ಮಾಡಿ ತದೇಕ ಚಿತ್ತರಾಗಿ ನೋಡುತ್ತಾರೆ!

ಸಂಘಮಿತ್ರಾ:— ಹಾಂ ರೇಖಾ! ಇದೇ ಸಂಶಯದ ಜನ್ಮ. ರಕ್ತ ಪ್ಲವಿತ ಸಮರಭೂಮಿ; ಮಾನವನ ವಿಕಾರ ಕಿರುಚುವಿಕೆಯಿಂದ ಗುಂಯ್ ಗುಡುತ್ತಿರುವ ಬಂಧೀಗೃಹವನ್ನು ಹೊಕ್ಕು ಬಂದ ನಂತರ, ನಿನ್ನ ತಾಪನಾಶಕ ಮಧುರ ವಾಣಿಯನ್ನು ಕೇಳಿದಾಗ; ಈ ಪ್ರತ್ಯಕ್ಷ ನರಕದಲ್ಲೂ ಇಂತಹ ಸುಖವಿದೆಯೇ ಎಂದವರಿಗೆ ವಿಶ್ವಾಸವಾಗುವುದಿಲ್ಲ.

ರೇಖಾ:— ದೇವಿಯವರು ಬಹಳ ದೂರದ ವರೆಗೆ ನೋಡುತ್ತಿದ್ದಾರೆ.

ಸಂಘಮಿತ್ರಾ:— (ಮುಗುಳ್ನಗುತ್ತಾ) ರೇಖಾ! ನೀನಿವತ್ತು ಸಾಮ್ರಾಟರಲ್ಲಿಗೆ ಹೋಗಿಲ್ಲವೇನು?

ರೇಖಾ:— ಇಲ್ಲ ದೇವೀ! ಇವತ್ತು ಯಾವುದೋ ಗಂಭೀರ ವಿಷಯದ ಬಗ್ಗೆ ಮಂತ್ರಣ ನಡೆಯಲಿದೆ ಎಂದು ಕೇಳಿದೆ.

ಸಂಘಮಿತ್ರಾ:— ಹೂಂ ಸರಿ! ಕಲಿಂಗದ ಯುವರಾಜನು ಇಂದಿನ ವರೆಗೂ ಬಂಧಿಸಲ್ಪಡಲಿಲ್ಲ; ಅದೇ ವಿಷಯವಿರಬೇಕು!

ರೇಖಾ:— ದೇವೀ! ಈಗ ತೋಸಲಿಯಲ್ಲಿ ನರಪಿಳ್ಳೆಯೂ ಕಂಡು ಬರುವುದಿಲ್ಲ. ಕುಮಾರ ಎಲ್ಲಡಗಿದ್ದಾರೋ ಯಾರಿಗೆ ಗೊತ್ತು? ನಿನ್ನೆ ಅವರು ಅದ್ವಿತೀಯ ಪರಾಕ್ರಮ ತೋರಿಸಿದ್ದರೆಂದು ಕೇಳಿದ್ದೇನೆ. ಅವರ ಆನೆಯಂತೂ ಮಗಧ ಸೇನೆಯನ್ನು 'ತ್ರಾಹೀ......ತ್ರಾಹೀ' ಎನಿಸಿಬಿಟ್ಟಿತಂತೆ.

ಸಂಘಮಿತ್ರಾ:— (ಏನೋ ಕಳೆದುಕೊಂಡವಳಂತೆ) ಹಾಂ ರೇಖಾ, ನಾನೂ ನೋಡಿದ್ದೆ. ಆದರೆ ಅದರಿಂದೇನು ಪ್ರಯೋಜನ? ಯುದ್ಧ ಈಗಲೂ ನಡೆಯುತ್ತಿದೆ. ಅಲ್ಲಿ ನೋಡು, ಗಿಡುಗಗಳು ಆಕಾಶದಲ್ಲಿ ಹೇಗೆ ತಿರುಗುತ್ತಿವೆ. ದೂರದಲ್ಲಿರುವ ಪ್ರಕಾಶವೂ ದೊಡ್ಡದಾಗುತ್ತಿದೆ. ಅಂಧಕಾರವನ್ನು ದೂರೀ ಕರಿಸಲು ಯಾರೋ ಬೆಂಕಿಮಾಡುತ್ತಿದ್ದಾರೆ. (ನಿಶ್ವಾಸ) ಜಗತ್ತು ಸಮಾಪ್ತ ವಾದರೂ ಈ ಯುದ್ಧ ಕೊನೆಗೊಳ್ಳಲಿಕ್ಕಿಲ್ಲ.

ರೇಖಾ:— ನಿಜ ದೇವೀ! ಈ ಯುದ್ಧ ಸಮಾಪ್ತವಾಗಲಿಕ್ಕಿಲ್ಲ. ಮಾನವನ ದಾನವೀ ಪಿಪಾಸೆಯು ಈ ಯುದ್ಧವನ್ನೆಂದೂ ಕೊನೆಗೊಳಿಸ ಲಾರದು. ಆದರೆ ದೇವೀ! ಮಾನವನು ಸಾಯಲಿಕ್ಕಾಗಿ ಇಷ್ಟೆಲ್ಲಾ ಮಾಡು

ವಾಗ ಬದುಕಲೂ ಸ್ವಲ್ಪ ಕೆಲಸ ಮಾಡಿದರೇನು? ಅದರಿಂದೇನಾದರೂ ಅಹಿತವಿದೆಯೇ?

ಸಂಘಮಿತ್ರಾ:— (ಮುಗುಳ್ನಗುತ್ತಾ) ನೀನು ಹಾಡುವುದು ಮಾತ್ರವಲ್ಲ, ಆಲೋಚಿಸುತ್ತಲೂ ಇದ್ದಿಯೇ. ಆದರೆ ತಪ್ಪು ಆಲೋಚಿಸುತ್ತಿದ್ದಿ. ಈ ಎಲ್ಲಾ ಪ್ರಯತ್ನಗಳೂ ಮಾನವನ ಜೀವಿತಕ್ಕಾಗಿಯೇ ನಡೆಯುತ್ತಿವೆ. ಆದರೆ ಈ ಎಲ್ಲಾ ಪ್ರಯತ್ನಗಳೂ ಮಾನವರಿಗಾಗಿ ಉಪಯೋಗಿಸದೆ ಸ್ವಕಾರ್ಯಕ್ಕಾಗಿ ಉಪಯೋಗಿಸುತ್ತಿರುವುದು ಮಾತ್ರ ಸತ್ಯ. ಆದರೆ ನೀನು ಹೇಳುತ್ತಿರುವ ಮಾನವಕಲ್ಯಾಣವು ಮಾನವನು ಇನ್ನೊಬ್ಬರಿಗಾಗಿ ಜೀವಿಸತೊಡಗಿದಾಗ ಮಾತ್ರ ಸಾಧ್ಯ! ಆದರೆ......ಆದರೆ......ಅದು ಯಾರು?

[ಸಂಘಮಿತ್ರಾಳು ಒಂದು ಬದಿಯನ್ನು ತೋರಿಸುತ್ತಾಳೆ. ರೇಖಾಳು ಅತ್ತ ನೋಡುತ್ತಾಳೆ]

ರೇಖಾ:— ಯಾರು? ಓಹ್! ಅವರೇ? ಅವರು ಅಮಾತ್ಯರಲ್ಲವೇ?

ಸಂಘಮಿತ್ರಾ:— ಮಹಾಮಾತ್ಯ ರಾಧಾಗುಪ್ತ! ಬಹು ಶೀಘ್ರವಾಗಿ ಶಿಬಿರದೆಡೆಗೆ ಹೋಗುತ್ತಿದ್ದಾರೆ. ಅವಶ್ಯವಾಗಿ ಏನೋ ವಿಷಯವಿದೆ. ಕೇಳು ......ಕೇಳು......ಜಯಘೋಷವೂ ಕೇಳುತ್ತಿದೆ.

[ದೂರದಿಂದ ಜಯಘೋಷವು ಕೇಳುತ್ತಿದೆ.]

ಸ್ವರಘೋಷ:— ಮಗಧ ಸಾಮ್ರಾಟನಿಗೆ ಜಯವಾಗಲಿ! ಸಾಮ್ರಾಟ ಅಶೋಕನಿಗೆ ಜಯವಾಗಲಿ!

ರೇಖಾ:— ಬಹುಶಃ ಯುವರಾಜ ಬಂಧಿಸಲ್ಪಟ್ಟಿರಬೇಕು!

ಸಂಘಮಿತ್ರಾ:— (ಕಂಪಿಸಿ) ಕುಮಾರ ಬಂಧಿಸಲ್ಪಟ್ಟ! ನಿಜವಾಗಿಯೂ ಕುಮಾರ ಬಂಧಿಸಲ್ಪಟ್ಟನೇನು? ನಡೆ ರೇಖಾ ನಡೆ! ಕುಮಾರನು ಬಂಧಿಸಲ್ಪಟ್ಟನೇನು? ಎಂದು ಮಹಾಮಾತ್ಯರಲ್ಲಿ ವಿಚಾರಿಸೋಣ.

[ಹೇಳುತ್ತಾ, ಹೇಳುತ್ತಾ ಸಂಘಮಿತ್ರಾಳು ರಂಗಮಂಚದಿಂದ ಶೀಘ್ರವಾಗಿ ಹೊರಗೆ ಹೋಗುತ್ತಾಳೆ. ಅವಳು ಹೋದ ರಭಸವನ್ನು ಕಂಡು ಚಕಿತಳಾದ ರೇಖಾಳು ಅವಳನ್ನು ಕರೆಯುತ್ತಾ ಹಿಂದಿನಿಂದ ಹೋಗುತ್ತಾಳೆ.]

ರೇಖಾ:— ದೇವೀ......ದೇವೀ......ಕೂಡಲೇ ನಿಂತು, ಕುಮಾರನ ಬಂಧನದ ವಿಷಯ ಕೇಳಿ ಸಂಘಮಿತ್ರಾಳು ಎಷ್ಟು ಉದ್ವಿಗ್ನಳಾದಳು! ಶತ್ರುವಾದಾಗ್ಯೂ ಅವನ ಬಗ್ಗೆ ಅವಳ ಪ್ರೇಮವು ಕೊಂಚವೂ ಕಡಿಮೆಯಾಗಲಿಲ್ಲ. (ನಿಟ್ಟುಸಿರು) ಆಹ್ ಪ್ರೇಮ! ಎಷ್ಟೊಂದು ಪವಿತ್ರ ಭಾವನೆ! ಎಷ್ಟೊಂದು ಅದ್ಭುತ! ಎಲ್ಲರೂ ಏಕೆ ಪ್ರೇಮ ಮಾಡುವುದಿಲ್ಲ? (ಒಮ್ಮೆಲೆ ನೋಡಿ) ಓಹ್, ಎಷ್ಟೊಂದು ದೂರ ಹೋದಳು! ರಾಜಕುಮಾರಿ! ರಾಜಕುಮಾರಿ!

[ಅವಳು ಹೋಗುತ್ತಾಳೆ, ರಂಗಮಂಚವು ಒಂದು ಕ್ಷಣ ನಿಃಶಬ್ದವಾಗುತ್ತದೆ; ನಂತರ ಮೆಲ್ಲನೇ ಪರದೆ ಬೀಳುತ್ತದೆ.]

ವಿ. ಸೂ:— ರಂಗಭೂಮಿಯಲ್ಲಿ ಸಮಯದ ಅಭಾವವಿದ್ದರೆ ಪ್ರಾಸ್ತಾವಿಕವನ್ನು ಬಿಡಬಹುದು.

ನವ-ಪ್ರಭಾತ

(ಐತಿಹಾಸಿಕ ಘಟನಾ)

ಸಮಯ

ಕಲಿಂಗ ಯುದ್ಧದ ಕೊನೆಯ ದಿನ ಕ್ರಿ. ಪೂ. ೨೬೫ರ ಮೊದಲಿನ ಭಾರತ.

ಸ್ಥಾನ

ಕಲಿಂಗದ ರಾಜಧಾನಿ ತೋಸಲಿ (ವರ್ತಮಾನ ಧ್‍ಲಿ, ಜಿಲ್ಲೆ ರೀಪು)ಯ ಹತ್ತಿರದ ಯುದ್ಧಭೂಮಿ.

ಪಾತ್ರ

೧.	**ಅಶೋಕ**	...	ಭಾರತ ಸಾಮ್ರಾಟ.
೨.	**ಮಹೇಂದ್ರ**	...	ಅಶೋಕನ ಕಿರಿಯ ತಮ್ಮ.
೩.	**ಉಪಗುಪ್ತ**	...	ಬೌದ್ಧ ಭಿಕ್ಷು.
೪.	**ಭಿಕ್ಷು**	...	ಛದ್ಮವೇಷಧಾರಿ ಗುಪ್ತಚರ ಬಂಧುಜೀವ.
೫.	**ಪ್ರತಿಹಾರಿ**	...	ದ್ವಾರಪಾಲಕ.
೬.	**ಕಾರುವಾಕಿ**	...	ಅಶೋಕನ ಕಿರಿಯ ರಾಣಿ.
೭.	**ಭಿಕ್ಷುಣಿ**	...	ಕಲಿಂಗದ ರಾಜಕುಮಾರಿ.
೮.	**ರಾಧಾಗುಪ್ತ**	...	ಅಶೋಕನ ಅಮಾತ್ಯ.
೯.	**ಕುಮಾರ**	...	ಕಲಿಂಗದ ರಾಜಕುಮಾರ.
೧೦.	**ಸಂಘಮಿತ್ರಾ**	...	ಅಶೋಕನ ಕಿರಿಯ ತಂಗಿ.
೧೧.	**ರೇಖಾ**	...	ಆಸ್ಥಾನ ಗಾಯಕಿ.
೧೨.	**ಚಂಡಾಗಿರ**	...	ಬಂಧೀಗೃಹದ ಘಾತಕ.

ನವ-ಪ್ರಭಾತ

[ಐತಿಹಾಸಿಕ ನಾಟಕ]

[ಸಾಮ್ರಾಟ ಅಶೋಕನ ಶಿಬಿರ, ರಾಜನು ಅತ್ತಿಂದಿತ್ತ ತಿರುಗುತ್ತಾನೆ. ಅಲ್ಲಿಯ ಅಲಂಕಾರವು ಸಾಮ್ರಾಟನ ವೈಭವವನ್ನು ಎತ್ತಿ ತೋರಿಸುವಂತಿದ್ದುವು. ನೆಲದ ಮೇಲೆ ಬಹು ಮೂಲ್ಯವುಳ್ಳ ರತ್ನಗಂಬಳಿ ಹಾಸಲ್ಪಟ್ಟಿತ್ತು. ಅಲ್ಲಲ್ಲಿ ಮಖಮಲಿನ ಪರದೆಗಳನ್ನೂ ಹಾಕಲಾಗಿತ್ತು. ಒಂದುಗಡೆ ಸಾಮ್ರಾಟನ ಎತ್ತರವಾದ ಆಸನವಿದೆ. ಅದರ ಇಬ್ಬದಿಗಳಲ್ಲಿ ಎರಡು ಧೂಮ್ರಧಾನಿಗಳನ್ನೂ ಇಟ್ಟಿದ್ದರು. ಅದರಿಂದ ಸುಗಂಧಿತ ಹವೆ ಹೊರಬಿದ್ದು ವಾತಾವರಣವನ್ನು ಕಂಪು ಮಾಡುತ್ತಿತ್ತು. ಹವೆಯೂ ಹೊಗೆಯಿಂದ ಮಿಶ್ರವಾಗಿತ್ತು. ಬಾಗಿಲಿನ ಹತ್ತಿರ ಒಳಗಡೆ ಅನೇಕ ದೀಪಗಳುರಿಯುತ್ತಿರುವ ಕಂದೀಲು (ಸಾಣಾದಿಗೆ) ಇಡಲಾಗಿತ್ತು. ಪ್ರಷ್ಟಭೂಮಿಯಲ್ಲಿ 'ಸಂಧ್ಯಾಗೀತೆ' ಕೇಳಿ ಬರುತ್ತಿದೆ. ಅಲ್ಲಿ ಬೇರಾರೂ ಇಲ್ಲ. ಪರದೆ ಎತ್ತುವಾಗ ಸಾಮ್ರಾಟನು ಅತ್ತಿಂದಿತ್ತ ತಿರುಗಾಡುವುದು ಕಾಣುತ್ತದೆ. ರಾಜನು ಉದ್ವಿಗ್ನನಾಗಿದ್ದಾನೆ. ಅವನು ಸುಂದರನಾಗಿಲ್ಲಆದರೆ ಪ್ರತಾಪಶಾಲಿಯಾಗಿದ್ದನು. ವಿಶಾಲ ವಕ್ಷಸ್ಥಳ, ಆಜಾನುಬಾಹು, ಪ್ರಶಸ್ತ ಲಲಾಟ ಮತ್ತು ದೊಡ್ಡ ದೊಡ್ಡ ಕಣ್ಣುಗಳು ವಿಶ್ವಾಸಕೊಡುತ್ತಿದ್ದುವು. ಆದರೆ ಈ ಸಮಯದಲ್ಲವನು ತುಂಬಾ ಉದ್ವಿಗ್ನನಾಗಿದ್ದನು. ಅವನ ರತ್ನಝುಡಿತ ಆ ಭೂಷಣ, ಅವನ ರೇಶಮಿಾ ಉತ್ತರೀಯ ಎಲ್ಲವೂ ಅವನ ದೀನತೆಯ ಆಳವನ್ನು ತೋರಿಸುತ್ತಿದ್ದುವು. ಅವನೇನೋ ಹೇಳತೊಡಗುವಷ್ಟರಲ್ಲಿ ಸ್ವಲ್ಪ ಕೇಳಿ ಬೆಚ್ಚಿ ಬೀಳುತ್ತಾನೆ.]

ಅಶೋಕ:-- (ಬೆಚ್ಚಿಬಿದ್ದು) ಯಾರದು? (ನಿಶ್ಶಬ್ದ) ಯಾರು ಇಲ್ಲ! ಈಗತಾನೇ ಅಲ್ಲಿ ಯಾರೋ ಇದ್ದಹಾಗಿತ್ತು. (ನೋಡಿ) ಓಹ್ ನೆರಳು, ನನ್ನ ನೆರಳು! ಯಾರೋ ಸೈನಿಕನಿರಬೇಕೆಂದು ನಾನು ಭಾವಿಸಿದ್ದೆ.

[ಸ್ವರ ಅಸ್ಪುಟವಾಗುತ್ತದೆ. ದೀರ್ಘಶ್ವಾಸದ ನಂತರ]

ಎಲ್ಲವೂ ಕೊನೆಗೊಂಡಿತು...ಎಲ್ಲವೂ...ಕಳಿಂಗದ ದರ್ಪ ಚೂರಾಯ್ತು... ಒಂದು ಲಕ್ಷ ಮಂದಿ ಮೃತರಾದರು...ಒಳ್ಳೇದೇ ಆಯ್ತು...ಯುದ್ಧದಲ್ಲಿ ಮನುಷ್ಯನು ಸಾಯುತ್ತಾನೆ...

[ಅದೇ ಸಮಯ ರಾಧಾಗುಪ್ತನು ಶೀಘ್ರತೆಯಿಂದ ಸಾಮ್ರಾಟನ ಶಿಬಿರ ಪ್ರವೇಶ ಮಾಡಿ]

ರಾಧಾಗುಪ್ತ:— ಸಾಮ್ರಾಟನಿಗೆ ಜಯವಾಗಲಿ. ಕಳಿಂಗದ ಯುವ ರಾಜನು ಬಂಧಿಸಲ್ಪಟ್ಟಿದ್ದಾನೆ!

ಅಶೋಕ:— (ಬೆಚ್ಚಿಬಿದ್ದು) ಕಳಿಂಗದ ಯುವರಾಜ ಬಂಧಿಸಲ್ಪಟ್ಟ ನೇನು?

ರಾಧಾಗುಪ್ತ:— ಹೌದು ಸಾಮ್ರಾಟ್!

ಅಶೋಕ:— ಇದು ಸತ್ಯವೇ ಮಹಾಮಾತ್ಯ?

ರಾಧಾಗುಪ್ತ:— ಅಪ್ಪಣೆಯಾದರೆ ಬಂಧಿಯನ್ನು ಪ್ರಭುವಿನ ಚರಣ ದಲ್ಲಿ ಒಪ್ಪಿಸುತ್ತೇನೆ.

ಅಶೋಕ:— (ಅನುಮಾನದಿಂದ) ಈಗ ಬೇಡ ಮಹಾಮಾತ್ಯಾ. ಇನ್ನೂ ಯುದ್ಧದ ಅವಶ್ಯಕತೆಯಿದೆಯೇನು? ಎಂಬುದನ್ನು ಮೊದಲು ನಮಗೆ ತಿಳಿಸು.

ರಾಧಾಗುಪ್ತ:— ಇಲ್ಲ ಪ್ರಭೋ; ಕಳಿಂಗವಿಜಯ ಪೂರ್ಣವಾಯ್ತು

ಅಶೋಕ:— (ಮೊದಲಿನಂತೆಯೇ)ಕಳಿಂಗವಿಜಯ ಪೂರ್ಣವಾಯ್ತು. ಯುದ್ಧ ಸಮಾಪ್ತವಾಯ್ತು. ಇನ್ನು ಮೇಲೆ ಶಸ್ತ್ರಗಳ ಝುಂಕಾರ, ಗಾಯ ಗೊಂಡವರ ಮತ್ತು ಸಾಯುತ್ತಿರುವವರ ಆರ್ತನಾದ ಕೇಳಲಿಕ್ಕಿಲ್ಲವೇನು?

ರಾಧಾಗುಪ್ತ:— ಪ್ರಭೋ, ಕಳಿಂಗದಲ್ಲಿ ಇನ್ನು ಶಸ್ತ್ರವೆತ್ತಲು ಉಳಿ ದಿರುವವರಾದರೂ ಯಾರು? ವೃದ್ಧ, ವನಿತೆ, ಬಾಲಕರು ಉಳಿದಿದ್ದಾರೆ. ಅವರು ಕೇಳುವುದೂ ಇಲ್ಲ, ಹೇಳುವುದೂ ಇಲ್ಲ. ಅವರೆಲ್ಲರೂ ನೆಟ್ಟದೃಷ್ಟಿಯಿಂದ ಶೂನ್ಯವನ್ನು ನೋಡುತ್ತಾ ಕೂಳಿತುಕೊಳ್ಳುತ್ತಾರೆ. ನಾವೇನಾದರೂ ವಿಚಾರಿಸಿ ದರೆ ಮಾತಾಡುವವರೂ ಕರಗಿ ನೀರಾಗುವಂತೆ ಅವರು ನಮ್ಮನ್ನು ನೋಡು ತ್ತಾರೆ. ಹಾಂ, ಆದರೆ ಅಲ್ಲಿ ಹೇಳುವ ಮತ್ತು ಕೇಳುವ ವ್ಯಕ್ತಿ ಉಳಿದುದೆಂದರೆ ಒಬ್ಬನು ಮಾತ್ರ.

ಅಶೋಕ:— ಅವನೇನು ಹೇಳುತ್ತಾನೆ?

ರಾಧಾಗುಪ್ತ:— ಅದನ್ನು ನಾನು ನುಡಿಯಲಾರೆ ಪ್ರಭೋ!

ಅಶೋಕ:— (ಕ್ರೋಧದಿಂದ) ಮಹಾಮಾತ್ಯ, ನೀನು ಯಾರೊಡನೆ ಮಾತಾಡುತ್ತಿರುವಿ ಎಂದು ತಿಳಿದಿರುವೆ ತಾನೇ?

ರಾಧಾಗುಪ್ತ:— ತಿಳಿದಿರುವೆ ಭರತ ಸಾಮ್ರಾಟ.

ಅಶೋಕ:— ಮತ್ತೇನು?

ರಾಧಾಗುಪ್ತ:— ಸಾಮ್ರಾಟರು ಬೇಕಿದ್ದರೆ ಅವನ ಮಾತನ್ನು ಅವನ ಬಾಯಿಯಿಂದಲೇ ಕೇಳಬಹುದು.

ಅಶೋಕ:— ಆ ವಾಚಾಲನನ್ನೂ ತಂದಿರುವೆಯೇನು?

ರಾಧಾಗುಪ್ತ:— ಕಳಿಂಗದ ರಾಜಕುಮಾರನು ಬಂಧಿಸಲ್ಪಟ್ಟಿದ್ದಾನೆ ಎಂದು ಈ ಹಿಂದೆಯೇ ನಿವೇದಿಸಿದ್ದೇನೆ ಪ್ರಭೋ.

ಅಶೋಕ:— ಯುವರಾಜನು ಬಂಧಿಯಾದಾಗ್ಯೂ ವಾಚಾಲತನ ಬಿಡಲಿಲ್ಲವೇನು?

ರಾಧಾಗುಪ್ತ:— ಬಂಧಿಸಿದ ನಂತರವಂತೂ ಹೆಚ್ಚು ಮಾತಾಡ ತೊಡಗಿದ್ದಾನೆ ಸಾಮ್ರಾಟ್.

ಅಶೋಕ:— (ತುಟಿಕಚ್ಚಿ) ಬಹುಶಃ ಅವನಿಗೆ ಭರತ ಸಾಮ್ರಾಟ ಚಂಡಅಶೋಕನ ಸ್ವಭಾವ ಪರಿಚಯವಿಲ್ಲ.

ರಾಧಾಗುಪ್ತ:— ಪ್ರಭೋ! ಕುಮಾರನು ಮಗಧದಲ್ಲಿ ನಮ್ಮ ಅತಿಥಿಯಾಗಿದ್ದನು. ಸಾಮ್ರಾಟರು ಅವನ ವೀರತೆಯನ್ನರಿತಿದ್ದಾರೆ. 'ಅಖೇಡ' ಸಮಯದಲ್ಲಿ ಮಹಾರಾಜರು ಕುಮಾರನನ್ನು ಪ್ರಶಂಸಿಸಿ ಹಸ್ತಲಾಘವನ್ನಿತ್ತಿದ್ದರು. ಮತ್ತು ದೇವಿ ಸಂಘಮಿತ್ರಾ......

ಅಶೋಕ:— (ಕರ್ಕಶವಾಗಿ) ಮಹಾಮಾತ್ಯ?

ರಾಧಾಗುಪ್ತ:— ಅಪರಾಧವನ್ನು ಕ್ಷಮಿಸಿ ಪ್ರಭೋ! ದೇವಿ ಸಂಘಮಿತ್ರಳು ಇಂದು ಯುವರಾಜನ ಪ್ರಸಂಶಕಳಾಗಿದ್ದಾಳೆ. ಈಗತಾನೇ ಅವಳು ಯುವರಾಜನು ಬಂದಿಯಾದುದನ್ನು ತಿಳಿದು.........

ಅಶೋಕ:— (ದುಗುಡದಿಂದ) ಏನು ಹೇಳಿದಳು?

ರಾಧಾಗುಪ್ತ:— ಅವಳು 'ಕುಮಾರನನ್ನು ಒಬ್ಬ ವೀರಪುರುಷನೆಂದು ತಿಳಿದು ಸಾಮ್ರಾಟರು ವ್ಯವಹರಿಸಲಿ' ಎಂದು ಹೇಳಿದಳು.

ಅಶೋಕ:— (ಹತೋಟಿಗೆ ಬಂದು) ಮಹಾಮಾತ್ಯಾ, ನಮಗೆ ದೇವೀ ಸಂಘಮಿತ್ರಾಳ ಪರಾಮರ್ಶದ ಅಗತ್ಯವಿಲ್ಲ. ನಾವು ಯಾವಾಗ, ಎಲ್ಲಿ, ಹೇಗೆ, ಏನು? ಮಾಡಬೇಕೆಂಬುದನ್ನರಿತಿದ್ದೇವೆ. ಕುಮಾರನು ನಮ್ಮ ಶತ್ರುವಾಗಿದ್ದಾನೆ. ಶತ್ರುವಿನೊಡನೆ ಹೇಗೆ ವ್ಯವಹರಿಸಬೇಕೆಂದು ದೇವೀ ಸಂಘಮಿತ್ರಾಳಿಗೂ ಗೊತ್ತು. ನೀನು ಬಂಧಿಯನ್ನು ಕರೆದು ತಾ. ನಾನವನ ಮಾತು ಕೇಳಲಿಚ್ಛಿಸುತ್ತೇನೆ.

ರಾಧಾಗುಪ್ತ:— ಅಪ್ಪಣೆ ಪ್ರಭೋ.

[ರಾಧಾಗುಪ್ತನ ನಿರ್ಗಮನ; ರಣವೇಶದಲ್ಲಿ ಸಂಘಮಿತ್ರಾಳ ಆಗಮನ]

ಸಂಘಮಿತ್ರಾ:— ಅಣ್ಣಾ!

ಅಶೋಕ:— ಯಾರು? ಸಂಘಮಿತ್ರಾ! ಈ ಸಮಯದಲ್ಲಿ ನೀನೇಕೆ ಬಂದೆ?

ಸಂಘಮಿತ್ರಾ:— ನಾಯಿಕೆ ಬಂದಿದ್ದಾಳೆ; ಅಪ್ಪಣೆಯಾದರೆ ಕರಿತರುತ್ತೇನೆ ಎಂದು ಮಹಾರಾಜರಿಗೆ ನಿವೇದಿಸಲು ಬಂದಿದ್ದೆ.

ಅಶೋಕ:— ಈಗ ಬೇಡ ಸಂಘಮಿತ್ರಾ. ನನಗೆ ಆವಶ್ಯಕ ಕೆಲಸವಿದೆ.

ಸಂಘಮಿತ್ರಾ:— ಈ ಸಂಧ್ಯಾ ಸಮಯದಲ್ಲೂ ಸಾಮ್ರಾಟರಿಗಿರುವ ಆವಶ್ಯಕ ಕೆಲಸವೇನೆಂದು ನಾನು ವಿಚಾರಿಸಬಹುದೋ?

ಅಶೋಕ:— ನನಗೇನು ಕೆಲಸವಿದೆಯೆಂದು ತಿಳಿಯಲಿಚ್ಛಿಸುವಿಯೇನು? (ಒಮ್ಮಿಂದೊಮ್ಮೆಲೆ) ಇಲ್ಲ ಸಂಘಮಿತ್ರಾ, ನಿನಗೇನೂ ಹೇಳಲಾರೆ.

ಸಂಘಮಿತ್ರಾ:— ತಿಳಿಸುವ ಆವಶ್ಯಕತೆಯೂ ಇಲ್ಲ ಸಾಮ್ರಾಟ್. ನನಗೆಲ್ಲವೂ ತಿಳಿದಿದೆ.........

ಅಶೋಕ:— ನಿನಗೇನು ತಿಳಿದಿದೆ?

ಸಂಘಮಿತ್ರಾ:— ತಾವು ಕಳಿಂಗ ಕುಮಾರನ ಭಾಗ್ಯನಿರ್ಣಯಕ್ಕಾಗಿ ಹೋಗುತ್ತಿರುವಿರಿ ಎಂದು. ಆದರೆ ನಾನು ಬರೀ ಒಂದು ಮಾತು ಹೇಳಲಿಚ್ಛಿಸುತ್ತೇನೆ ಸಾಮ್ರಾಟ್. 'ಈ ದಿನ ನಿಮ್ಮ ನಿಜವಾದ ಶೌರ್ಯದ ಪರೀಕ್ಷೆಯಾಗಲಿದೆ' ಎಂಬುದನ್ನು ನೆನಪಿನಲ್ಲಿಡಿರಿ.

ಅಶೋಕ:— ಭಾರತ ಏಕಚಕ್ರಾಧಿಪತಿಯ ಶೌರ್ಯವು ವಿಶ್ವವಿದಿತವಾಗಿದೆ ಸಂಘಮಿತ್ರಾ. ಕುಮಾರನೂ ನನ್ನ ಚರಣಗಳ ಮುಂದೆ ತಲೆ ತಗ್ಗಿಸಲೇ ಬೇಕು.

ಸಂಘಮಿತ್ರಾ:— ಒಂದುವೇಳೆ ಆ ತಲೆ ನಿಮ್ಮ ಮುಂದೆ ತಗ್ಗದಿದ್ದರೆ?

ಅಶೋಕ:— ಅಂತಹ ತಲೆಯನ್ನು ಖಡ್ಗದಿಂದ ಉರುಳಿಸಲಾಗುತ್ತದೆ.

(ಸ್ವಲ್ಪ ಹಿರಿದು ಖಡ್ಗದಿಂದ ಶಬ್ದ ಮಾಡುತ್ತಾನೆ)

ಸಂಘಮಿತ್ರಾ:— (ಕಂಪಿಸಿ) ಅಣ್ಣಾ!

ಅಶೋಕ:— (ನಗುತ್ತಾ) ಕಂಪನಗೊಂಡೆಯೇನು? ನಿನಗೂ ಶಸ್ತ್ರಗಳನ್ನು ನೋಡಿ ಹೆದರಿಕೆಯಾಗುತ್ತಿದೆಯೇನು?

ಸಂಘಮಿತ್ರಾ:— ಇಲ್ಲ ಸಾಮ್ರಾಟ್, ಶಸ್ತ್ರಗಳ ಹೆದರಿಕೆ ನನಗಿಲ್ಲ.

ಅಶೋಕ:— ಹಾಗಾದರೆ ಕುಮಾರನ ಮೃತ್ಯುವಿಗಾಗಿ ಭಯಪಡುತ್ತಿಯೇನು?

ಸಂಘಮಿತ್ರಾ:— ಇಲ್ಲ ಸಾಮ್ರಾಟ್, ನನಗದರ ಚಿಂತೆಯಿಲ್ಲ.

ಅಶೋಕ:— ಹಾಗಾದರೆ ಮತ್ತಾವ ವಿಷಯದ ಬಗ್ಗೆ ನೀನು ಚಿಂತಿಸುತ್ತಿರುವೆ?

ಸಂಘಮಿತ್ರಾ:— ನನಗೆ ಸಾಮ್ರಾಟರ ಚಿಂತೆಯಾಗಿದೆ. ಏಕೆಂದರೆ ಅವರು ಖಡ್ಗವೇ ತನ್ನ ಶೌರ್ಯದ ಪ್ರತೀಕವೆಂದು ತಿಳಿದಿದ್ದಾರೆ.

ಅಶೋಕ:— ಖಡ್ಗವಲ್ಲದೆ ಇನ್ನಾವುದು ಶೌರ್ಯದ ಪ್ರತೀಕ?

ಸಂಘಮಿತ್ರಾ:— ಹೃದಯ! ಹೃದಯ ವಿಶಾಲತೆ ಮತ್ತು ಉದಾರತೆಯೇ ನಿಜವಾದ ಶೌರ್ಯ ಸಾಮ್ರಾಟ್!

ಅಶೋಕ:— ಹೃದಯ ವಿಶಾಲತೆ ಮತ್ತು ಉದಾರತೆ... (ಕೂಡಲೇ ಅಟ್ಟಹಾಸ ಮಾಡಿ) ಹೃದಯ ವಿಶಾಲತೆ ಮತ್ತು ಉದಾರತೆ! ಕಳಿಂಗ ಭಿಕ್ಷುವಿನ ಉಪದೇಶದ ಪ್ರಭಾವವು ನಿನ್ನ ಮೇಲೂ ಪರಿಣಾಮ ಬೀರಿದಂತೆ ಕಾಣುತ್ತದೆ. ನೀನೂ ನಾರಿಯಲ್ಲವೇ! ನಾರಿಯರ ಅವರೋಧಶಕ್ತಿಯು ತುಂಬಾ ದುರ್ಬಲವಾಗಿರುತ್ತದೆ. ಆದರೆ ನೀನು ಸಹಾ ನೆನಪಿಡು. ನಾನು ಬೌದ್ಧರ ಈ ದುರ್ಬಲ ನೀತಿಯಿಂದಾಗಿ ಇಂದು ಭಾರತ ಚಕ್ರವರ್ತಿಯಾಗಿಲ್ಲ.

ಸಂಘಮಿತ್ರಾ:— ಆದರೆ ಸಾಮ್ರಾಟ್.........

[ಯಾರೋ ಬರುವ ಸಪ್ಪಳ]

ಅಶೋಕ:— ಇನ್ನು ನೀನು ಹೊರಡಬಹುದು ಸಂಘಮಿತ್ರಾ.

ಸಂಘಮಿತ್ರಾ:— ಅಣ್ಣಾ!

ಅಶೋಕ:— (ಶೀಘ್ರವಾಗಿ) ನಡೆ ಸಂಘಮಿತ್ರಾ. ಭಾರತ ಸಾಮ್ರಾಟನು ನಿನಗೆ ಹೊರಟು ಹೋಗಲು ಆಜ್ಞೆ ಕೊಡುತ್ತಿದ್ದಾನೆ.

ಸಂಘಮಿತ್ರಾ:— ಹೋಗುತ್ತೇನೆ ಸಾಮ್ರಾಟ್, ಆದರೆ 'ಹೃದಯ ವಿಶಾಲತೆಯೇ ಶೌರ್ಯ' ಎಂಬುದನ್ನು ಎಂದೆಂದೂ ಮರೆಯಬೇಡ.

[ಹೊರಟು ಹೋಗುತ್ತಾಳೆ]

ಅಶೋಕ:— (ಸ್ವಗತ) ಹೃದಯ ವಿಶಾಲತೆಯೇ ನಿಜವಾದ ಶೌರ್ಯ. ನಿಜ ಸಂಘಮಿತ್ರಾ, ನೀನು ಏನು ಹೇಳಬೇಕೆಂದಿರುವೆ ಎಂಬುದನ್ನು ನಾನು ಬಲ್ಲೆ. ನೀನು ಕಳಿಂಗದ ಯುವರಾಜನನ್ನು ಪ್ರೀತಿಸುತ್ತಿರುವೆ. ನೀನು ನನಗೆ ಮೋಸ ಮಾಡಲಾರೆ. ನೀನು ನನ್ನ ತಂಗಿ! ಅವನು ಶತ್ರು!

[ರಾಧಾಗುಪ್ತನು ಕಳಿಂಗ ಕುಮಾರನೊಡನೆ ಪ್ರವೇಶ ಮಾಡುತ್ತಾನೆ. ಒಳಗೆ ಬರುತ್ತಲೇ ಅವನೊಂದು ಬದಿಗೆ ಸರಿದು ನಿಲ್ಲುತ್ತಾನೆ. ಕುಮಾರನು ರಣವೇಶದಲ್ಲಿದ್ದಾನೆ. ಪ್ರಶಸ್ತ ಲಲಾಟ, ಉನ್ನತ ವಕ್ಷಸ್ಥಳ, ನಸು ಶ್ಯಾಮಲ ವರ್ಣ, ವಿಶ್ವಾಸ ತುಂಬಿದ ನೇತ್ರ, ಆಜಾನುಬಾಹು, ಎದುರುಗಡೆ ನಿಂತಿರುವ 'ರಕ್ಷೆ ಮತ್ತು ದಂಡ'ದ ಪ್ರತೀಕ ಸಾಮ್ರಾಟನನ್ನು ಕಂಡು ರೆಪ್ಪೆ ಹೊಡೆಯುವುದನ್ನು ಮರೆತುಬಿಡುತ್ತಾನೆ]

ರಾಧಾಗುಪ್ತ:— ಸಾಮ್ರಾಟರಿಗೆ ಜಯವಾಗಲಿ. ಕಳಿಂಗದ ಯುವರಾಜನು ಉಪಸ್ಥಿತನಿದ್ದಾನೆ.

ಅಶೋಕ:— (ಕರ್ಕಶ ಸ್ವರದಲ್ಲಿ) ಮಹಾಮಾತ್ಯ, ಕಳಿಂಗಕ್ಕೆ ಯುವರಾಜನಿಲ್ಲ, ಇವನೋರ್ವ ಸಾಮಾನ್ಯ ಕೈದಿ.

ಕುಮಾರ:— ಅಶೋಕಾ! ವಾಸ್ತವಿಕತೆಯಲ್ಲಿ ಎಲ್ಲರೂ ಸಾಧಾರಣರೇ ಇರುತ್ತಾರೆ. ನೀನು ಸಹ ಮೊದಲು ಅಶೋಕ; ನಂತರ ಸಾಮ್ರಾಟ.

ಅಶೋಕ:— (ಸಿಟ್ಟಿನಿಂದ) ಬಂಧೀ! ನೀನು ಯಾರೊಡನೆ ಮಾತಾಡುತ್ತಿರುವಿ ಎಂದು ತಿಳಿದಿರುವೆಯೇನು?

ಕುಮಾರ:— ಸರಿಯಾಗಿ ತಿಳಿದಿರುವೆ. ನಾನು ಮಗಧದ ಕಟುಕ ಸಾಮ್ರಾಟ ಚಂಡಾಶೋಕನೊಡನೆ ಮಾತಾಡುತ್ತಿದ್ದೇನೆ. ಯಾರು ತನ್ನ ಲಕ್ಷಾಂತರ ಮಕ್ಕಳ ರಕ್ತವನ್ನು ಕುಡಿಯಲು ವಸುಂಧರೆಯನ್ನು ವಿವಶರನ್ನಾಗಿ ಮಾಡಿದರೋ ಆ ಚಂಡಾಶೋಕನೊಡನೆ!

ಅಶೋಕ:— (ಕೃದ್ಧನಾಗಿ) ಕಳಿಂಗದ ಪ್ರಜೆಗಳಂತೆ ನೀನು ಬರೀ ವಾಚಾಳನಾಗಿರದೆ ದುಷ್ಟನೂ ಆಗಿದ್ದಿ. ಈ ಅಸಭ್ಯತೆಗೆ ನನ್ನ ಹತ್ತಿರವಿರುವುದು ಒಂದೇ ಪ್ರತೀಕಾರ. ಅದು 'ಕತಾರ' (ಖಡ್ಗ)

[ಖಡ್ಗ ತೋರಿಸುತ್ತಾನೆ]

ಕುಮಾರ:— ಕಟುಕನ ಕೈಯಲ್ಲಿ ಕತಾರಿಯಲ್ಲದೆ ಇನ್ನೇನು ಇರಲು ಸಾಧ್ಯ!

ಅಶೋಕ:— ಬಂದೀ, ನಾನೀಗಲೇ ನಿನ್ನ ತಲೆ ಕಡಿಯಬಲ್ಲೆ.

ಕುಮಾರ:— ಯಾವ ಧರಿತ್ರೀಮಾತೆಯು ತನ್ನ ಲಕ್ಷಾಂತರ ಮಕ್ಕಳ ರಕ್ತವನ್ನು ವಿವಶಳಾಗಿ ಕುಡಿದಿದ್ದಾಳೋ, ಇನ್ನೊಬ್ಬ ಪುತ್ರನ ರಕ್ತ ಕುಡಿಯಲು ಅವಳಿಗೆ ಕಷ್ಟವಾಗಲಿಕ್ಕಿಲ್ಲ.

ರಾಧಾಗುಪ್ತ:— ದುಷ್ಟತೆಗೂ ಸೀಮೆಯಿದೆ ಕುಮಾರ, ಎಚ್ಚರಿಕೆಯಿಂದ ಮಾತಾಡು.

ಕುಮಾರ:— ನಿನಗೂ ಸಿಟ್ಟುಬಂತೇನು? ಅಂತೂ ವಿಷ್ಣುಗುಪ್ತ ಚಾಣಕ್ಯನ ಶಿಷ್ಯ ತಾನೇ? ಕೇಳು ರಾಧಾಗುಪ್ತ, ನಿನ್ನ ಕಟುಕ ಸಾಮ್ರಾಟನಿಗೂ ಒಂದು ದಿನ ತನ್ನ ಈ ರಕ್ತಪ್ಲವನದ ಮುಯ್ಯಿ ತೀರಿಸಲೇ ಬೇಕಾಗುತ್ತದೆ. ಒಂದು ದಿವಸ ಅವನಿಗೆ ತನ್ನ ಹೃದಯವೇಭರ್ತ್ಸನೆ ಮಾಡುವುದು ಖಂಡಿತ.

ಅಶೋಕ:— (ಅಟ್ಟಹಾಸದಿಂದ) ಅದೇ ಅದೇ ಉಪಗುಪ್ತನ ಸ್ವರ, ಅವೇ ಬೌದ್ಧಭಿಕ್ಷುವಿನ ವಾಣಿ, ಬೌದ್ಧರ ಈ ದುರ್ಬಲ ನೀತಿಯಿಂದಾಗಿಯೇ ನಿನ್ನ ಅಧಃಪತನವಾಯ್ತು ಕೈದೀ.

ಕುಮಾರ:— ಪತನವಾದುದು ನನ್ನದಲ್ಲ ಅಶೋಕಾ; ಪತನವಾದುದು ನಿನ್ನದು.

ಅಶೋಕ:— ನನ್ನ ಪತನ! ಭಾರತ ಏಕಚಕ್ರಾಧಿಪತಿಯ ಪತನ! ಅಸಂಭವ ಬಂಧೀ......ಅಸಂಭವ......

ಕುಮಾರ:— ಅಸಂಭವವಲ್ಲ ಅಶೋಕಾ, ಸಂಪೂರ್ಣ ಸಂಭವವಾಗಿದೆ. ಲಕ್ಷಾಂತರ ಹತಮಾನವರ ರಕ್ತವು ನಿನ್ನ ಪತನವನ್ನು ಸಾರುತ್ತಿವೆ. ಸಹಸ್ರಾರು ಗಾಯಗೊಂಡವರ ಆರ್ತ ಚೀತ್ಕಾರದಲ್ಲಿ ನಿನ್ನ ಪತನವು ಗುಂಯ್ ಗೊಡುತ್ತಿದೆ. ಸುಮಂಗಲೆಯರ ಬಲಾಟದ ತಿಲಕದಲ್ಲಿ, ಮಾತೆಯರ ಮಡಿಲಲ್ಲಿ, ಶಿಶುಗಳ ನಿರೀಹ ದೃಷ್ಟಿಯಲ್ಲಿ ಎಲ್ಲೆಲ್ಲಿಯೂ ನಿನ್ನ ಪತನವೇ ಕಾಣುತ್ತಿದೆ ಅಶೋಕಾ! ಕಳಿಂಗದ ಹಾಳುಗೆಡಹಲ್ಪಟ್ಟ ಗ್ರಾಮಗಳು, ಮರುಭೂಮಿಯಂತಿರುವ ಪ್ರದೇಶಗಳು ಎಲ್ಲವೂ ನಿನ್ನ ಪತನದ ಸಾಕ್ಷಿಯಾಗಿದೆ ಸಾಮ್ರಾಟ್! ನೀನು ಗೆದ್ದೂ ಸೋತೆ ಅಶೋಕಾ. ಆದರೆ ಕಳಿಂಗ ಮಣ್ಣುಗೂಡಿಯೂ ಅಮರವಾಯ್ತು!

ಅಶೋಕ:— ಅಶೋಕ ಸೋತ; ಕಳಿಂಗ ಅಮರವ್ಯಾತು. (ಅಟ್ಟಹಾಸ)

ಕುಮಾರ:— ನೆಗಾಡು ಅಶೋಕ! ನೆಗಾಡು! ಮಗಧದಲ್ಲಿ ನಿನಗೀ ನಗು ಸಿಗಲಿಕ್ಕಿಲ್ಲ. ಅಲ್ಲಿಯ ಮಾರ್ಗಗಳು ರಕ್ತರಂಜಿತವಾಗಿವೆ. ಅಲ್ಲಿಯ ಸಿಂಹಾಸನದ ಸುತ್ತಲೂ ಶವಗಳ ರಾಶಿ ಬಿದ್ದಿವೆ. ಅಲ್ಲಿಯ ಬಂಧೀಹೃದಯಗಳಲ್ಲಿಯ ಚೀತ್ಕಾರಗಳು ವಾತಾವರಣವನ್ನು ವಿಷಯುಕ್ತ ಮಾಡಿವೆ. ಅಶೋಕ್, ನೀನು ಕಳಿಂಗ ಭೂಮಿಯನ್ನು ಗೆದ್ದಿರುವೆ ವಿನಃ ಆತ್ಮವನ್ನಲ್ಲ. ಭೂಮಿಯ ಮೇಲಿನ ವಿಜಯಕ್ಕೆ ವಿಜಯವೆನ್ನುತ್ತಿಯೇನು?

ರಾಧಾಗುಪ್ತ:— ವಿಜಯವಲ್ಲದೆ ಇನ್ನೇನು? ಆತ್ಮವನ್ನು ಯಾರು ನೋಡಿದ್ದಾರೆ. ಶರೀರವು ಸತ್ಯ; ಅದರ ಜಯವೂ ಸತ್ಯ. ಕುಮಾರಾ, ನಿನ್ನ ಶಬ್ದಜಾಲವು ನಿನ್ನ ಪರಾಜಯವನ್ನು ವಿಜಯವನ್ನಾಗಿ ಬದಲಿಸಲಾರದು ಎಂಬುದನ್ನು ಸದಾ ನೆನಪಿಡು.

ಕುಮಾರ:— ನನ್ನ ಪರಾಜಯ! ನನ್ನನ್ನು ಯಾರು ಸೋಲಿಸಿದ್ದಾರೆ!

ರಾಧಾಗುಪ್ತ:— ಅಖಂಡ ಭಾರತ ಸಾಮ್ರಾಟನಾದ ಚಕ್ರವರ್ತಿ ಅಶೋಕ!

ಕುಮಾರ:— ರಾಧಾಗುಪ್ತ, ಹದಿನಾರು ರಾಜ್ಯಗಳನ್ನೇ ಕಿತ್ತೊಗೆದ ಕೌಟಿಲ್ಯನ ಕುತಂತ್ರಕ್ಕೆ ಸೋಲದ ಮಗಧರಾಜ್ಯಕ್ಕೆ ದಿಟ್ಟತನದಿಂದ ಎದುರು ನಿಂತ ಕಳಿಂಗವನ್ನು ಯುವರಾಜನು ಜೀವಂತವಿರುವ ವರೆಗೆ ಯಾರೂ ಎಂದೂ ಸೋಲಿಸಲಾರರು.

ಅಶೋಕ:— ಬಂಧೀ, ನೀನು ನನಗೆ ವಂದಿಸುವುದಿಲ್ಲವೇನು?

ಕುಮಾರ:— ಕಳಿಂಗದ ರಾಜಕುಮಾರನು ಕಳಿಂಗದ ಸಿಂಹಾಸನವಲ್ಲದೆ ಇನ್ನಾರ ಮುಂದೆಯೂ ತಲೆ ತಗ್ಗಿಸಲು ಕಲಿತಿಲ್ಲ.

ಅಶೋಕ:— ಕಳಿಂಗ ಸಿಂಹಾಸನ ಧೂಳೀಪಟವಾಗಿದೆ ಕುಮಾರಾ! ಈಗ ನಾನದರ ಸಾಮ್ರಾಟ!

ಕುಮಾರ:— ಕಳಿಂಗದ ಯುವರಾಜ ಜೀವಂತನಾಗಿರುವ ತನಕ ಯಾರೂ ಅದರ ಸ್ವಾಮಿಯಾಗಲಾರ ಅಶೋಕ್!

ಅಶೋಕ:— ಆಗುವ ಮಾತಂತಿರಲಿ! ಕಳಿಂಗ ರಾಜಮುಕುಟವು ನನ್ನ ಕಾಲಬುಡದಲ್ಲಿ ಹೊರಳಾಡುತ್ತಿದೆ.

ಕುಮಾರ:— ಕಾಲಬುಡದಲ್ಲಿರುವುದಂತೂ ಬಹು ದೂರದ ಮಾತು; ಅದರೆಡೆಗೆ ದೃಷ್ಟಿಯೆತ್ತಿ ನೋಡಿದವರ ಕಣ್ಣು ಕೀಳಿಸಲಾಗುತ್ತದೆ.

ರಾಧಾಗುಪ್ತ:— ಸಾಕು ಮಾಡು ಬಂಧೀ......ಇಲ್ಲದಿದ್ದಲ್ಲಿ......

ಕುಮಾರ:— ಇಲ್ಲದಿದ್ದಲ್ಲಿ ನಿನ್ನ ತಲೆ ಕಡಿಯಲಾಗುತ್ತದೆ. (ಅಟ್ಟಹಾಸ) ನಿನ್ನಲ್ಲಿ ತಲೆ ಕಡಿಯುವುದಕ್ಕಿಂತ ಹೆಚ್ಚು ಮಾಡಿ ತೋರಿಸುವ ಸಾಮರ್ಥ್ಯ ಎಲ್ಲಿದೆ? ನೀವೆಲ್ಲಾ ಹೇಡಿಗಳು! ಹೇಡಿಗಳು ಎಂದಾದರೂ ಯಾರನ್ನಾದರೂ ಸೋಲಿಸಿದ್ದಾರೇನು?

ಅಶೋಕ:— ಮಹಾಮಾತ್ಯಾ! ವ್ಯರ್ಥವಾದ ಊಹಾಪೋಹಗಳನ್ನು ಬಿಟ್ಟ ನನ್ನಧೀನತೆಯನ್ನು ಒಪ್ಪಿಕೊಳ್ಳುವಂತೆ ಹೇಳು. ವೀರರಿಗೆ ಕ್ಷಮಿಸಲೂ ಅಶೋಕನಿಗೆ ತಿಳಿದಿದೆ.

[ರಾಧಾಗುಪ್ತ ಏನೋ ಹೇಳಲಿಚ್ಛಿಸುತ್ತಾನೆ. ಕುಮಾರನು ತಡೆದು]

ಕುಮಾರ:— ವೀರಪುರುಷನು ಕ್ಷಮೆಯನ್ನೆಂದೂ ಗ್ರಹಣಮಾಡುವುದಿಲ್ಲ. ಕಳಿಂಗದ ಯುವರಾಜನು ಜೀವಂತವಿರುವ ತನಕ ವೀರತನಕ್ಕೆಂದೂ ಕಲಂಕ ತರಲಾರ!

[ಅಶೋಕನು ತಳಮಳಿಸುತ್ತಾನೆ]

ಅಶೋಕ:— ಮಹಾಮಾತ್ಯ! ಇದೇ ಕೊನೆಯ ನಿರ್ಣಯವೋ? ಎಂದು ಕೈದಿಯನ್ನು ವಿಚಾರಿಸು.

ಕುಮಾರ:— ವೀರಪುರುಷನು ಎಂದೂ ಎರಡುಸಲ ಯೋಚಿಸುವುದಿಲ್ಲ ಅಶೋಕಾ!

ಅಶೋಕ:— ಹಾಗಾದರೆ ಮಹಾಮಾತ್ಯ! ಬಂಧಿಯನ್ನು ಕೊಂಡು ಹೋಗಿ ಚಂಡೀಗಾರನಿಗೊಪ್ಪಿಸು. ನಾಳೆಯ ಸೂರ್ಯನ ಪ್ರಥಮ ಕಿರಣದೊಂದಿಗೆ ಬಂಧಿಯ ತಲೆಯು ನನ್ನ ಚರಣದಲ್ಲಿರಬೇಕು ಎಂದು ಆಜ್ಞಾಪಿಸು.

ರಾಧಾಗುಪ್ತ:— ಅವಶ್ಯವಾಗಿ, ಎಲ್ಲವೂ ತಮ್ಮಿಚ್ಛೆ ಪ್ರಭೋ!

ಕುಮಾರ:— ಹೂಂ, ಇದೇ ನಿನ್ನ ವೀರತೆಯೇನು? ಇದೇ ನಿನ್ನ ಶೌರ್ಯವೇನು? ಇದೇ ಬಲದಿಂದಲ್ಲವೇ ನೀನು ಸಾಮ್ರಾಟನಾದುದು? ಓರ್ವ ಕೈದಿಯ ತಲೆ ತಗ್ಗಿಸಲು ನಿನ್ನಿಂದ ಸಾಧ್ಯವಾಗಲಿಲ್ಲ. ತಲೆ ಉರುಳಿಸಲಿಕ್ಕಾಗಿ ಸ್ಮಶಾನದಲ್ಲಿ ಹದ್ದುಗಳೂ ತಿರುಗುತ್ತಿವೆ. ಅವು ವೀರರುಗಳಲ್ಲ.

[ಕೂಡಲೇ ಅಶೋಕನು ಕತ್ತೆತ್ತಿ ಕುಮಾರನನ್ನು ನೋಡುತ್ತಾನೆ]

ರಾಧಾಗುಪ್ತ:— ಸಾಕುಮಾಡು ಕುಮಾರ! ಸಾಮ್ರಾಟನಿಗೆ ಬುದ್ಧಿ ಹೇಳುವ ದುಷ್ಟತೆಯನ್ನು ಮಾಡಬೇಡ. ಸಿಪಾಹೀ, ಭಂಧಿಯನ್ನು ತಾ.

ಕುಮಾರ:— ನನ್ನ ಕರೆತರಲು ಸೈನಿಕರೇಕೆ? ನಡೆ ಮಹಾಮಾತ್ಯ!

[ಕುಮಾರನು ದೃಢತೆಯಿಂದ ಹೋಗುತ್ತಾನೆ. ಹಿಂದಿನಿಂದ ರಾಧಾಗುಪ್ತ ಅನುಸರಿಸುತ್ತಾನೆ. ಅವರ ನಿರ್ಗಮನವನ್ನು ಅಶೋಕನು (ಸ್ತಬ್ಧ) ಮೌನದಿಂದ ನೋಡುತ್ತಾನೆ]

ಅಶೋಕ:— (ಸ್ವಗತ) ಕಳಿಂಗದ ಜನರು ಎಷ್ಟು ದುಷ್ಟರು ಹಾಗೂ ಅಸಭ್ಯರು. ಎಲ್ಲವೂ ನಷ್ಟವಾದಾಗ್ಯೂ ಅಭಿಮಾನ ಮಾತ್ರ ಹಾಗೇ ಇದೆ. ಹಗ್ಗ ಉರಿಯಹತ್ತಿದೆ ಆದರೆ ತುಂಡಾಗಿಲ್ಲ. ಮೃತ್ಯು ಹತ್ತಿರ ಬಂದಂತೆ ಅವರ ದೃಢತೆ ಹೆಚ್ಚುತ್ತಿದೆ. ಸಾಹಸ ತಲೆ ಎತ್ತುತ್ತದೆ. (ನಕ್ಕು) ಆದರೆ ಅಶೋಕನನ್ನು ಯಾರು ಗೆದ್ದಿದ್ದಾರೆ? ಅವನ ಕ್ರೋಧಾನಲದಿಂದ ಯಾರು ತಪ್ಪಿಸಿಕೊಂಡಿದ್ದಾರೆ? ಅಶೋಕನ ಬಲಪರಾಕ್ರಮ ಯಾರಿಗೆ ತಿಳಿದಿಲ್ಲ?......ಆದರೆ ರಾಜಕುಮಾರ ನಿಂದಿಸಿದ 'ಕೈದಿಯೊಬ್ಬನ ತಲೆ ತಗ್ಗಿಸಲಾಗಲಿಲ್ಲ; ತಲೆಬುರುಡೆ ಉರುಳಿಸಲಿಕ್ಕಾಗಿ ಸ್ಮಶಾನದಲ್ಲಿ ಹದ್ದುಗಳೂ ತಿರುಗುತ್ತಿವೆ'......ಇಲ್ಲ! ಇಲ್ಲ! ಇವೆಲ್ಲವೂ ಶಬ್ದಜಾಲ. ಪರಾಜಯವನ್ನು ಮಾತ್ಸರ್ಯದಿಂದ ತೋರಿಸುವ ಇದೊಂದು ಉಪಕ್ರಮ. ಆದರೆ (ಕೂಡಲೇ ಉದ್ವಿಗ್ನನಾಗಿ) ಆದರೆ ಗಾಯ

ಗೊಂಡವರ ಚೀತ್ಕಾರ......ಕೈದಿಯರ ಕರುಣ ರೋಧನ......ಪೀಡಿತರ ಹಾಹಾಕಾರ......ಉಫ್ (ಎದೆ ಒತ್ತುತ್ತಾನೆ) ಒಮ್ಮಿಂದೊಮ್ಮೆಲೆ ನನಗಿದೇನಾಯ್ತು? ಹೃದಯದಲ್ಲೇಂಥಾ ಪೀಡೆಯಾಗುತ್ತಿದೆ? ಕಣ್ಣೇಕೆ ಎಳೆಯುತ್ತಿವೆ? (ನೈ ಅಸ್ಥಿರವಾಗಿ ಮಾಲುತ್ತಾನೆ)......ಓಹ್ ಇದೇನಾಗುತ್ತಿದೆ ನನಗೆ? ನನ್ನನ್ನಾರು ಕರೆಯುತ್ತಿದ್ದಾರೆ? ಇದು ಯಾರು ನನಗೆ ತಮಾಷೆ ಮಾಡುತ್ತಿರುವುದು?......ಯಾರದು?

[ಸಂಘಮಿತ್ರಾಳ ಪ್ರವೇಶ]

ಸಂಘಮಿತ್ರಾ:— ಸಾಮ್ರಾಟರಿಗೆ ಜಯವಾಗಲಿ!

ಅಶೋಕ:— (ಬೆಚ್ಚಿಬಿದ್ದು) ಯಾರು?

ಸಂಘಮಿತ್ರಾ:— ನಾನು!

ಅಶೋಕ:— ಸಂಘಮಿತ್ರಾ!

ಸಂಘಮಿತ್ರಾ:— ಹಾಂ ಸಾಮ್ರಾಟ್, ಕುಮಾರನ ಭಾಗ್ಯ ನಿರ್ಣಯವಾಯ್ತು!

ಅಶೋಕ:— (ಹತೋಟಿಗೆ ಬಂದು) ಓಹ್, ನೀನು ಬಂಧಿಯ ವಿಷಯ ಮಾತಾಡುತ್ತಿರುವಿ? ಸಂಘಮಿತ್ರಾ, ನಿನ್ನ ವಿವಾಹವು ಅವನೊಡನೆ ಆಗದಿದ್ದುದು ಒಳ್ಳೆಯದೇ ಆಯ್ತು. ಕಳಿಂಗದ ಜನರೇ ದುಷ್ಟರು. ನಾನವನನ್ನು ಕ್ಷಮಿಸಲು ಸಿದ್ಧನಿದ್ದೆ. ಅವನು ಎಷ್ಟೋ ತಿಳಿಸಿದಾಗ್ಯೂ ನನ್ನ ಅಧೀನ ಒಪ್ಪಲು ಸಿದ್ಧನಿರಲಿಲ್ಲ.

ಸಂಘಮಿತ್ರಾ:— ಅಧೀನತೆ ಸ್ವೀಕರಿಸಲು ಅವನ ಹತ್ತಿರ ಇದೆ ಯಾದರೂ ಏನು ಪ್ರಭೋ? ಸಮಸ್ತ ರಾಜ್ಯವು ಸ್ಮಶಾನಮಯವಾಗಿದೆ. ಈ 'ಉರ್ವರ' ಭೂಮಿಯು ತನ್ನ ಪ್ರೀತಿಯ ನಿವಾಸಿಗಳ ಶವಾಲಯವಾಗಿದೆ. ಅಲ್ಲಿಯ ಮಾರ್ಗಗಳಲ್ಲಿ ಹೃಷ್ಟಪುಷ್ಟ ಮತ್ತು ಬಹುಮೂಲ್ಯ ಆನೆಗಳ ಅಂಗಾಂಗಳು ಬಿದ್ದಿವೆ. ಪ್ರೀತಿಯಿಂದ ಕಳಿಂಗದಿಂದ ತರಿಸಿ ನಾವೆಲ್ಲರೂ ಉಡುತ್ತಿದ್ದ ವಸ್ತ್ರಗಳು ಇಂದು ಸೀಳುಸೀಳಾಗಿ ಹಾರಾಡುತ್ತಿವೆ. ಎಷ್ಟು ಜನರಿಂದ ತುಂಬಿ ತುಳುಕಾಡುತ್ತಿತ್ತು ಕಳಿಂಗ ನಗರ! ಆದರೆ ಇಂದು......

ಅಶೋಕ:— (ಒಮ್ಮಿಂದೊಮ್ಮೆಲೆ) ನೀನೂ ಅವನ ರಾಜ್ಯ ನೋಡಲು ಹೋದಿಯೇನು ಸಂಘಮಿತ್ರಾ?

ಸಂಘಮಿತ್ರಾ:— ಹೋಗಲೇ ಬೇಕಾಗುತ್ತದೆ. ನಿಮ್ಮ ಶೂರವೀರ ಸೈನಿಕರು ಮನೆಮನೆಗಳಿಂದ ನಿರಪರಾಧಿ, ಸರಳ, ಮುಗ್ಧ ಕಳಿಂಗ ವಾಸಿಗಳ ವಧೆ ಮಾಡುತ್ತಾರೆ. ಇದನ್ನು ಕಂಡು ಮಹಾನಾಶವೂ ನಾಚಿಕೆಯಿಂದ ತಲೆ ತಗ್ಗಿಸಿದೆ ಸಾಮ್ರಾಟ್!

ಅಶೋಕ:— ಇದು ಯುದ್ಧ ಸಂಘಮಿತ್ರಾ, ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲಲೇ ಬೇಕಾಗುತ್ತದೆ.

ಸಂಘಮಿತ್ರಾ:— ನಾನು ವಿರೋಧ ವ್ಯಕ್ತಪಡಿಸುತ್ತಿಲ್ಲ ಸಾಮ್ರಾಟ್; ಸೈನಿಕರ ಕೆಲಸಗಳನ್ನು ವರ್ಣಿಸುತ್ತಿದ್ದೇನೆ.

ಅಶೋಕ:— ನಿಜ, ಅವರಿಗೆ ಇದೇ ಆಜ್ಞೆ ಕೊಡಲ್ಪಟ್ಟಿದೆ.

ಸಂಘಮಿತ್ರಾ:— ಸಾಮ್ರಾಟನ ಸಿಪಾಹಿಗಳು ಎಲ್ಲಿಯ ವರೆಗೆ ಆಜ್ಞಾಕಾರಿಗಳೆಂದರೆ ಮನೆಮನೆಯಲ್ಲಿರುವ ಸಣ್ಣ ಸಣ್ಣ ಮಕ್ಕಳನ್ನೂ ಹೆಂಗಸರನ್ನೂ ಸಹ ಬಿಡದೆ ಹೊರಗೆಳೆತಂದು ಮನೆಗಳಿಗೆ ಬೆಂಕಿಯಿಡುತ್ತಾರೆ. ಆದುದರಿಂದಲೇ ಕುಮಾರನು ಸ್ಮಶಾನಕ್ಕೆ ತಲೆಕೊಟ್ಟು ತಪ್ಪು ಮಾಡಿದ.

ಅಶೋಕ:— ಬಂಧಿಯ ತಲೆ ಕಡಿಯಲು ನಾನು ಆಜ್ಞೆ ಕೊಟ್ಟುದುದು ನಿನಗೆ ತಿಳಿಯದೇನು?

ಸಂಘಮಿತ್ರಾ:— ಗೊತ್ತು ಇಲ್ಲ. ಆದರೆ ಊಹಿಸಬಲ್ಲೆ. ಹುಟ್ಟಿದಂದಿನಿಂದ ನಿಮ್ಮನ್ನು ಬಲ್ಲೆ. ನಿಮ್ಮ ಮನಸ್ಸಿನ ರೀತಿಯೂ ನನಗೆ ಚಿರಪರಿಚಿತವಾಗಿದೆ. ಮಗಧ ಸಿಂಹಾಸನವನ್ನೂ ನೀವು ದೊಡ್ಡ ಅಣ್ಣ 'ಸುಸೀಮ'ನ ತಲೆ ಕಡಿದೇ ತೆಗೆದುಕೊಂಡಿದ್ದೀರಿ ತಾನೇ? ಇತರರ ಹಾಗೆ ಕೇಳಿ ತೆಗೆದುಕೊಳ್ಳಲಿಲ್ಲ. ಕೇಳುವುದು ದಾನಕ್ಕೆ ಸಮ. ವೀರನಿಗೆ ದಾನವು ಹೀನವಾಗಿದೆ.

ಅಶೋಕ:— (ತಕ್ಷಣ) ಸಿಂಹಾಸನದ ಚರ್ಚೆಗಿಲ್ಲಿ ಆಸ್ಪದವಿಲ್ಲ ಸಂಘಮಿತ್ರಾ!

ಸಂಘಮಿತ್ರಾ:— ಸಿಂಹಾಸನವು ಗೌಣವಾಗಿದೆ. ಅಣ್ಣಾ, ಚರ್ಚೆಯು ನಿಮ್ಮ ಸ್ವಭಾವದ್ದಾಗಿದೆ. ಕುಮಾರನಿಗೆ ಶಿರಚ್ಛೇದನದ ಆಜ್ಞೆಕೊಟ್ಟು ತಾವು ತಮ್ಮ ರಾಜ್ಯಸತ್ತೆಯದ್ದಷ್ಟೇ ಅಲ್ಲ, ಸ್ವಭಾವ ರಕ್ಷಣೆಯನ್ನು ಮಾಡಿಕೊಂಡಿದ್ದೀರಿ.

ಅಶೋಕ:— (ಉಚ್ಚ ಸ್ವರ) ಸ್ವಭಾವ, ಮರ್ಯಾದೆ ಸಂಘಮಿತ್ರಾ

ಅಶೋಕನು ತನ್ನ ಶಕ್ತಿಯಲ್ಲಿ ಪೂರ್ಣ ವಿಶ್ವಾಸವಿಡುತ್ತಾನೆ. ದಯೆ ಮತ್ತು ಕರುಣೆಗಳನ್ನವನು ತನ್ನ ಸಾಮ್ರಾಜ್ಯದ ಶತ್ರುಗಳೆಂದು ತಿಳಿಯುತ್ತಾನೆ. ಸುಸೀಮನು ಅಪ್ಪಾಜಿಯ ರಾಜ್ಯಕಾಲದಲ್ಲಿಯೂ ತಕ್ಷಶಿಲೆಯ ವಿದ್ರೋಹವನ್ನು ಹತ್ತೋಟಿಗೆ ತರಲಾರದವನಾಗಿದ್ದನು. ಅವನು ಬೌದ್ಧರ ದುರ್ಬಲ ನೀತಿಯ ಪಕ್ಷಪಾತಿಯಾಗಿದ್ದನು. ಅವನು ಮಾನವತೆಯ ಕೂಗು ಮುಂತಾದ ಭಾವನೆಗಳಲ್ಲಿ ವಿಶ್ವಾಸವಿಡುತ್ತಿದ್ದನು.

ಸಂಘಮಿತ್ರಾ:— ನಿಸ್ಸಂದೇಹವಾಗಿ. ದೊಡ್ಡ ಅಣ್ಣನವರು ರಾಜನಾಗಲು ಇರಲಿಲ್ಲ! ಅವರು ಸಿಂಹಾಸನಾರೋಹಣ ಮಾಡುತ್ತಿದ್ದರೆ ಮೌರ್ಯ ವಂಶದ ಪತಾಕೆ ಎಲ್ಲೆಲ್ಲೂ ಹೇಗೆ ಹಾರಾಡುತ್ತಿತ್ತು! ಸಮಸ್ತ ದೇಶವು ಏಕ ಚಕ್ರಾಧಿಪತ್ಯದಲ್ಲಿ ಹೇಗೆ ಸೇರುತ್ತಿತ್ತು? ವಸುಂಧರೆಯು ತನ್ನ ಮಕ್ಕಳ ರಕ್ತ ಎಂತು ಕುಡಿಯುತ್ತಿದ್ದಳು? ಆಕಾಶದಿಂದ ಮಾನವನ ಚೀತ್ಕಾರ ಸಂಗೀತವೆಂತು ಕೇಳಸಿಗುತ್ತಿತ್ತು?

ಅಶೋಕ:— ಚೀತ್ಕಾರದಲ್ಲಿ ಸಂಗೀತವಿದೆ ಎಂದು ನಿನಗೂ ಗೊತ್ತೇನು?

ಸಂಘಮಿತ್ರಾ:— ಹಾಂ ಸಾಮ್ರಾಟ್ ಇರುತ್ತದೆ. ಇದನ್ನು ಕೇಳಿಯೇ ಮಾನವನು ಹೆದರಲು ಕಲಿಯುತ್ತಾನೆ.

ಅಶೋಕ:— (ನಗುತ್ತಾ) ಶಬ್ದಗಳ ಮಾಯಾಜಾಲ! ಪುನಃ ಅದೇ ಶಬ್ದಗಳ ಮಾಯಾಜಾಲ! ಯಾರು ಜೀವನಕ್ಕೆ ಹೆದರುತ್ತಾನೋ ಅವನು ಜೀವಿಸಿರಲೆಂತು ಸಾಧ್ಯ?

ಸಂಘಮಿತ್ರಾ:— ಹೇಗೆ ಸಾಮ್ರಾಟರು ಮತ್ತು ಅವನ ಸೈನಿಕರು ಜೀವಿಸುತ್ತಾರೋ ಹಾಗೆ!

ಅಶೋಕ:— ಸಾಮ್ರಾಟನ ಹಾಗೆ ಅಂದರೆ ನಾನು ಜೀವಿಸಿದ್ದ ಹಾಗೆ!

ಸಂಘಮಿತ್ರಾ:— ಹಾಂ ಸಾಮ್ರಾಟ್.

ಅಶೋಕ:— ಸಂಘಮಿತ್ರಾ, ನೀನು ಬುದ್ಧಿಹೀನ ಬೌದ್ಧರೊಡನೆ ಬೆರೆಯುತ್ತಿದ್ದೀಯೇ; ಆದುದರಿಂದಲೇ ನೀನು ಈ ರಹಸ್ಯಮಯ ಭಾಷೆಯನ್ನಾಡುತ್ತಿರುವೆ. ಬಂಧಿಯೂ ಕೆಲವೊಂದು ಮಾತು ಹೀಗೇ ಹೇಳಿದ.

ಸಂಘಮಿತ್ರಾ:— ಅದೇನು ಹೇಳಿದ ಸಾಮ್ರಾಟ್?

ಅಶೋಕ:— ನೀನೆಂಥಾ ವೀರ! ಓರ್ವ ಕೈದಿಯ ತಲೆ ತಗ್ಗಿಸಲೂ

ನಿನ್ನಿಂದಾಗಲಿಲ್ಲ. ತಲೆಬುರುಡೆ ಉರುಳಿಸಲಿಕ್ಕಾಗಿ ಸ್ಮಶಾನದಲ್ಲಿ ಹದ್ದುಗಳೂ ತಿರುಗಾಡುತ್ತಿವೆ. (ವಿಕಟ ನಗು) ಇದೆಲ್ಲಾ ವಾಗ್ಜಾಲ ಭುಜಬಲವೇ ನಿಜ ವಾದ ಶೌರ್ಯ. ಹೃದಯ ಮತ್ತು ಆತ್ಮದ ಕಲ್ಪನೆ ಹೆಂಗಸರಿಗಾಗಿ ಮತ್ತು ಭಿಕ್ಷುಗಳಿಗಾಗಿ ಇದೆ.

ಸಂಘಮಿತ್ರಾ:— ಹೆಂಗಸರನ್ನು ಭಿಕ್ಷುಗಳೊಡನೆ ತುಲನೆ ಮಾಡಿ ದುದಕ್ಕಾಗಿ ಧನ್ಯವಾದ ಸಾಮ್ರಾಟ್! ಆದರೆ ನಾನೊಂದು ಮಾತು ಕೇಳಲೇನು?

ಅಶೋಕ:— ಕೇಳು ಸಂಘಮಿತ್ರಾ. (ನಿಶ್ವಾಸ) ಒಂದೆರಡು ಮಾತು ಕೇಳಲು ನನಗೂ ಇಚ್ಛೆಯಾಗುತ್ತಿದೆ.

ಸಂಘಮಿತ್ರಾ:— ನಿಮಗೂ ಕೇಳಲಿಕ್ಕಿತ್ತೇನು?

ಅಶೋಕ:— ಹೂಂ, ಇಚ್ಛೆಯೇನು ಇತ್ತು!......

ಸಂಘಮಿತ್ರಾ:— ಹಾಗಾದರೆ ಕೇಳಿರಿಲ್ಲಿ. ನಾನು ಯಾವಾಗಲೂ ನಿಮಗೆ ಉಪದ್ರವ ಕೊಡುತ್ತಲೆ ಇರುತ್ತೇನೆ. ತಾವೇನು ಕೇಳಬ್ಛಿಸುತ್ತೀರಿ ಸಾಮ್ರಾಟ್!

ಅಶೋಕ:— ಏನೂ ಇಲ್ಲ ಸಂಘಮಿತ್ರಾ, ನೀನೇ ಕೇಳು.

ಸಂಘಮಿತ್ರಾ:—(ಹಟಮಾಡುತ್ತಾ)ತಾವೇ ಕೇಳಿರಲ್ಲಾ ಸಾಮ್ರಾಟ್.

ಅಶೋಕ:— ಸಂಘಮಿತ್ರಾ!

ಸಂಘಮಿತ್ರಾ:— ತಾವೇನೋ ಕೇಳಲಿಚ್ಛಿಸುತ್ತೀರಿ ಸಾಮ್ರಾಟ್! ಕೇಳಿ......!

ಅಶೋಕ:— ಕೇಳಲೇನು?

ಸಂಘಮಿತ್ರಾ:— ನನ್ನನ್ನು ಅಯೋಗ್ಯಳೆಂದು ತಿಳಿಯುವಿರಾದರೆ ಕೇಳಿ!

ಅಶೋಕ:— ಹಾಗಲ್ಲ, ಹಾಗಲ್ಲ ಸಂಘಮಿತ್ರಾ! ನಾನು ನಿನ್ನಲ್ಲಿ ಒಂದು ವಿಷಯ ಕೇಳಲಿಚ್ಛಿಸುತ್ತೇನೆ. ಯಾರನ್ನಾದರೂ ವಧೆ ಮಾಡಬೇಕಾ ದರೆ ಬೇರೆ ಏನಾದರೂ ವಿಧ ಇದೆಯೋ?

ಸಂಘಮಿತ್ರಾ:— ನನಗೆ ಅರ್ಥವಾಗಿಲ್ಲ ಸಾಮ್ರಾಟ್! ಬೇರೆ ವಿಧ ಎಂಬ ಬಗ್ಗೆ ತಮ್ಮ ಆಶಯವೇನು?

ಅಶೋಕ:— ಅಂದರೆ ಯಾರ ವಧೆಯು ಮಾಡಲಿದೆಯೋ ಅವನು

ಕೊಲ್ಲಲ್ಪಡಬೇಕು. ಆದರೆ ಅವನು ಸಾಯಬಾರದು. ಅಂತಹ ರೀತಿಯೇನಾದರೂ ಇದೆಯೇ?

ಸಂಘಮಿತ್ರಾ:— ಓಹ್ ಅಂತಹ ರೀತಿ! ಅಂಥಹ ರೀತಿ ನನಗೆ ತಿಳಿದಿಲ್ಲಣ್ಣ! ಬಹುಶಃ ಶಸ್ತ್ರ ಹಿಡಿಯುವ ಯಾರಿಗೂ ತಿಳಿದಿರಲಾರದು.

ಅಶೋಕ:— ಸರಿ, ಹೋಗಲಿ ಬಿಡು!......ಆದರೆ ಹಾಂ, ಸಂಘಮಿತ್ರಾ ಶಸ್ತ್ರಗಳನ್ನು ಹಿಡಿಯುವವರು ಹೇಡಿಗಳಾಗುತ್ತಾರೇನು?

ಸಂಘಮಿತ್ರಾ:— ಇಲ್ಲ! ನಿಮಗೆ ಒಮ್ಮಿಂದೊಮ್ಮೆಲೆ ಏನಾಯ್ತು? ಎಂಥಹ ಪ್ರಶ್ನೆಗಳನ್ನೆಲ್ಲಾ ಕೇಳುತ್ತಿದ್ದೀರಿ?

ಅಶೋಕ:— (ಕಂಪನಗೊಂಡು) ಏಕೋ...ಏನೋ...(ದೃಢನಾಗಿ) ಊಹುಂ, ನನಗೇನಾಗಿಲ್ಲ. ಹೀಗೆಯೇ ಕೆಲವೊಂದು ವಿಷಯ ನೆನೆಪಿಗೆ ಬಂತು. ಏನೂ ಇಲ್ಲ ನಾವು ಆದಷ್ಟು ಬೇಗ ಸಿಂಹಲ ವಿಜಯಕ್ಕೆ ಹೋಗಬೇಕಾಗಿದೆ.

ಸಂಘಮಿತ್ರಾ:— ನಿಜವಾಗಿಯೂ?

ಅಶೋಕ:— ಹಾಂ.

ಸಂಘಮಿತ್ರಾ:— ನಾನೂ ಬರುವೆ.

ಅಶೋಕ:— ಅವಶ್ಯವಾಗಿ. ಅದು ಬಹು ಸುಂದರವಾದ ದೇಶ.

ಸಂಘಮಿತ್ರಾ:— ಮತ್ತು ನಾವು ಸೌಂದರ್ಯೋಪಾಸಕರು. ಅದನ್ನು ನೆಕ್ಕುವವರು......(ನಕ್ಕು)ಸರಿ! ನಾನು ರೇಖಾಳನ್ನು ಕರೆತರುತ್ತೇನೆ. ತಮಗೆ ವಿಶ್ರಾಂತಿಯ ಅಗತ್ಯವಿರಬಹುದು.

ಅಶೋಕ:— ಇಲ್ಲ, ಬೇಡ ಸಂಘಮಿತ್ರಾ! ನಾನು ಹಾಡು ಕೇಳಲಾರೆ. ಮುಂದೆಂದೂ ಕೇಳಲಾರೆ!......

ಸಂಘಮಿತ್ರಾ:— (ಕೂಡಲೇ ತಡೆದು) ತಾವು ಮುಂದೆ ಹಾಡು ಕೇಳುವುದಿಲ್ಲ? ಏಕೆ? ಏನಾಯ್ತು?

ಅಶೋಕ:— ಏನೂ ಇಲ್ಲ ಸಂಘಮಿತ್ರಾ. ಅದುದೇನೂ ಇಲ್ಲ. ಆದರೆ.........ಆದರೆ.........

ಸಂಘಮಿತ್ರಾ:— ಆದರೆ ಏನು ಸಾಮ್ರಾಟ್?

ಅಶೋಕ:— ಸಂಘಮಿತ್ರಾ, ರೇಖಾ ಹಾಡುವಾಗ ನನ್ನ ಕಣ್ಣ ಮುಂದೆ

ಯುದ್ಧಭೂಮಿಯ ದೃಶ್ಯ ಬಂದು ನಿಲ್ಲುತ್ತದೆ. ಅವಳು ಹಾಡುತ್ತಿರುವಾಗ ನನಗೆ ಅವಳ ಮುಗ್ಧ ಮನೋಹರ ಕಂಠದಲ್ಲಿ ಗಾಯಗೊಂಡವರ ಮತ್ತು ಮರಣ ಸನ್ನಿಹಿತರ ಚೀತ್ಕಾರ ಕೇಳಿಬರುತ್ತದೆ. ಆ ಸಮಯದಲ್ಲಿ ನನ್ನ ಕಿವಿಯಲ್ಲಿ ಕೈದಿಗಳ ಕರುಣಕ್ರಂದನ ಪ್ರತಿಧ್ವನಿಸುತ್ತದೆ. (ಉತ್ತೇಜಿತನಾಗಿ) ಸಂಘಮಿತ್ರಾ...ಸಂಘಮಿತ್ರಾ ಯುದ್ಧದಲ್ಲೇಕೆ ಇಷ್ಟು ಮಂದಿ ಸಾಯುತ್ತಾರೆ? ಈ ಯುದ್ಧಗಳೇಕೆ ಆಗುತ್ತಿವೆ?

ಸಂಘಮಿತ್ರಾ:— ಅಣ್ಣಾ, ಅಣ್ಣಾ, ನಿನಗೇನಾಗಿದೆ? ತಾವು ಅಸ್ವಸ್ಥರಾಗಿದ್ದೀರಿ. ತಾವು ದುಃಖಿಯಾಗಿದ್ದೀರಿ. ತಮಗೆ ಸಂಗೀತದ ಅವಶ್ಯಕತೆ ಇದೆ. ನಾನೀಗಲೇ ರೇಖಾಳನ್ನು ಕಳುಹಿಸುತ್ತೇನೆ.

[ಸಂಘಮಿತ್ರಾಳು ಶೀಘ್ರತೆಯಿಂದ ಹೋಗುತ್ತಾಳೆ]

ಅಶೋಕ:— (ಹಾಗೆಯೇ ಅನುಮಾನದಿಂದ) ಇಷ್ಟೊಂದು ಜನ ಏಕೆ ಸಾಯುತ್ತಾರೆ? ರಕ್ತದ ಕಾಲುವೆ ಏಕೆ ಹರಿಯುತ್ತಿದೆ? ಸಂಘಮಿತ್ರಾ, ನಾನು ಧರಿತ್ರೀ ಮಾತೆಗೆ ತನ್ನ ಮಕ್ಕಳ ರಕ್ತ ಕುಡಿಯಲು ವಿವಶ ಮಾಡಿದ್ದೇನೆಂದು ಬಂಧಿ ಹೇಳುತ್ತಾನೆ. ತನ್ನ ಮಕ್ಕಳ ರಕ್ತ, ತನ್ನ ಮಕ್ಕಳ ರಕ್ತ ಯಾರಾದರೂ ಕುಡಿಯುತ್ತಾರೇನು? ಹೇಳು ಸಂಘಮಿತ್ರಾ. (ಗಟ್ಟಿಯಾಗಿ) ಸಂಘಮಿತ್ರಾ!

[ತಲೆಯೆತ್ತಿ ನೋಡುತ್ತಾನೆ - ಯಾರೂ ಇಲ್ಲ]

ಅಶೋಕ:— ಹೋದಳು, ಅವಳು ಕಳಿಂಗ ಕುಮಾರನನ್ನು ಬಹುವಾಗಿ ಹೊಗಳುತ್ತಿದ್ದಳು. ನಾನೂ ಹೊಗಳಿದ್ದೆ. ಅವನು ನಿಜವಾಗಿಯೂ ಅನುಪಮ ವೀರ. 'ಆಖೇಡ'ದಲ್ಲಿ ಅವನ ಹಸ್ತಲಾಘವವನ್ನೂ ನೋಡಿದ್ದೆ. ಈ ದಿನ ಮಹಾನಾಶದಲ್ಲಿಯ ಅವನ ಅದಮ್ಯ ಸಾಹಸವನ್ನೂ ಕಂಡೆ. ನನ್ನ ಆಜ್ಞೆ ಮಾತ್ರದಿಂದ ಅವನ ತಲೆ ಉರುಳಲು ಸಾಧ್ಯವಿದೆ. ಆದರೆ...ಆದರೆ ಸಾಹಸಪೂರ್ಣ ಮನುಷ್ಯನನ್ನು ಕಂಡು ಮೃತ್ಯುವೂ ತನ್ನ ಕಾರ್ಯ ಮರೆತು ಬಿಡುತ್ತದೆ. ಅವನ ಸಾಹಸವು ನನ್ನ ಅಪ್ರತಿಮ ಕ್ರೋಧದೆದುರು ಅಂಗಧನ ಕಾಲನಂತೆ ಅಚಲವಾಗಿ ನಿಂತಿತ್ತು. ಅಷ್ಟಲ್ಲದೆ ಅವನು ನನ್ನನ್ನು ಹಾಸ್ಯ ಮಾಡಿದನು. 'ಒಬ್ಬ ಕೈದಿಯ ತಲೆ ತಗ್ಗಿಸಲಾರದ ನೀನೆಂಥಾ ವೀರ? ತಲೆ ಉರುಳಿಸಲು ಸ್ಮಶಾನದಲ್ಲಿ ಹದ್ದುಗಳೂ ತಿರುಗಾಡುತ್ತಿವೆ' ಎಂದಿದ್ದನಾತ!

ನಾನೋರ್ವ ಕೈದಿಯ ತಲೆ ತಗ್ಗಿಸಲು ಸಮರ್ಥನಾಗಲಿಲ್ಲ. ಅದೂ ಓರ್ವ ಬಂಧಿಯ ಹಾಸ್ಯಪೂರ್ಣ ವ್ಯಂಗ್ಯೋಕ್ತಿ! ಯಾರ ಒಂದು ದೃಷ್ಟಿಗೆ ಲಕ್ಷಾಂತರ ಜನರ ತಲೆ ಉರುಳಬಹುದೋ, ಯಾರ ಹುಬ್ಬೇರಿದರೆ ಕಾಲನೂ ಭಯಪಡು ತ್ತಾನೋ, ಯಾರ ಕ್ರೋಧ ಜ್ವಾಲೆಯಿಂದ ಭೂಮಂಡಲವೇ ಭಸ್ಮವಾಗ ಬಹುದೋ ಅಂತಹ ಸಾಮ್ರಾಟನು ಒಬ್ಬ ಬಂಧಿಯ ತಲೆ ತಗ್ಗಿಸಲು ಸಮರ್ಥ ನಾಗಿಲ್ಲ! ನಿಜವಾಗಿಯೂ ನಾನಿಷ್ಟು ದುರ್ಬಲನೇನು? ನನ್ನ ಶಕ್ತಿ ಹೇಡಿತನದ ಶಕ್ತಿಯೇನು? ಹೇಡಿ? ಹಾಂ, ಹದ್ದು ಯಾವಾಗಲೂ ಹೇಡಿತಾನೇ? ಕುಮಾರ ನನ್ನನ್ನು ಹದ್ದು ಎಂದ; ತಲೆ ಉರುಳಿಸುವ ಹದ್ದು. ನಾನು ತಲೆ ಉರುಳಿಸು ತ್ತೇನೆ. (ಸಿಟ್ಟುಸಿರು) ಇದು ಶತ ಸತ್ಯ! ನಾನು ತಲೆ ಉರುಳಿಸುತ್ತೇನೆ. ನನ್ನಿಂದ ಅವನ ತಲೆ ತಗ್ಗಿಸಲಾಗಲಿಲ್ಲ! ಶೌರ್ಯ ಖಡ್ಗದಲ್ಲಿಲ್ಲ ಎಂದಿದ್ದಳು ಸಂಘ ಮಿತ್ರ. ಬಹುಶಃ ಇದು ಸತ್ಯ. ಕತ್ತಿಯಲ್ಲಿ ಶೌರ್ಯವಿಲ್ಲ? ಆದುದರಿಂದಲೇ ಅವನು ಸಜೀವನಾಗಿರುವಾಗ ಅವನ ತಲೆ ತಗ್ಗಿಸಲಾಗಲಿಲ್ಲ. ಈಗವನ ತಲೆ ಕಡಿದು ಮುಯ್ಯಿ ತೀರಿಸಿಕೊಳ್ಳುತ್ತಿದ್ದೇನೆ. ತಲೆ ಕಡಿದು...ಅವನ ತಲೆಯನ್ನು ಒಡೆಯುತ್ತಿದ್ದೇನೆ. ಹದ್ದು ಸಹ ನಿರ್ಜೀವ ತಲೆಯನ್ನು ಒಡೆಯುತ್ತದೆ. ನಾನು ಹದ್ದು. ಹಾಂ, ನಾನು ಹದ್ದು. ನಾನೋರ್ವ ಬಂಧಿಯ ತಲೆ ತಗ್ಗಿಸಲಾರೆ?

[ರಾಧಾಗುಪ್ತನ ಪ್ರವೇಶ]

ಅಶೋಕ:— (ಬೆಚ್ಚಿಬಿದ್ದು) ಯಾರು ಮಹಾಮಾತ್ಯ!

ರಾಧಾಗುಪ್ತ:— ಸಾಮ್ರಾಟನಿಗೆ ಜಯವಾಗಲಿ. ಓರ್ವ ಬೌದ್ಧ ಭಿಕ್ಷು ನಿಮಗೆ ಸಿಗಲಪೇಕ್ಷಿಸುತ್ತಾನೆ.

ಅಶೋಕ:— ಬೌದ್ಧ ಭಿಕ್ಷುವಲ್ಲಿರಲಿ, ನಾನು ಒಬ್ಬ ಬಂಧಿಯ ತಲೆ ತಗ್ಗಿಸಲು ಸಾಧ್ಯವಿಲ್ಲವೆಂದಲ್ಲವೇ ಕುಮಾರ ಹೇಳಿದುದು?

ರಾಧಾಗುಪ್ತ:— ಬಂಧಿಯ ತಲೆಯು ಕೆಲವೇ ಕ್ಷಣಗಳಲ್ಲಿ ನಿಮ್ಮ ಚರಣದಲ್ಲಿ ಉರುಳಾಡಲಿದೆ ಪ್ರಭೋ!

ಅಶೋಕ:— ಅದನ್ನೇ, ಅದನ್ನೇ ಕುಮಾರ ಹೇಳುತ್ತಿದ್ದ. ತಲೆ ಉರುಳಿಸಲು ಹದ್ದುಗಳೂ ಸ್ಮಶಾನದಲ್ಲಿ ತಿರುಗಾಡುತ್ತಿವೆ ಎಂದಿದ್ದನಲ್ಲವೇ ಆತ? ಹದ್ದು ಹೇಡಿಯಾಗಿದೆ ಮಹಾಮಾತ್ಯ! ಹೇಡಿ ಮನುಷ್ಯನಿಗೂ ಹದ್ದು ಎಂಬುದು ಅನ್ವರ್ಥನಾಮವಾಗಿಲ್ಲವೇ?

ರಾಧಾಗುಪ್ತ:— ಸಾಮ್ರಾಟ್, ನಿಮ್ಮ ಮನಸ್ಸಿವತ್ತು ಸರಿಯಿಲ್ಲ. ಇವತ್ತಾರೂ ಗಾಯಕಿಯರು ಬರಲಿಲ್ಲವೇನು? ರೇಖಾ ಎಲ್ಲಿದ್ದಾಳೆ?

ಅಶೋಕ:— ರಾಧಾಗುಪ್ತ, ವೀರಪುರುಷರು ಕೇಳುವ ಸಂಗೀತ ದಲ್ಲಿಯೂ ಗಾಯಗೊಂಡವರ ಚೀತ್ಕಾರ ಮತ್ತು ಕೈದಿಗಳ ಕರುಣಕ್ರಂದನ ತುಂಬಿರುತ್ತದೆಂದು ಸಂಘಮಿತ್ರಾ ಹೇಳುತ್ತಿದ್ದಳು. ಆದರೆ ಮಹಾಮಾತ್ಯಾ, ಒಬ್ಬ ಕೈದಿಯ ತಲೆಯನ್ನು ನಾನು ತಗ್ಗಿಸಲಾರೆನೇನು? ಅವನ ತಲೆ ಉರು ಳಲೇಬೇಕೇನು?

ರಾಧಾಗುಪ್ತ:— ಯಾರು ಭಾರತ ಸಾಮ್ರಾಟನ ಆಜ್ಞೆಯನ್ನು ಉಲ್ಲಂಘಿಸುತ್ತಾರೋ ಅವರ ತಲೆಯನ್ನು ಉರುಳಿಸಲಾಗುತ್ತದೆ.

ಅಶೋಕ:— ಆದರೆ ಮಹಾಮಾತ್ಯ, ತಲೆ ಕಡಿಸಿದಾಗ್ಯೂ ಅವನು ಆಜ್ಞೆಯನ್ನು ಉಲ್ಲಂಘಿಸಿದನೇ ಹೊರತು ಪಾಲಿಸಿದಂತಾಗಲಿಲ್ಲ.

ರಾಧಾಗುಪ್ತ:— ಸಾಮ್ರಾಟ್, ಆಜ್ಞೆಯನ್ನವನು ಪಾಲಿಸಿದ್ದರೆ ಅವ ನಿಗೆ ಶಿಕ್ಷೆಯೇಕೆ ಮಾಡಬೇಕು?

ಅಶೋಕ:— ಶಿಕ್ಷೆ...ಶಿಕ್ಷೆ, ಅದಕ್ಕಾಗಿಯೇ ಸಂಘಮಿತ್ರಾ ಹೇಳು ತ್ತಿದ್ದಳು. ಶೌರ್ಯ ಕಠಾರಿಯಲ್ಲಿಲ್ಲ; ಹೃದಯದಲ್ಲಿದೆ ಎಂದು. ಮಹಾಮಾತ್ಯ, ನಿನಗೆ ಹೃದಯಶಕ್ತಿ ಗೊತ್ತೇನು?

ರಾಧಾಗುಪ್ತ:— ಹೃದಯದ ಶಕ್ತಿ ನನಗೆ ತಿಳಿಯದು ಪ್ರಭೋ. ಆದರೆ ನನಗೆ ಶಾಸನದ ಶಕ್ತಿ ಗೊತ್ತಿದೆ. ಸಂಗೀತದ ಶಕ್ತಿ ಗೊತ್ತಿದೆ. ನಾನೀ ಗಲೇ ಅದರ ವ್ಯವಸ್ಥೆ ಮಾಡುತ್ತೇನೆ......

[ಸ್ವಲ್ಪ ಮುಂದೆ ಹೋಗಿ ಪುನಃ ಅಲ್ಲೇ ನಿಲ್ಲುತ್ತಾನೆ]

ಓಹ್, ದ್ವಾರದಲ್ಲಿ ಓರ್ವ ಭಿಕ್ಷು ನಿಂತಿದ್ದಾನೆ ಪ್ರಭೋ!

ಅಶೋಕ:— ಭಿಕ್ಷು! ನನಗೆ ಸಿಗಲು ಮತ್ತು ಈ ಅಪಸಮಯದಲ್ಲಿ?

ರಾಧಾಗುಪ್ತ:— ಅವನು ಕಳಿಂಗ ಕುಮಾರನಿಗೆ ದರ್ಶನವೀಯ ಲಪೇಕ್ಷಿಸುತ್ತಾನೆ.

ಅಶೋಕ:— ಏಕೆ?

ರಾಧಾಗುಪ್ತ:— ಬಹುಶಃ ಅವನು ಕುಮಾರನನ್ನು.........

ಅಶೋಕ:— (ಒಮ್ಮೆಲೆ) ಬಹುಶಃ ಅವನು ಕುಮಾರನನ್ನು ನನ್ನ

ಅಧೀನತೆಗೆ ಒಪ್ಪಿಸಲುಬಹುದು. (ನಕ್ಕು) ಮಹಾಮಾತ್ಯಾ, ಯಾವ ಕೆಲಸವು ನನ್ನಿಂದಾಗುವುದಿಲ್ಲವೋ ಅದನ್ನು ಶಸ್ತ್ರ ಮಾಡಬಲ್ಲುದಾಗಿದೆ. ಓರ್ವ ಭಿಕ್ಷು ಮಾಡಬಲ್ಲ. ಇದೆಂಥಾ ವಿಡಂಬನೆ? ಇವೆಂಥಾ ಶಕ್ತಿ? ನಾನೆಷ್ಟು ದುರ್ಬಲ ವಾದರೂ ಸಾಮ್ರಾಟ! ಈ ಶಕ್ತಿ ನನಗೆ ಬೇಕು ಮಹಾಮಾತ್ಯಾ, ಅದು ನನಗೆ ಸಿಕ್ಕೀತೇನು?

[ಮಹೇಂದ್ರನ ಆಗಮನ]

ಮಹೇಂದ್ರ:— ಅವಶ್ಯವಾಗಿ ಸಿಗಬಹುದು. ಬರೀ ಇಚ್ಛೆ ಮಾತ್ರ ಪಣವಾಗಿರಬೇಕು.

ಅಶೋಕ:— ಯಾರು ಮಹೇಂದ್ರ?

ಮಹೇಂದ್ರ:— ಅಪ್ಪಣೆ ಸಾಮ್ರಾಟ್!

ಅಶೋಕ:— ಸಾಮ್ರಾಟ್, ಸಾಮ್ರಾಟ್! ಮಹೇಂದ್ರಾ ನೀನೂ ನನ್ನನ್ನು ಸಾಮ್ರಾಟ್ ಎಂದೇ ಏಕೆ ಕರೆಯುತ್ತಿರುವೆ?

ಮಹೇಂದ್ರ:— ಇಂದಿನ ವರೆಗೆ ಹೇಳಿಕೊಂಡು ಬಂದಂತಹ ಸಂಬೋಧನೆಯನ್ನು ಬದಲಿಸಲು ಏನಾದರೂ ಕಾರಣ ಬೇಕಲ್ಲ ಸಾಮ್ರಾಟ್?

ಅಶೋಕ:— ನಿಜ ಮಹೇಂದ್ರಾ! ನಿನ್ನ ಮಾತು ನಿಜ. ಆದರೆ ಆ ಬಂಧಿ ಕುಮಾರನು 'ಎಲ್ಲಕ್ಕಿಂತಲೂ ಮೊದಲು ನಾವು ಸಾಧಾರಣ ಪುರುಷರು' ಎಂದ. ನಾನು ಮೊದಲು ಅಶೋಕ, ನಂತರ ಸಾಮ್ರಾಟ್!

ಮಹೇಂದ್ರ:— (ನಕ್ಕು) ಮತ್ತು ಮಹಾರಾಜರು ಅವನ ಮಾತನ್ನು ಒಪ್ಪಿಕೊಂಡಿರೇನು?

ಅಶೋಕ:— ಆಗ ನಾನೂ ಒಪ್ಪಲಿಲ್ಲ. ಈಗ ಯಾರಾದರೂ ನನ್ನನ್ನು 'ಅಶೋಕಾ' ಎಂದು ಕರೆಯಲಿ ಎನ್ನುತ್ತಿದೆ ಮನಸ್ಸು!

ಮಹೇಂದ್ರ:— (ರಾಧಾಗುಪ್ತನ ಕಡೆ ತಿರುಗಿ) ಸಾಮ್ರಾಟರಿವತ್ತೇಕೆ ದೀನರಾಗಿ ಕಾಣುತ್ತಿದ್ದಾರೆ?

ಅಶೋಕ:— ಮಹಾಮಾತ್ಯರಿಗೇನೂ ತಿಳಿಯದು. ಅದು ನನ್ನ ವಾಣಿ. ಪರ್ಯಾಲೋಚಿಸಿ ನೋಡಿದರೆ ನನಗೂ ಏನೂ ತಿಳಿಯದು. ಆ ಬಂಧಿಯು ನನ್ನನ್ನು ದಯೆಗೆ ಪಾತ್ರನಾಗುವಂತೆ ಮಾಡಿದ್ದಾನೆ. ನನ್ನ ಹೃದಯ ಉರಿಯುತ್ತಿದೆ. ನಾನೋರ್ವ ದುರ್ಬಲ ಪ್ರಾಣಿಯಂತೆ ಈ ಬೃಹತ್‌ಜಗತ್ತಿನಲ್ಲಿ ಒಬ್ಬಂ

ಟಿಗನಾಗಿದ್ದೇನೆ.

ಮಹೇಂದ್ರ:— ಅಣ್ಣಾ! ತಾವು ಇದೇನಾಡುತ್ತಿರುವಿರಿ?

ಅಶೋಕ:— ಅಣ್ಣಾ!... (ಭಾವಾವೇಶ) ನನ್ನನ್ನು ಇನ್ನೊಂದು ಬಾರಿ 'ಅಣ್ಣಾ' ಅನ್ನು ಮಹೇಂದ್ರಾ! ಇನ್ನೊಂದು ಬಾರಿ ಅನ್ನು!

ಮಹೇಂದ್ರ:— ಅಣ್ಣಾ!

[ಅಶೋಕನು ಕಣ್ಣು ಮುಚ್ಚಿಕೊಳ್ಳುತ್ತಾನೆ]

ರಾಧಾಗುಪ್ತ:— ಸಾಮ್ರಾಟ್, ಭಿಕ್ಷುವಿನ ಬಗ್ಗೆ ಏನಾಜ್ಞೆ ಪ್ರಭೋ?

ಅಶೋಕ:— (ಕೂಡಲೇ ತನ್ನನ್ನು ಹತೋಟಿಯಲ್ಲಿಟ್ಟು) ಓಹ್ ಭಿಕ್ಷು...! ಅವರನ್ನು ಬರಗೊಡಿ. ಆದರೆ ಮಹಾಮಾತ್ಯ, ಒಂದುತ್ತರ ಕೊಡು. ಕುಮಾರನ ಶಿಕ್ಷೆಯ ಬಗ್ಗೆ ನಾನು ಪುನಃ ಆಲೋಚಿಸಬಹುದೇನು?

ರಾಧಾಗುಪ್ತ:— ಸಾಮ್ರಾಟರು ಏನೂ ಮಾಡಬಹುದು. ಆದರೆ ಅವರಿಗೆ ಸ್ಥಾನಮಾನದ ವಿಚಾರ ಮಾಡಿಕೊಳ್ಳಬೇಕಾಗುತ್ತದೆ.

ಅಶೋಕ:— ಏನೆಂದಿರಿ? ನಾನು ನನ್ನ ಸ್ಥಾನಮಾನದ ಮರ್ಯಾದೆ ತಿಳಿದುಕೊಳ್ಳಬೇಕೇ? ನಾನು ಸಾಮ್ರಾಟ, ನಾನು ಬೇಕಾದಂತೆ ಮಾಡ ಬಹುದು. ನಾನು ಯಾರ ಕೈದಿಯೂ ಅಲ್ಲ.

[ಉಪಗುಪ್ತನ ಪ್ರವೇಶ]

ಉಪಗುಪ್ತ:— ಎಲ್ಲಿವರೆಗೆ ಮಾನವನು ತನಗಾಗಿ ಜೀವಿಸುತ್ತಾನೋ ಅಂದಿನ ವರೆಗೆ ಅವನು ಬಂಧಿಯಾಗಿರುತ್ತಾನೆ. ಆಕಾಂಕ್ಷೆಯ ಪರಿಧಿಯು ನಿರ್ಣಯಿತವಾಗಿದೆ. ಆದರೆ ಅವನ ಆಕಾಂಕ್ಷೆಯು ಭಯಂಕರವಾಗಿರುತ್ತದೆ. ಮೀನುಗಾರನ ಬಲೆಯಲ್ಲಿ ಸಿಕ್ಕಿದ ಮೀನಿನಂತೆ ಈ ಜಾಲದಲ್ಲಿ ಸಿಕ್ಕಿ ಯಾರೂ ಬದುಕಿಲ್ಲ.

ಅಶೋಕ:— ಭಿಕ್ಷು ಉಪಗುಪ್ತ!... ಪ್ರಣಾಮ ಭಿಕ್ಷು!

ಉಪಗುಪ್ತ:— ಕಲ್ಯಾಣವಾಗಲಿ. ನಾನು ಕಳಿಂಗ ಕುಮಾರನನ್ನು ಕಾಣಲಪೇಕ್ಷಿಸುತ್ತೇನೆ.

ಅಶೋಕ:— ಮಹಾಮಾತ್ಯರು ತಮ್ಮ ಬರುವಿಕೆಯನ್ನು ತಿಳಿಸಿದರು. ಕುಮಾರನಿಗಿಂತಲೂ ನನಗೆ ನಿಮ್ಮ ಮುಂದಾಲೋಚನೆಯ ಅವಶ್ಯಕತೆ ಬಹಳ ಇದೆ.

ಉಪಗುಪ್ತ:— ಸಾಮ್ರಾಟನಿಗೆ ನನ್ನ ಮುಂದಾಲೋಚನೆ ಅವಶ್ಯಕತೆ!

ಅಶೋಕ:— ಹಾಂ ಭಿಕ್ಷು.

ಉಪಗುಪ್ತ:— ಕೇಳು ಏನುಬೇಕು?

ಅಶೋಕ:— ಭಿಕ್ಷು, ಒಬ್ಬನನ್ನು ಕೊಲ್ಲದೆ ಪರಾಜಿತನನ್ನಾಗಿ ಮಾಡುವ ಯಾವುದಾದರೂ ಶಕ್ತಿಯಿದೆಯೇ?

ಉಪಗುಪ್ತ:— ಪರಾಜಿತನನ್ನಾಗಿ ಮಾಡುವ ಆಲೋಚನೆಯೇ ಮಾನವನ ಮಹಾದುರ್ಬಲತೆ ಸಾಮ್ರಾಟ್!

ಅಶೋಕ:— (ಗುಣುಗುಟ್ಟುತ್ತ) ಪರಾಜಿತನನ್ನಾಗಿ ಮಾಡುವ ಆಲೋಚನೆಯೇ ಮಾನವನ ಮಹಾದುರ್ಬಲತೆ. ಪರಾಜಿತನನ್ನಾಗಿ ಮಾಡುವ ಆಲೋಚನೆಯೇ ಮಾನವನ ಮಹಾದುರ್ಬಲತೆ. (ಎಷ್ಟೋ ಬಾರಿ ತನ್ನಷ್ಟಕ್ಕೆ ಹೇಳಿಕೊಳ್ಳುತ್ತಾನೆ.

ಉಪಗುಪ್ತ:— ರಾತ್ರಿ ಕಳೆಯುತ್ತಿದೆ ಸಾಮ್ರಾಟ್! ನಾನು...

ಅಶೋಕ:— (ಒಮ್ಮೆಲೆ) ರಾತ್ರಿ ಕಳೆಯುತ್ತಿದೆ! ಅಂಧಕಾರ ಕಳೆಯುತ್ತಿದೆಯೇ? ಭಿಕ್ಷು! ತಾವೆಷ್ಟು ಸುಂದರ ಮಾತನ್ನು ಹೇಳಿದಿರಿ! ರಾತ್ರಿ ಕಳೆದಾಗಲೇ ಅಲ್ಲವೇ ಪ್ರಭಾತವಾಗುವುದು?

ಉಪಗುಪ್ತ:— ಆದರೆ ಇಂದಿನ ಪ್ರಭಾತ ಒಬ್ಬನ ಮರಣದ ಸಂದೇಶದೊಡನೆ ಬರಲಿದೆ ಸಾಮ್ರಾಟ್.

ಅಶೋಕ:— ತಾವು ಕಳಿಂಗಯುವರಾಜನ ಬಗ್ಗೆ ಹೇಳುತ್ತಿರುವಿರೇನು? ಅವನು ಜೀವನ ಮತ್ತು ಮೃತ್ಯುಗಳೆರಡರಿಂದಲೂ ದೂರವಿದ್ದಾನೆ. ನಾನು ಅವನಿಗೆ ಶಿಕ್ಷೆ ಕೊಡುವ ಸಾಹಸ ಮಾಡಲಾರೆ. ಅವನು ಸ್ವತಂತ್ರನಾಗಿದ್ದಾನೆ.

[ಎಲ್ಲರೂ ಸ್ಥಂಭಿತರಾಗುತ್ತಾರೆ]

ರಾಧಾಗುಪ್ತ:— ಏನು ಹೇಳುತ್ತಿರುವಿರಿ ಸಾಮ್ರಾಟ್? ಅದೆಂದೂ ಸಾಧ್ಯವಿಲ್ಲ.

ಅಶೋಕ:— ಮಹಾಮಾತ್ಯ! ಕಳಿಂಗಯುವರಾಜನು ಸ್ವತಂತ್ರನಷ್ಟೇ ಅಲ್ಲ; ಅವನು ತನ್ನ ರಾಜ್ಯದ ಸ್ವಾಮಿಯೂ ಹೌದು!

ರಾಧಾಗುಪ್ತ:— ಸಾಮ್ರಾಟ್...!

ಮಹೇಂದ್ರ:— (ಆಶ್ಚರ್ಯದಿಂದ) ಅಣ್ಣಾ!

ಉಪಗುಪ್ತ:— ನಾನು ಇದೇನು ಕೇಳುತ್ತಿರುವೆ ಸಾಮ್ರಾಟ್?

ಅಶೋಕ:— ತಾವೇನು ಕೇಳುತ್ತಿರುವಿರೋ ಅದು ನಿಜ. ಆದರೆ ಏಕೆಂದು ನನಗೂ ತಿಳಿದಿಲ್ಲ. ಒಮ್ಮೊಂದೊಮ್ಮೆಲೆ ನನಗೆ ಕಳಿಂಗ ಕುಮಾರನ ಮಾತುಗಳು ನೆನಪಿಗೆ ಬರುತ್ತವೆ. ಒಮ್ಮೊಂದೊಮ್ಮೆಲೆ ನನ್ನ ಮನಸ್ಸಿನಲ್ಲಿ ರಣ ಭೂಮಿಯ ಚಿತ್ರ ಬಂದು ನಿಲ್ಲುತ್ತದೆ. ನಾನು ಸ್ಮಶಾನದ ಹದ್ದುವಿನಂತೆ ತಲೆ ಉರುಳಿಸಲು ಅಪೇಕ್ಷಿಸುವುದಿಲ್ಲ. **ನಾನು ಮಾನವನಾಗಿ ಮಾನವನನ್ನು ಗೆಲ್ಲಲಪೇಕ್ಷಿಸುತ್ತೇನೆ.** ನಾನೂ ಮಾನವ ಎಂಬುದನ್ನು ಕಳಿಂಗ ಕುಮಾರನಿಗೆ ತೋರಿಸಲಿಚ್ಛಿಸುತ್ತೇನೆ. (ಶಾಂತ ಉಚ್ಛ್ವಾಸಿತ ಸ್ವರ) ನಾನೂ ಮಾನವನಾಗಿದ್ದೇನೆ. (ರಾಧಾಗುಪ್ತನ ವಿನಃ ಎಲ್ಲರೂ ಚಕಿತರಾಗಿ, ಸ್ತಂಭಿತರಾಗಿ, ಪ್ರಸನ್ನ ಮುದ್ರೆಯಿಂದ ಅಶೋಕನನ್ನು ನೋಡುತ್ತಾರೆ)

ಮಹೇಂದ್ರ:— ಅಣ್ಣಾ! ನೀನಿವತ್ತು ಮಾಡಿರುವ ಕೆಲಸ ಮಾನವನಲ್ಲದವನು ಎಂದೆಂದೂ ಮಾಡಲಾರ! ನಿಮಗೆ ಜಯವಾಗಲಿ! ಬನ್ನಿ ಆಚಾರ್ಯ ಬಂಧೀಗೃಹಕ್ಕೆ ಹೋಗಿ ಕಳಿಂಗಕುಮಾರನಿಗೆ ಶುಭಸಮಾಚಾರವನ್ನು ಕೊಡುವ.

ಉಪಗುಪ್ತ:— ನಡೆ ಮಹೇಂದ್ರಾ...ನಡೆ!

[ಮಹೇಂದ್ರ ಮತ್ತು ಉಪಗುಪ್ತರ ನಿರ್ಗಮನ]

ಅಶೋಕ:— ಈಗತಾನೇ ಕಳಿಂಗದ ವಿಜಯವಾಯ್ತು!

ರಾಧಾಗುಪ್ತ:— ಆದರೆ ಸಾಮ್ರಾಟ್! ಇದು ಸರಿಯೇನು? ಇದರಿಂದ ಶಾಸನದ ಮರ್ಯಾದೆ ಸುರಕ್ಷಿತವಾಗುತ್ತದೇನು?...

ಅಶೋಕ:— (ನಗುತ್ತಾ) ರಾಧಾಗುಪ್ತ, ಈ ಸಮಯ ನಾನು ನಿನ್ನೊಡನೆ ವಾದಿಸಲಿಚ್ಛಿಸುವುದಿಲ್ಲ. ಇದರ ಉಚಿತ-ಅನುಚಿತಗಳು ನನಗೆ ತಿಳಿಯದು. ಆದರೆ ಒಂದೊಮ್ಮೆ ನಾನು ಹಾಗೆ ಮಾಡದಿರುತ್ತಿದ್ದರೆ ಹುಚ್ಚನಾಗುತ್ತಿದ್ದೆ ಎಂಬುದಂತೂ ಖಂಡಿತ. ನಾನು ಈಗ ರಾಣಿ ಕಾರುವಾಕಿಯ ಶಿಬಿರಕ್ಕೆ ಹೋಗುತ್ತೇನೆ. ಸಂಘಮಿತ್ರಾ ಬಂದರೆ ಅಲ್ಲಿಗೇ ಕಳುಹಿಸಿಬಿಡು. (ಹೊರಟು ಹೋಗುತ್ತಾನೆ)

[ರಾಧಾಗುಪ್ತನು ಚಿಂತಾಕುಲನಾಗಿ ಅಲ್ಲಿಯೇ ನಿಂತು ಅಶೋಕನು ಹೋಗುವುದನ್ನೇ ನೋಡುತ್ತಾನೆ. ನಂತರ ಅವನು ಶೀಘ್ರವಾಗಿ ಪ್ರಸ್ಥಾನವಾಗುತ್ತಾನೆ]

೨

ದ್ವಿತೀಯ ಅಂಕ

[ರಾಣಿ ಕಾರುವಾಕಿಯ ಶಿಬಿರ. ಬಹುಮೂಲ್ಯವುಳ್ಳ ಕಾಲೀನವನ್ನು ಹಾಸಲಾಗಿದೆ. ಶಿಬಿರದ ಗೋಡೆಗಳಲ್ಲಿ ಕಲಾಪೂರ್ಣ ಚಿತ್ರಗಳಿವೆ. ಆದರೆ ಒಂದು ಚಿತ್ರ ಮಾತ್ರ ಅಪೂರ್ಣವಾಗಿದೆ. ಅದರ ಹತ್ತಿರವೇ ಧೂಮ್ರಧಾನಿ ಇದೆ. ಮೂಲೆಗಳಲ್ಲಿ ಸುಗಂಧ ದ್ರವ್ಯಗಳು ಇಡಲ್ಪಟ್ಟಿವೆ. ಒಂದು ಬದಿಯಲ್ಲಿ ಮಂಚ ಇಡಲ್ಪಟ್ಟಿದೆ. ಅದಕ್ಕೆ ತೆಳುವಾದ ಪರದೆ ಹಾಕಲ್ಪಟ್ಟಿದೆ. ರಾಣಿ ಕಾರುವಾಕಿಯು ತನ್ನ ಎಡಗೈಯನ್ನು ಮಡಚಿ ತಲೆದಿಂಬಿನಂತೆ ಇಟ್ಟು ಮಲಗಿದ್ದಾಳೆ. ಸುಂದರವಾಗಿ ನೇಯಲ್ಪಟ್ಟ ಅವಳ ಕೇಶರಾಶಿಯು ಉರೋಜಗಳ ಮೇಲೆ ವಿರಾಜಮಾನವಾಗಿತ್ತು. ದ್ವಾರದ ಹತ್ತಿರ ಬಹುಮುಖೀ ದೀಪವು ಉರಿಯುತ್ತಿತ್ತು. ಅದರ ಧೂಮವು ಕಂಪಿಸುತ್ತಾ ಬಳುಕುತ್ತಾ ಮೇಲೇರುತ್ತಿತ್ತು. ಗೌರವರ್ಣದ ಈ ರಾಣಿಯ ಶ್ಯಾಮವರ್ಣದ ದೀರ್ಘ ನಯನಗಳು ಯಾವುದೋ ದೂರದ ವಸ್ತುವನ್ನು ನಿರೀಕ್ಷಿಸುವಂತಿದ್ದುವು. ಅವಳ ಹಸ್ತಾಗ್ರಭಾಗದಲ್ಲಿ ಹಾಗೂ ಪಾದಗಳಲ್ಲಿ ಮಾದ್ರೆಂಗಿಯಿಂದ ಅನಪಮ ಚಿತ್ರ ಬಿಡಿಸಲಾಗಿತ್ತು. ಅವಳೆದುರಿಗೆ ದೀಪದ ಪಕ್ಕದ ಒಂದು ಭಾಗದಲ್ಲಿ ವೀಣೆಯನ್ನು ಬಾರಿಸುತ್ತಾ ರೇಖಾ ಹಾಡುತ್ತಿರುವಳು. ಆ ಸಂಗೀತದಲ್ಲೇ ತನ್ಮಯಳಾಗಲಿಚ್ಛಿಸಿದರೂ ಅವಳು ಆಗಾಗ್ಗೆ ಬೆಚ್ಚಿಬೀಳುತ್ತಿದ್ದಳು. ರೇಖಾಳ ಧ್ವನಿಯಲ್ಲಿ ಮಾಧುರ್ಯವಿದ್ದಾಗ್ಯೂ ಅವಳ ಮನಸ್ಸಿಗೆ ಇಂದು ಗಾಯನವು ತೃಪ್ತಿ ಕೊಡುತ್ತಿದಿಲ್ಲ]

೧

ಉನ್ಮಾದ ತುಂಬಿರುವ ಕಮಲ ಪುಷ್ಪದೊಳಿಂದು,
ತುಂಬಿಯೇಕೆಚ್ಚರವಿದೇ?
ಕಲಕಲಾ ನಗುವ ಪುಷ್ಪರಾಜಿಯೊಳು,
ಸೌರಭವು ಇಂದೇಕೆ ಮಾಯವದೆ?
ಮಧುಸ್ವಪ್ನಗಳ ಪುಷ್ಪಕುಂಜದೊಳಿಂದು,
ವಿಹಾಗವೇಕೆಚ್ಚರವಿದೆ?

ಸಖಿಯೆ ಇದೆಂತಹ ಉನ್ಮದ ರಜನಿ,
ಪ್ರಾಣದ ಪ್ರಾಣವು ಕೇಳುತಿದೆ?
ಚರಣದೊಳೆ ಸರ್ವಸ್ವ ಸಮರ್ಪಿಸುತ್ತಿರಲು,
ಇನ್ನೇನ ಬಯಸುತಿರುವೆ?
ನಯನ ಮುಚ್ಚಿವೆ ಎಲ್ಲಾ ಚಂದ್ರತಾರೆಗಳು,
ನಂದಿವೇ ದೀಪ ಭೂಮಿಯದೆಲ್ಲವೂ!

[ಕೂಡಲೇ ಕಾರುವಾಕಿಯು ಸಂಗೀತ ನಿಲ್ಲಿಸಲು ಸಂಜ್ಞೆ ಮಾಡುತ್ತಾಳೆ]

ಕಾರುವಾಕಿ:— ಸಾಕು ಮಾಡು ರೇಖಾ! ಸಾಕು ಮಾಡು! ಈ ರಾಗಾನುರಾಗಗಳ ಸಂಗೀತ ಈಗ ರುಚಿಸುವುದಿಲ್ಲ.

[ರೇಖಾ ವೀಣೆ ಬಾರಿಸುವುದನ್ನು ನಿಲ್ಲಿಸುತ್ತಾಳೆ]

ರೇಖಾ:— ಮಹಾರಾಣಿಯವರು ಅಸ್ವಸ್ಥರಾಗಿದ್ದೀರಿ. ಬೇರೆ ಯಾವುದಾದರೂ ಸರಸವಾದ ಹಾಡು ಹಾಡಲೇನು?

ಕಾರುವಾಕಿ:— ಬೇಡ ರೇಖಾ, ಈಗ ಬೇಡ. ನೀನೆಷ್ಟು ಸರಸವಾದ ಗಾಯನ ಮಾಡುತ್ತೀಯೋ ಮನಸ್ಸು ಅಷ್ಟೇ ವಿರಸವಾಗುತ್ತದೆ. (ನಿಶ್ವಾಸ) ಈ ಯುದ್ಧ ಯಾವಾಗ ಸಮಾಪ್ತವಾಗುತ್ತದೋ ಏನೋ! ಸತ್ತವರನ್ನು ಎಣಿಸುತ್ತಾ ಎಣಿಸುತ್ತಾ ನಾವು ಸತ್ತಂತೆ ಭಾಸವಾಗಹತ್ತಿದೆ. ಏಕೆಂದರೆ ಸತ್ತವರ ಸಂಖ್ಯೆಯ ಮುಂದೆ ಜೀವಂತವಿರುವವರ ಸಂಖ್ಯೆ ಕಾಣುವುದೇ ಇಲ್ಲ!

ರೇಖಾ:— (ಮುಗುಳ್ನಗುತ್ತಾ) ಮಹಾರಾಣೀ, ಪ್ರತಿಯೊಬ್ಬ ಹೊಸ ಮನುಷ್ಯನೂ ಪ್ರಪಂಚಕ್ಕೆ ಬರುವಾಗ ಭಗವಂತನು ಅವರಿಗೆ ಮರಣದ ದಿವಸವನ್ನು ನಿಶ್ಚಯಿಸಿಯೇ ಕಳುಹಿಸುತ್ತಾನಂತೆ.

ಕಾರುವಾಕಿ:— (ನಗುತ್ತಾ) ಓಹ್ ಹಾಗೇನು? ಬಹುಶಃ ಅದಕ್ಕಾಗಿಯೇ ಈ ಲೋಕವನ್ನು ಮೃತ್ಯುಲೋಕ ಎಂದು ಕರೆಯುತ್ತಿರಬಹುದು. ಭಗವಂತನ ಕೆಲಸವನ್ನು ಮಹಾರಾಜರು ಕಡಿಮೆ ಮಾಡಿದುದಕ್ಕಾಗಿ ಅವರಿಗೆ ಧನ್ಯವಾದ ಅರ್ಪಿಸಬೇಕು. (ಕೂಡಲೇ ಅವಳ ನಗು ವಿಷಾದದಲ್ಲಿ ಪರಿವರ್ತನೆಯಾಗುತ್ತದೆ) ಆದರೆ... ಆದರೆ ನಾನು...

[ಎದ್ದುನಿಂತು ಕಿಟಿಕಿಯ ಹೊರಗೆ ನೋಡುತ್ತಾಳೆ]

ರೇಖಾ:— ಏನು, ಏನು ಮಹಾರಾಣಿ? (ಅವಳೂ ಎದ್ದುನಿಲ್ಲುತ್ತಾಳೆ)

ಕಾರುವಾಕಿ:— ಆದರೆ ದೇವರ ಕೆಲಸವನ್ನು ಮಾನವನು ಮಾಡ ಬಾರದೆಂದು ನನಗನಿಸುತ್ತದೆ. ಈ ಯುದ್ಧ ಕೊನೆಗೊಳ್ಳಲೇಬೇಕು ರೇಖಾ.

ರೇಖಾ:— ಕಳಿಂಗ ಯುದ್ಧವು ಇಂದಿಗೆ ಕೊನೆಗೊಂಡಿತು ಮಹಾ ರಾಣೀ. ಕಳಿಂಗ ಕುಮಾರನು ಬಂಧಿಯಾದ ನಂತರ ಭೇರಿಘೋಷ ಮಾಡಲು ಒಬ್ಬನೂ ಉಳಿದಿಲ್ಲ. ಯಾರು ಯುದ್ಧಕ್ಕೆ ಆಮಂತ್ರಣ ಕೊಡಬೇಕಿತ್ತೋ ಅವರೆಲ್ಲಾ ಮೊದಲೇ ಸತ್ತಿದ್ದಾರೆ.

ಕಾರುವಾಕಿ:— ನಿಜ ರೇಖಾ. ಆದರೆ ಈ ಯುದ್ಧವು ಕಳಿಂಗ ವಿಜಯ ದಲ್ಲೇ ಕೊನೆಗೊಳ್ಳುವುದಿಲ್ಲ. ಇನ್ನು ಸಿಂಹಲ ವಿಜಯವು ಉಳಿದಿದೆ. ಕಳಿಂಗ ಮತ್ತು ಸಿಂಹಲದ ಮಧ್ಯದಲ್ಲಿ ಎಷ್ಟೋ ರಾಜ್ಯಗಳಿವೆ. ಅವುಗಳಲ್ಲೆಷ್ಟೋ ಲಕ್ಷಾಂತರ ಮಂದಿ ವಾಸಿಸುತ್ತಾರೆ. ಮತ್ತೆ ಅವರೆಲ್ಲರ ಹತ್ಯೆ!...ಉಫ್... ವಿಧಾತನು ಈ ಜಗತ್ತನ್ನು ಒಮ್ಮೆಲೆ ಏಕೆ ನಷ್ಟಮಾಡುವುದಿಲ್ಲ?

ರೇಖಾ:— (ಗೊಣಗುಟ್ಟುತ್ತಾಳೆ) ಮನುಷ್ಯನಿಂದ ಮನುಷ್ಯನನ್ನು ಕೊಲ್ಲಿಸುವಾಗ ದೇವರಿಗೆ ಏನು ಆನಂದವಾಗುತ್ತದೋ ದೇವರೇ ಬಲ್ಲ!

ಕಾರುವಾಕಿ:— (ದಿಗಂತದೆಡೆಗೆ ನೋಡುತ್ತಾ) ದೇವರು ಎಂಬುದೇ ಇಲ್ಲ ಎಂಬ ಭಾವನೆ ಒಮ್ಮೊಮ್ಮೆ ನನ್ನ ಮನಸ್ಸಿಗೆ ಬರುತ್ತದೆ.

[ಪ್ರತಿಹಾರಿಯ ಪ್ರವೇಶ]

ಪ್ರತಿಹಾರಿ:— ಮಹಾರಾಣಿಯವರಿಗೆ ಜಯವಾಗಲಿ!

ಕಾರುವಾಕಿ:— ಏನು?

ಪ್ರತಿಹಾರಿ:— ಸಾಮ್ರಾಟರು ಬರುತ್ತಿದ್ದಾರೆ.

ಕಾರುವಾಕಿ:— ಹೂಂ ಸರಿ.

[ಪ್ರತಿಹಾರಿ ಹೊರಟುಹೋಗುತ್ತಾಳೆ]

ಕಾರುವಾಕಿ:— ಸಾಮ್ರಾಟರು ಬರುತ್ತಿದ್ದಾರೆ. ನಿನ್ನ ಅವಶ್ಯಕತೆ ಬೀಳಬಹುದು ರೇಖಾ. ನೀನು ಎದುರಿನ ಪ್ರಕೋಷ್ಠದಲ್ಲಿರು. ಸ್ವಲ್ಪ ಸಮ ಯದ ಹಿಂದೆ ಶಿಬಿರದಲ್ಲಿ ಅವರಿವತ್ತು ಬಹಳ ಉದ್ವಿಗ್ನರಾಗಿದ್ದರೆಂದು ಸಮಾ ಚಾರ ಸಿಕ್ಕಿತ್ತು. ಇತ್ತೀಚೆಗೆ ಹಲವಾರು ದಿವಸಗಳಿಂದ ಅವರು ಮೊದಲೇ ಖಿನ್ನರಾಗಿದ್ದರು. ಆದರೆ ಇವತ್ತು ಕಳಿಂಗ ಕುಮಾರನು ಅವರನ್ನು ವಿಚಲಿತ ರನ್ನಾಗಿ ಮಾಡಿದ್ದಾನಂತೆ!

ರೇಖಾ:— ಅಪ್ಪಣೆ ದೇವಿ.

[ರೇಖಾ ಹೊರಟುಹೋಗುತ್ತಾಳೆ. ರಾಣಿಯು ಕಿಟಕಿಯ ಹತ್ತಿರದಿಂದ ಶಯ್ಯೆಯ ಹತ್ತಿರ ಬರುತ್ತಾಳೆ. ಆಗಲೇ ಸಾಮ್ರಾಟ ಒಂದು ಬದಿಯಿಂದ ಪ್ರವೇಶಿಸುತ್ತಾನೆ. ಮುಖಮುದ್ರೆಯು ಪ್ರಸನ್ನವಲ್ಲದಿದ್ದರೂ ಖಿನ್ನವಲ್ಲ. ಕಾಲ ಸಪ್ಪಳ ಕೇಳಿ ರಾಣಿ ತಿರುಗಿ ನೋಡಿ ಮುಗುಳ್ನಗುತ್ತಾಳೆ]

ಕಾರುವಾಕಿ:— ಮಹಾರಾಜರಿಗೆ ಜಯವಾಗಲಿ! ಬನ್ನಿ. ಇವತ್ತು ಅಸಮಯವಾಯ್ತು......ಮಹಾರಾಜರ ಚಿತ್ತ ಪ್ರಸನ್ನವಾಗಿದೆ ತಾನೇ?

ಅಶೋಕ:— (ಹತ್ತಿರ ಬಂದು) ಯುದ್ಧದಲ್ಲಿ ಚಿತ್ತಪ್ರಸನ್ನತೆಯು ಸಾಪೇಕ್ಷವಾಗಿರುತ್ತವೆ ದೇವೀ! ನಾನು ಖಿನ್ನನಾಗಿದ್ದೇನೋ ಪ್ರಸನ್ನನಾಗಿ ದ್ದೇನೋ ಸ್ವಯಂ ನನಗೇ ಗೊತ್ತಿಲ್ಲ. ವಿಶೇಷತಃ ಈಗ ನಾನು ಮಾಡಿ ಬಂದಿರುವ ಕಾರ್ಯ ನನ್ನನ್ನು ಚಿಂತಾಕುಲನನ್ನಾಗಿ ಮಾಡಿಯದೆ.

[ಶಯ್ಯೆಯಲ್ಲಿ ಕುಳಿತುಕೊಳ್ಳುತ್ತಾನೆ. ರಾಣಿ ಬದಿಯಲ್ಲಿ ನಿಲ್ಲುತ್ತಾಳೆ]

ಕಾರುವಾಕಿ:— ತಾವೇನು ಮಾಡಿ ಬಂದಿರೆಂದು ನಾನು ತಿಳಿಯ ಬಹುದೇನು? ಕಳಿಂಗ ಕುಮಾರನು ಬಂಧಿಸಲ್ಪಟ್ಟನೆಂದು ರೇಖಾ ಹೇಳಿದಳು.

ಅಶೋಕ:— ಅದೇ ಅವನದೇ ವಿಷಯ.

ಕಾರುವಾಕಿ:— ಏನಾಯ್ತು! ಅವನನ್ನು ಬಂಧಿಸಿದ್ದು ಒಂದು ರೀತಿ ಯಿಂದ ಒಳ್ಳೆಯದೇ ಆಯ್ತಲ್ಲವೇ? ಯುದ್ಧವಾದರೂ ಕೊನೆಗೊಂಡಿತು. ಹತ್ತು ದಿವಸದಿಂದ ಸತ್ತವರ ಸಂಖ್ಯೆ ಕೇಳಿ ಕೇಳಿ ಬೇಸರ ಬಂದಿತ್ತು.

ಅಶೋಕ:— ನಿನಗೂ ಬೇಸರ ಬಂದುಬಿಟ್ಟಿತೇನು?

ಕಾರುವಾಕಿ:— ಎಲ್ಲರಿಗೂ ಬೇಸರ ಬಂದಿರಬಹುದು ಸ್ವಾಮಿ. ವಿಷಯವೇ ಅಂತಹದು. ಶಸ್ತ್ರಗಳ ಖಣಾಖಣಿ, ಅಸಹಾಯ ಗಾಯಗೊಂಡ ವರ ಕರುಣಕ್ರಂದನ, ಚಿತೆಯಿಂದ ಹೊರಡುತ್ತಿರುವ ದುಃಖದಾವೇಗದ ಹೊಗೆ, ಅದರ ಮೇಲೆ ಸುತ್ತುತ್ತಿರುವ ಜಯಘೋಷ ಆಗೆಣಿಸುತ್ತಿತ್ತು......

ಅಶೋಕ:— ಹೇಳು ದೇವೀ, ಆಗ ಏನೆಣಿಸುತ್ತಿತ್ತು?

ಕಾರುವಾಕಿ:— ಒಬ್ಬನೇ ಮಗನಿರುವ ಒಬ್ಬ ತಾಯಿಯು ತನ್ನ ಮಗನ ಶವಯಾತ್ರೆಗಾಗಿ ಮೆರವಣಿಗೆ ಕರೆದಂತೆ ಭಾಸವಾಗುತ್ತಿತ್ತು. (ಹೇಳಿ ಅವಳು ಸ್ವಯಂ ಕಂಪಿಸುತ್ತಾಳೆ)

(ಸಾಮ್ರಾಟನ ಮುಖದಲ್ಲಿ ಹಲವಾರು ಬಣ್ಣಗಳು ಪರಿವರ್ತನೆಯಾಗುತ್ತದೆ)

ಅಶೋಕ:— (ಸಣ್ಣ ಸ್ವರ) ನಿಜ ದೇವೀ, ಅಂತೆಯೇ ನನಗೂ ಭಾಸವಾಗುತ್ತಿತ್ತು.

ಕಾರುವಾಕಿ:— (ಚಕಿತಳಾಗಿ) ನಿಮಗೂ ಹಾಗೆಯೇ ಆಗುತ್ತದೇನು?

ಅಶೋಕ:— ಹಾಂ ದೇವೀ! ನನಗೂ ಹಾಗೇ ಭಾಸವಾಗುತ್ತಿತ್ತು. ಕಳಿಂಗ ಯುವರಾಜನು ನನ್ನನ್ನು 'ಹದ್ದು' ಎಂದು ಹೇಳಿದ ಮೇಲಂತೂ ನನ್ನ ಸಂಶಯ ದೃಢವಾಗಿದೆ.

ಕಾರುವಾಕಿ:— (ಕಂಪಿಸಿ) ಈಗ ತಾವೇನಂದಿರಿ ಸ್ವಾಮಿ?

ಅಶೋಕ:— (ಅವಳ ಕಂಪನ ಕಂಡು ಮುಗುಳ್ನಗುತ್ತಾ) ಹದ್ದು, ಸ್ಮಶಾನದಲ್ಲಿ ತಲೆಬುರುಡೆ ಹಾರಿಸುವ ಹದ್ದು!

ಕಾರುವಾಕಿ:— ಹಾಗಂದರೇನು? (ಆವೇಗದಿಂದ) ಕಳಿಂಗ ಕುಮಾರನು ಭಾರತ ಸಾಮ್ರಾಟನಿಗೆ ಹೀಗಂದನೇನು? ಹೀಗಂದಬಳಿಕವೂ ಅವನ ರುಂಡ ಮುಂಡದಲ್ಲಿರಬೇಕಾದರೆ ಅವನೆಂತಹ ಸಾಹಸಿಯಾಗಿರಬೇಕು? ನೀವು ಅವನ ರುಂಡ ಹಾರಿಸಲಿಲ್ಲವೇನು?

ಅಶೋಕ:— ಶಿರಚ್ಛೇದನದ ಆಜ್ಞೆ ಕೊಟ್ಟ ನಂತರವೇ ಅವನು ನನ್ನನ್ನು ಹದ್ದು ಎಂದು ಸಂಬೋಧಿಸಿದ್ದು. ಇದೇ ನಿನ್ನ ವೀರತೆಯೇನು? ಇದೇ ನಿನ್ನ ಶೌರ್ಯವೇನು? ಇದೇ ಬಲದಿಂದಲ್ಲವೇ ನೀನು ಸ್ರಾಮಾಟನಾದುದು? ಓರ್ವ ಬಂಧಿಯ ತಲೆ ತಗ್ಗಿಸಲು ನಿನ್ನಿಂದಾಗಲಿಲ್ಲ! ತಲೆ ಉರುಳಿಸಲಿಕ್ಕಾಗಿ ಹದ್ದುಗಳೂ ಸ್ಮಶಾನದಲ್ಲಿ ತಿರುಗುತ್ತಿವೆ; ಆದರೆ ಅದು ವೀರಪುರುಷರ ಮಾರ್ಗವಲ್ಲ.

ಕಾರುವಾಕಿ: (ಚಕಿತಳಾಗಿ) ಓರ್ವ ಕೈದಿಯ ತಲೆ ತಗ್ಗಿಸಲಾರದವ, ತಲೆ ಉರುಳಿಸಲು ಸ್ಮಶಾನದಲ್ಲಿ ಹದ್ದುಗಳೂ ತಿರುಗುತ್ತಿವೆ. ಆದರೂ ಅದು ವೀರಪುರುಷರ ಮಾರ್ಗವಲ್ಲ! ಅದು ವೀರ... (ಒಮ್ಮೆಲೆ) ಮುಂದೆ ತಾವೇನು ಮಾಡಿದಿರಿ ಪ್ರಭೋ?

ಅಶೋಕ:— ಮುಂದೆ...ಮುಂದೆ...ನಾನು ಹೇಳಿದ ವಧೆಯ ಆಜ್ಞೆಯನ್ನು ಹಿಂತೆಗೆದುಕೊಂಡೆ.

ಕಾರುವಾಕಿ:— (ಅತೀ ಚಕಿತಳಾಗಿ) ಏನು? ಏನಂದಿರಿ ಪ್ರಭೋ?

ಅಶೋಕ:— ಶಿರಚ್ಛೇದನದ ಆಜ್ಞೆ ಹಿಂತೆಗೆದುಕೊಂಡು, ಅವನ ರಾಜ್ಯ ಸಹ ಅವನಿಗೇ ಕೊಟ್ಟುಬಿಟ್ಟೆ.

[ಆಶ್ಚರ್ಯದಿಂದ ರಾಣಿಯ ನಯನಗಳು ವಿಶಾಲವಾಗುತ್ತವೆ. ಅವಳು ಒಮ್ಮೆ ಉರಿಯುತ್ತಿರುವ ದೀಪವನ್ನೂ ಮತ್ತೊಮ್ಮೆ ಸಾಮ್ರಾಟನನ್ನೂ ನೋಡಿ ತನ್ನಷ್ಟಕ್ಕೆ ಮಾತಾಡಿಕೊಳ್ಳುತಾಳೆ]

ಕಾರುವಾಕಿ:— (ತನಗೆ ತಾನೇ ಹೇಳುವಂತೆ) ಮೃತ್ಯುದಂಡ ಹಿಂತೆಗೆದುಕೊಂಡು ಅವನ ರಾಜ್ಯ ಅವನಿಗೇ ಕೊಟ್ಟುಬಿಟ್ಟೆ!... ಯಾವ ರಾಜ್ಯಕ್ಕಾಗಿ ಲಕ್ಷಾಂತರ ಮಂದಿ ಜನರ ನೆತ್ತರು ಹರಿಸಿದರೋ, ಯಾಕಾಗಿ ಲಕ್ಷಾಂತರ ಲಲನೆಯರ ಸೌಭಾಗ್ಯ ಅಳಿಸಿಹೋಯ್ತೋ, ಯಾವುದಕ್ಕಾಗಿ ಲಕ್ಷಾಂತರ ಮಂದಿ ಮಾತೆಯರ ಮಡಿಲು ಬರಿದಾಯ್ತೋ, ಯಾವ ರಾಜ್ಯದ ಹಂಬಲಕ್ಕಾಗಿ ನಗರಗಳು ಪಾಳುಬಿದ್ದು ನಿರ್ನಾಮವಾದುವೋ, ಭವನಗಳು ಕುರುಹುಗಳಾಗಿ ಮಾರ್ಪಟ್ಟವೋ, ಭೂವ್ಯಾಕಾಶಗಳು ಅನಾಥರ, ಅಪಹಿಜರ, ಅನಾಧೃತರ ಚೀತ್ಕಾರದಿಂದ ಕಂಪಿಸಿದುವೋ ಆ ರಾಜ್ಯವನ್ನು ಕುಮಾರನಿಗೊಪ್ಪಿಸಿದಿರೇನು? ಇಷ್ಟು ದೊಡ್ಡ ಮರಣ ಹೋಮ ಮಾಡಿ ಇಂತಹ ದಾನವೀ ಲೀಲೆಯ ನಂತರವೂ.........

ಅಶೋಕ:— (ಅನ್ಯಮನಸ್ಕನಂತೆ ಒಮ್ಮೆಲೆ) ಹೂಂ, ಆದದ್ದೇನೋ ಇದೇ. ಆದರೆ ಇದು ತಪ್ಪೋ ಒಪ್ಪೋ ತಿಳಿಯದು. ಬಹುಶಃ ತಪ್ಪಾಗಿರಲೂ ಬಹುದು. ಅದು ಹೇಗೆ ಮತ್ತು ಏಕಾಯ್ತೆಂಬುದು ತಿಳಿಯದು. ಸ್ವಯಂ ನನಗೇ ವಿಶ್ವಾಸವಾಗಲಿಲ್ಲ; ಬಹುಶಃ ನಿನಗೂ ಆಗುತ್ತಿರಲಿಲ್ಲ. ವಿಷಯವೇ ಅಂತಹುದು. ಮಗಧದ ಪ್ರತಾಪೀ ಸಾಮ್ರಾಟ್......

ಕಾರುವಾಕಿ:— (ಒಮ್ಮೆಲೆ) ಅದಲ್ಲ, ಅದಲ್ಲ ಸಾಮ್ರಾಟ್. ಇದೆಲ್ಲಾ ಒಮ್ಮಿಂದೊಮ್ಮೆಲೆ ಏನಾಯ್ತು ಎಂದೇ ನಾನು ಕೇಳಲಿಚ್ಛಿಸುವುದು.

ಅಶೋಕ:— (ಮುಗುಳ್ನಗುತ್ತಾ) ಮತ್ತು ಏಕಾಯ್ತು ಎಂದು ಕೇಳಲಿಚ್ಛಿಸುವುದೇನು? ದೇವೀ! ಇದೇ ಪ್ರಶ್ನೆಯನ್ನು ನಾನು ಸ್ವಯಂ ನನಗೇ ಕೇಳುತ್ತಿದ್ದೇನೆ. 'ಅಶೋಕ್, ಇದೆಲ್ಲವನ್ನೂ ಏಕೆ ಮಾಡಿದೆ?' ಎಂದು.

ಕಾರುವಾಕಿ:— (ಚಕಿತಳಾಗಿ) ಏಕೆ ಮಾಡಿದೆ?

ಅಶೋಕ:— (ದೃಢತೆ) ಏಕೆಂದರೆ ನಾನು ಕಳಿಂಗದ ಯುವರಾಜ

ನಿಂದ ಪರಾಜಿತನಾಗಲು ಸಿದ್ಧನಿಲ್ಲ. ಏಕೆಂದರೆ ನಾನವನ ತಲೆ ತಗ್ಗಿಸಲಪೇಕ್ಷಿಸುತ್ತೇನೆ ವಿನಃ ತಲೆ ಕಡಿಯಲಪೇಕ್ಷಿಸವುದಿಲ್ಲ.

ಕಾರುವಾಕಿ:— ತಲೆ ತಗ್ಗಿಸಲಪೇಕ್ಷಿಸುತ್ತೀರಿ; ಕಡಿಯಲಪೇಕ್ಷಿಸುವುದಿಲ್ಲ! ಸ್ವಾಮಿ, ತಾವಿವತ್ತು ಯಾವ ಭಾಷೆಯಲ್ಲಿ ಮಾತಾಡುತ್ತಿರುವಿರಿ? ಹತ್ತು ದಿವಸಗಳಿಂದ ನಾನು ಕೇಳುತ್ತಿರುವ ಭಾಷೆಯು ರಕ್ತ ಮತ್ತು ಜ್ವಾಲೆಗಳ ಭಾಷೆಗಳಾಗಿದ್ದುವು. ಇವತ್ತೇಕೆ ಸ್ಮಶಾನದಲ್ಲಿ ವಸಂತಋತುವಿನ ಕೋಗಿಲೆ ಹಾಡುತ್ತಿದೆ?

ಅಶೋಕ:— ದೇವೀ, ನನಗೆ ನಿನ್ನ ವ್ಯಂಗ್ಯವು ಅರ್ಥವಾಗುತ್ತಿದೆ. ಆದರೆ ನಾನೊಬ್ಬ ಮಹತ್ವಾಕಾಂಕ್ಷಿ. ಯಾವ ಬೆಲೆಯಲ್ಲಾದರೂ ಸರಿ ವಿಜಯ ನನ್ನದಾಗಬೇಕು. ಗಾಂಧಾರದಿಂದ ಕೇರಳ, ಕಾಮಾಖ್ಯಾದಿಂದ ಸೌರಾಷ್ಟ್ರದ ವರೆಗೆ ಇಡೀ ದೇಶವು ನನ್ನ ಹೆಸರಿನಿಂದಲೇ ಕಂಪಿಸುತ್ತಿವೆ. ನಾನು ಕಳಿಂಗ ವನ್ನು ಸೋಲಿಸುವ ಪ್ರತಿಜ್ಞೆ ಮಾಡಿದ್ದೆ. ಅದು ಯಾವ ಕಳಿಂಗ? ನಂದರ ಅಖಂಡ ಶಕ್ತಿಯನ್ನು ತುಂಡು ಮಾಡಿ ಒಗೆದ ಕಳಿಂಗ! ಮಹಾಶೂರರಾದ ನನ್ನ ಪಿತೃ ಮತ್ತು ಪಿತಾಮಹರ ಆಡಳಿತ ಸಮಯದಲ್ಲೂ ಅವರಿಗೆ ತಲೆ ಬಾಗಲು ಒಪ್ಪದಿದ್ದ ಕಳಿಂಗ! ಹದಿನಾರು ರಾಜ್ಯಗಳನ್ನು ತನ್ನ ಮಸ್ತಿಷ್ಕ ಬಲ ದಿಂದ ಅಖಂಡವಾಗಿ ಕಿತ್ತೊಗೆದ ಕೌಟಿಲ್ಯನ ಕುಟಿಲತೆಗೆ ಮೂದಲಿಸಿದ ಕಳಿಂಗವನ್ನು ನಾನು ಮೌರ್ಯ ಸಾಮ್ರಾಜ್ಯದಲ್ಲಿ ಲಯಮಾಡಲಿಚ್ಛಿಸಿದೆ. ಆ ಕಳಿಂಗ ರಾಜ್ಯದ ಪರಾಜಯದ ವಿನಃ ಮೌರ್ಯ ಸಾಮ್ರಾಜ್ಯದ ಅಖಂಡ ಏಕೀಕರಣವು ಅಸಂಭವ. ಅದಕ್ಕಾಗಿಯೇ ನಾನವನ ದರ್ಪವನ್ನು ಚೂರು ಚೂರು ಮಾಡಿ, ಅದರ ಶರೀರ ಖಂಡತುಂಡು ಮಾಡಿದೆ. ಆದರೆ......... (ನಿಶ್ವಾಸ)

ಕಾರುವಾಕಿ:— ಆದರೆ? ಏನು ಪ್ರಭೋ?

ಅಶೋಕ:— ಆದರೆ ನಾನದನ್ನು ನನ್ನದನ್ನಾಗಿ ಮಾಡಲಾರದಾದೆ. ನನ್ನ ಹೃದಯದಲ್ಲಿ ಉರಿಯುತ್ತಿರುವ ಭಯಂಕರ ಜ್ವಾಲೆ ನನ್ನ ಜಯಜಯಾಕಾರವನ್ನು ಉಪಹಾಸ ಮಾಡಿ ಕೇಳುತ್ತಿದೆ– 'ಅಶೋಕ್, ನೀನು ಮಾಡುತ್ತಿರುವ ಅತ್ಯಾಚಾರದ ಬದಲಿಗೆ ನೀನು ರಕ್ತದ ಕಣ್ಣೀರು ಹರಿಸಬೇಕಾಗುವುದು. ನಿನ್ನ ಆತ್ಮವೇ ನಿನ್ನನ್ನು ಧಿಕ್ಕರಿಸಲಿದೆ' ಎಂದು. (ಒಮ್ಮೆಲೆ) ಬೇಡ, ಬೇಡ ನನಗಾಸ್ಥಿತಿ ಬರುವುದೇ ಬೇಡ. ನಾನವನನ್ನು ನನ್ನವನನ್ನಾಗಿ ಮಾಡ

ಲಿಚ್ಛಿಸುತ್ತೇನೆ. ನಾನು ತಲೆ ಉರುಳಿಸುವ ಹದ್ದುವಲ್ಲ, ನನಗೆ ಜಯ ಬೇಕು.

ಕಾರುವಾಕಿ:— ಸ್ವಾಮಿ, ಸ್ವಾಮಿ ತಾವು ಅಸ್ವಸ್ಥರಾಗಿದ್ದೀರಿ.

ಅಶೋಕ:— ನಾನು ಸ್ವಸ್ಥನೋ ಅಸ್ವಸ್ಥನೋ ನನಗೇ ತಿಳಿಯದು. ಆದರೆ ಗೆಲ್ಲಲಪೇಕ್ಷಿಸುತ್ತೇನೆ. ಅದಕ್ಕಾಗಿಯೇ ಕುಮಾರನನ್ನು ಸ್ವತಂತ್ರ ಮಾಡಿದ್ದೇನೆ. ಅವನ ರಾಜ್ಯ ಅವನಿಗೇ ಕೊಟ್ಟಿದ್ದೇನೆ. ನಾನು ಇನ್ನೊಂದು ನಿಶ್ಚಯವನ್ನೂ ಮಾಡಿರುವೆ.

ಕಾರುವಾಕಿ:— ಅದೇನು ನಿಶ್ಚಯ ಸ್ವಾಮಿ?

ಅಶೋಕ:— ಆಶೆಯಿದ್ದಲ್ಲಿ ಸಂಘಮಿತ್ರಾಳು ಕುಮಾರನನ್ನು ವರಿಸ ಬಹುದು ಎಂದು ನಿಶ್ಚಯಿಸಿದ್ದೇನೆ.

ಕಾರುವಾಕಿ:— (ವಿಶ್ವಾಸವಿಲ್ಲದವಳಂತೆ) ಸ್ವಾಮಿ ... ಸ್ವಾಮಿ, ಜೇಷ್ಠದ ಉರಿಯುತ್ತಿರುವ ಮಧ್ಯಾಹ್ನದ ಬಿಸಿಲಿನಲ್ಲಿ ಶ್ರಾವಣ ಮಾಸದ ಮೊದಲು ಬೀಸುವ ತಂಗಾಳಿ! ರೌರವ ನರಕಕ್ಕೆ ಬೀಸುತ್ತಿರುವ ಸ್ವರ್ಗ ಸುಗಂಧ ವಿಶ್ವಾಸವಾಗುವುದಿಲ್ಲ ರಾಜನ್!

ಅಶೋಕ:— ವಿಶ್ವಾಸ ಉಂಟಾಗಲೂ ಹೆಚ್ಚಿನ ಪ್ರತೀಕ್ಷೆಯ ಅಗತ್ಯ ವಿಲ್ಲ ದೇವೀ! ಆದರೆ ನಾನು ಮಾಡುತ್ತೆರುವ ಕೆಲಸ ಸರಿ ತಾನೇ? ನನ್ನಲ್ಲಾವ ದುರ್ಬಲತೆಯು ಮನೆಮಾಡಿಕೊಂಡಿಲ್ಲವಷ್ಟೇ? ಈಗಲೂ ತಡವಾಗಿಲ್ಲ, ಮಹೇಂದ್ರ ಮತ್ತು ಉಪಗುಪ್ತರು ಯುವರಾಜನನ್ನು ಕರೆತರಲು ಹೋಗಿ ದ್ದಾರೆ. ರಾಧಾಗುಪ್ತನು ಸಂಘಮಿತ್ರಾಳನ್ನು ಕರೆತರಲು ಹೋಗಿದ್ದಾನೆ. ಅವರು ಬರುವ ಮುಂಚೆ ನನ್ನಲ್ಲಿ ಯಾವುದಾದರೂ ದುರ್ಬಲತೆ ಇದೆಯೇ ನೋಡಬೇಕು. (ಯಾರೋ ಬರುವ ಸಂಜ್ಞೆ) ಓಹ್ ಬಂದರೇನು?

ಕಾರುವಾಕಿ:— ಯಾರು?

[ಪ್ರತಿಹಾರಿಯ ಪ್ರವೇಶ]

ಪ್ರತಿಹಾರಿ:— ಮಹಾರಾಜರಿಗೆ ಜಯವಾಗಲಿ! ಸೇನಾಪತಿಯವರಿಂದ ಸಂದೇಶ ಬಂದಿದೆ.

ಅಶೋಕ:— ಸೇನಾಪತಿಯಿಂದ ಸಂದೇಶ! ಏನಂತೆ?

ಪ್ರತಿಹಾರಿ:— ಸ್ವಲ್ಪ ಸಮಯದ ಹಿಂದೆ ಅವರು ಓರ್ವ ಭಿಕ್ಷುಣಿ ಯನ್ನು ರಣಭೂಮಿಯಲ್ಲಿ ಬಂಧಿಸಿದರಂತೆ.

ಅಶೋಕ:— ಭಿಕ್ಷುಣಿಯನ್ನು! ಏಕೆ? ಅವಳೇನು ಮಾಡುತ್ತಿದ್ದಳಲ್ಲಿ?

ಪ್ರತಿಹಾರಿ:— ಪ್ರಭೋ, ಸೈನಿಕರು ಅಲ್ಲಿಗೆ ಹೋದಾಗ ಅವಳು ಗಾಯಗೊಂಡವರ ಉಪಚಾರ ಮಾಡುತ್ತಾ ತಿರುಗುತ್ತಿದ್ದಳಂತೆ. ಸೈನಿಕರು ಅವಳನ್ನು ಸುತ್ತುಗಟ್ಟಿದಾಗ ಅವಳು ಭಯಪಡದೆ ನಗುತ್ತಾ 'ನನ್ನನ್ನು ಬಂಧಿಸುತ್ತಿರೇನು?' ಎಂದು ಕೇಳಿದಳಂತೆ. 'ನಾನು ಸ್ವಯಂ ಸಾಮ್ರಾಟನಿಗೆ ಸಿಗಲು ಬರಬೇಕೆಂದಿದ್ದೆ' ಎಂದೂ ಅಂದಳಂತೆ.

ಅಶೋಕ:— ನಿಜವಾಗಿಯೂ ಅವಳು ಹಾಗಂದಳಂತೇನು? ಸ್ವಲ್ಪವೂ ಹೆದರಲಿಲ್ಲವೇ?

ಪ್ರತಿಹಾರಿ:— ಹೆದರಿಕೆಯೇ ಸ್ವಯಂ ಅವಳಿಗೆ ಹೆದರುತ್ತದೆ. ಅವಳ ನೇತ್ರದ್ವಯಗಳು ಅಪರಿಮಿತ ವಿಶ್ವಾಸದಿಂದ ತುಂಬಿವೆ. ಸೈನಿಕರು ಅವಳನ್ನು ಬರಹೇಳಿದಾಗ...

ಕಾರುವಾಕಿ:— ಏನೆಂದಳವಳು?

ಪ್ರತಿಹಾರಿ:— ಅವಳು 'ನಾನು ನಿಮ್ಮೊಡನೆ ಬರುತ್ತೇನೆ, ಆದರೆ ಈಗಲ್ಲ. ಗಾಯಗೊಂಡವರ ಶುಶ್ರೂಶೆ ಮುಗಿದ ನಂತರ ನಿಮಗೆ ಅವಸರವಿದ್ದರೆ ನೀವು ಸಹಸಕರಿಸಬಹುದು' ಎಂದಳಂತೆ.

ಕಾರುವಾಕಿ:— ಮತ್ತು... ಮತ್ತೇನಾಯ್ತು?

ಪ್ರತಿಹಾರಿ:— ಮತ್ತು ಸಾಮ್ರಾಟರ ಸೈನಿಕರು ಅವಳಿಗೆ ಸಹಾಯ ಮಾಡಿದರು.

ಅಶೋಕ:— ಹಾಂ! ನನ್ನ ಸೈನಿಕರು ಗಾಯಗೊಂಡವರ ಶುಶ್ರೂಷೆ ಮಾಡಿದರೇನು? ಓಹ್, ಇದೆಂಥಾ ಅದ್ಭುತ ವಿಷಯ? ಈ ಭಿಕ್ಷುಣಿಯಲ್ಲೂ ಎಷ್ಟು ಶಕ್ತಿ ಇದೆ?

ಕಾರುವಾಕಿ:— ಸೈನಿಕರ ಮನಸ್ಸನ್ನೇ ಗೆದ್ದುಕೊಂಡ ಅವಳ ಶಕ್ತಿ ಸಾಧಾರಣವಾದುದಾಗಿರಲಿಕ್ಕಿಲ್ಲ ಸಾಮ್ರಾಟ್!

ಅಶೋಕ:— ಪ್ರತಿಹಾರೀ, ಅವಳನ್ನು ಕರೆದು ತಾ. ನೀನು ಶೀಘ್ರವಾಗಿ ಹೋಗಿ ಅವಳನ್ನು ಆದರಿಸಿ ಉಪಚರಿಸಿ ಕರೆದುಕೊಂಡು ಬಾ.

ಪ್ರತಿಹಾರಿ:— ಅಪ್ಪಣೆ ಪ್ರಭೋ!

[ಬಗ್ಗಿ ನಮಸ್ಕರಿಸುತ್ತಾ ಪ್ರತಿಹಾರಿಯ ನಿರ್ಗಮನ]

ಅಶೋಕ:— ಏನು ವಿಚಾರ ದೇವೀ? ಈ ಭಿಕ್ಷುಣಿ ಯಾರಾಗಿರಬಹುದು? ಅವಳು ಶಸ್ತ್ರಗಳಿಗೆ ಹೆದರುವುದಿಲ್ಲ, ಬದಲಾಗಿ ಶಸ್ತ್ರಧಾರಿಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುತ್ತಾಳೆ!

ಕಾರುವಾಕಿ:— ನನಗೆ ಇದರಲ್ಲೇನೋ ರಹಸ್ಯ ಕಾಣುತ್ತಿದೆ ಪ್ರಭೋ!

ಅಶೋಕ:— ರಹಸ್ಯ! ಇದರಲ್ಲಾವ ರಹಸ್ಯ ಅಡಗಿರಲು ಸಾಧ್ಯವಿದೆ ದೇವೀ?

ಕಾರುವಾಕಿ:— ಅವಳು ಮೊದಲೇ ನಿಮ್ಮನ್ನು ಕಾಣುವ ಆಶೆಯನ್ನು ವ್ಯಕ್ತಪಡಿಸಿದ್ದಳು.

ಅಶೋಕ:— ಹಾಂ, ಹೌದು ಹೌದು! ಪ್ರತಿಹಾರಿ ಆ ವಿಷಯ ಹೇಳಿದಳು.

ಕಾರುವಾಕಿ:— ಸಾಮ್ರಾಟ್, ಈ ರಹಸ್ಯಮಯೀ ಭಿಕ್ಷುಣಿಯು ಈ ಈ ಅಪಸಮಯದಲ್ಲಿ ರಣಭೂಮಿಯಲ್ಲಿ ಒಬ್ಬಂಟಿಗಳಾಗಿ ತಿರುಗಾಡುವುದೆಂದರೆ ಅದೇನು ಸಾಧಾರಣ ವಿಷಯವಲ್ಲ. ಅವಳು ರಾಜಕುಲ ಯಾ ರಾಜತಂತ್ರದಲ್ಲಿ ಅವಶ್ಯವಾಗಿ ಭಾಗಿಯಾಗಿರಬೇಕು.

ಅಶೋಕ:— ಹಾಗಾದರೆ?.........

ಕಾರುವಾಕಿ:— ಹಾಗಾದರೆ ಸಾಮ್ರಾಟ್, ಅವಳು ಪ್ರತಿರೋಧವನ್ನಪೇಕ್ಷಿಸುತ್ತಾಳೆ. ನಾರಿಯು ಒಂದುಸಲ ಪ್ರತಿರೋಧದ ಬಗ್ಗೆ ಚಿಂತಿಸಿದರೆ ಮುಂದೆ ಅವಳಾವ ವಿಷಯವನ್ನೂ ವಿಮರ್ಶಿಸುವುದಿಲ್ಲ. ನನಗಿದರಲ್ಲಿ ಷಡ್ಯಂತ್ರ ಕಂಡುಬರುತ್ತಿದೆ. ಆದುದರಿಂದ ಸಾಮ್ರಾಟರು ಸಾವಧಾನರಾಗಿರಲಿ.

ಅಶೋಕ:— (ಮುಗುಳ್ನಗುತ್ತಾ) ರಾಜಕುಲದವರ ಶಬ್ದಾವಲಿ ಬಹು ಕಡಿಮೆ ಇರುತ್ತದೆಂದು ಭಿಕ್ಷು ನಿಜ ಹೇಳಿದರು. ವೈಭವ, ವಿಲಾಸ, ಶಂಕೆ, ಷಡ್ಯಂತ್ರ, ಪ್ರತಿಶೋಧ ಇವರ ವಿನಃ ಬೇರಾವ ವಿಷಯವೂ ರಾಜಕುಲದವರ ಗಮನಕ್ಕೆ ಬರುತ್ತಿಲ್ಲ.

[ಪ್ರತಿಹಾರಿಯ ಪ್ರವೇಶ]

ಅಶೋಕ:— ಏನು ಭಿಕ್ಷುಣಿ ಬಂದಳೇನು?

ಪ್ರತಿಹಾರಿ:— ಇಲ್ಲ ಸಾಮ್ರಾಟ್, ಬಂದಿರುವುದು ಭಿಕ್ಷುಣಿಯಲ್ಲ ಮತ್ತೋರ್ವ ಭಿಕ್ಷು.

ಅಶೋಕ:— ಭಿಕ್ಷು! ಆದರೂ ಈ ಅಪಸಮಯದಲ್ಲಿ! ಭಿಕ್ಷು ಭಿಕ್ಷುಣಿಯರ ಹೊರತಾಗಿ ಕಳಿಂಗದಲ್ಲಿ ಯಾರೂ ಉಳಿದಿಲ್ಲವೇನು?

ಕಾರುವಾಕಿ:— ಮರಣಕ್ಕಂಜಿ ರಣಭೂಮಿಗೆ ಹೋಗದೆ ಉಳಿದವರು ಭಯದಿಂದ ಹಳದಿ ವಸ್ತ್ರ ಧರಿಸಿ ಭಿಕ್ಷುಗಳಾಗಿದ್ದಾರಂತೆ!

ಅಶೋಕ:— ಬಹುಶಃ ಹಾಗೇ ಇರಬೇಕು. ಪ್ರತಿಹಾರೀ, ಭಿಕ್ಷು ಹೇಗಿದ್ದಾನೆ?

ಪ್ರತಿಹಾರಿ:— ಕ್ಷಮಿಸಿ ಸಾಮ್ರಾಟ್, ಅವನು ಬಹಳ ಕೋಪಿಷ್ಠ ನಾಗಿದ್ದಾನೆ.

ಅಶೋಕ:— ಕೋಪಿಷ್ಠ? ಏನು ನಿನ್ನ ಹತ್ತಿರ ಜಗಳವಾಡಿದನೇನು?

ಪ್ರತಿಹಾರಿ:— ನಾನವರನ್ನು ಹೊರಗೆ ನಿಲ್ಲಲು ಹೇಳಿದಾಗ ಅವರು ಜಗಳವಾಡಲಿಲ್ಲ. ಆದರೆ ಹೊಡೆಯಲಿಕ್ಕೇ ಬಂದರು.

ಕಾರುವಾಕಿ:— ಸಾಮ್ರಾಟ್, ಸಾವಧಾನರಾಗಿರಿ. ಮೇಲೆ ಶಾಂತಿ ತೋರುತ್ತಿದೆ. ಒಳಗಿನಿಂದ ಜ್ವಾಲಾಮುಖಿ ಪ್ರಜ್ವಲಿಸುತ್ತಿದೆ. ಬೂದಿ ಮುಚ್ಚಿದ ಕೆಂಡ!

ಅಶೋಕ:— (ಪ್ರತಿಹಾರಿಗೆ) ಸರಿ, ಅವರನ್ನು ಒಳಗೆ ಬರಹೇಳು.

ಪ್ರತಿಹಾರಿ:— ಅಪ್ಪಣೆ. (ಹೊರಟುಹೋಗುತ್ತಾನೆ)

ಅಶೋಕ:— ದೇವೀ, ಜ್ವಾಲಾಮುಖಿಯು ನನ್ನೆದೆಯಲ್ಲೂ ಉರಿಯುತ್ತಿದೆ. ಅದನ್ನು ತಡೆಹಿಡಿಯುವ ಉಪಾಯವನ್ನು ಭಿಕ್ಷುವಾದರೂ ಸೂಚಿಸುತ್ತಾನೋ ನೋಡುವ.

ಕಾರುವಾಕಿ:— ಸ್ವಯಂ ಮಾರ್ಗ ತಪ್ಪಿರುವವನು ಇನ್ನೊಬ್ಬನಿಗೇನು ಮಾರ್ಗ ತೋರಿಸಬಲ್ಲ!

ಅಶೋಕ:— ಅವನ ಸಫಲತೆಯಲ್ಲದಿದ್ದರೂ ಅಸಫಲತೆಯಾದರೂ ಮಾರ್ಗದರ್ಶನವೀಯಬಹುದು ತಾನೇ?

[ಭಿಕ್ಷುವಿನ ಪ್ರವೇಶ]

ಅಶೋಕ:— ಪ್ರಣಾಮ ಭಿಕ್ಷು!

ಭಿಕ್ಷು:— ಪ್ರಣಾಮದ ಅಗತ್ಯವಿಲ್ಲ ಸಾಮ್ರಾಟ್! ಸತರ್ಕತೆಯ ಆವಶ್ಯಕತೆಯಿದೆ. ಭಗವಾನ್ ಬುದ್ಧನ ಶಿಷ್ಯಶಿಷ್ಯೆಯರು ತಮ್ಮ ಹಳದಿ ವಸ್ತ್ರದಡಿ

ಯಲ್ಲಿ ಶಸ್ತ್ರಗಳನ್ನಿಟ್ಟುಕೊಳ್ಳುತ್ತಾರೆಂಬುದನ್ನು ಮರೆಯಬೇಡ ಸಾಮ್ರಾಟ್!

ಅಶೋಕ:— (ಒಮ್ಮೆಲೆ) ಏನು? ಯಾರು ನೀನು? (ಸರಿಯಾಗಿ ನೋಡಿ) ಬಂಧುಜೀವ! ಸರಿ, ನಿನ್ನ ಸಿಟ್ಟಿನಿಂದಾಗಿ ಭಿಕ್ಷುಗಳ ಅಪಮಾನ ವಾಗುತ್ತಿದೆಯೆಂಬುದನ್ನು ಮರೆಯಬೇಡ.

ಕಾರುವಾಕಿ:— ಅರೇ! ನಿನ್ನ ಗುರುತ್ತೇ ಆಗಲೊಲ್ಲದು.

ಭಿಕ್ಷು:— ದೇವೀ, ಬಂಧುಜೀವನನ್ನು ಗುರುತಿಸುವುದು ಒಂದು ಆಟವಲ್ಲ. ಕೊಸಲಿಯಲ್ಲಿ ಸಾವಿರಾರು ಮಂದಿ ಬಂಧುಜೀವನಿಂದ 'ಪ್ರಾವೃಜ್ಯ ಗ್ರಹಣ' ಮಾಡಲು ಸಿದ್ಧರಿದ್ದಾರೆ.

ಕಾರುವಾಕಿ:— ಮತ್ತಿಲ್ಲಿಗೇಕೆ ಬಂದಿ? 'ಪ್ರಾವೃಜ್ಯಗ್ರಹಣ' ಮಾಡು ವಷ್ಟು ಮೊದ್ದು ಪ್ರಾಣಿಗಳು ನಾವಲ್ಲ. ನಾವು ವಿಜಯಿಗಳು. ಇತರರಿಗೇ ಹೋಗಿ ದೀಕ್ಷೆ ಕೊಟ್ಟುಬಿಡು.

ಭಿಕ್ಷು:— ಅವರಿಗೆ ಕೊಟ್ಟುಬಿಡುತ್ತಿದ್ದೆ. ಆದರೆ ಸ್ವಯಂ ಕಪಟಿ ಯಾದುದರಿಂದ ನಾನವರ ಕಪಟತನ ಕಂಡಿದ್ದೇನೆ. ಅದಕ್ಕಾಗಿ ಸಾಮ್ರಾಟನಿಗೆ ಸಲಹೆಯೀಯಲು ಬಂದಿದ್ದೇನೆ.

ಅಶೋಕ:— ಏನು ಬೇಕಾಗಿತ್ತು ಹೇಳು.

ಭಿಕ್ಷು:— ಯಾರು ಪ್ರತಿರೋಧಕ್ಕಾಗಿ 'ಪ್ರಾವೃಜ್ಯಗ್ರಹಣ' ಮಾಡು ತ್ತಾರೋ ಅವರಿಗೆ ಪ್ರಣಾಮ ಮಾಡಬೇಕೋ ಪ್ರಾಣದಂಡ ಮಾಡಬೇಕೋ?

ಅಶೋಕ:— ನಿನ್ನ ಹತ್ತಿರ ಪ್ರಮಾಣವಿದೆಯೇನು?

ಭಿಕ್ಷು:— ಬಂಧುಜೀವನ ತಲೆ ಆಕಾಶವನ್ನು ಮುಟ್ಟಿದರೂ ಕಾಲು ಭೂಮಿಯಲ್ಲೇ ಇದೆಯೆಂಬುದನ್ನು ಮರೆಯಬೇಡ ಸಾಮ್ರಾಟ್! ಸಾಮ್ರಾಟ್, ಎಚ್ಚರವಾಗಿರು. ಇಲ್ಲಿಗೋರ್ವ ಭಿಕ್ಷುಣಿಯು ಆಗಮಿಸಲಿದ್ದಾಳೆ.

ಕಾರುವಾಕಿ:— (ಒಮ್ಮೆಲೆ) ಅವಳು ಯಾರು?

ಅಶೋಕ:— ಯುದ್ಧಭೂಮಿಯಲ್ಲಿ ಗಾಯಗೊಂಡವರ ಸೇವೆ ಮಾಡುತ್ತಿದ್ದ ಭಿಕ್ಷುಣಿಯೇನು?

ಭಿಕ್ಷು:— ಆ ಭಿಕ್ಷುಣಿಯು ಗಾಯಗೊಂಡವರ ಸೇವೆ ಮಾಡು ತ್ತಿದ್ದಿಲ್ಲ; ಸಾಮ್ರಾಟರಲ್ಲಿಗೆ ಬರುವ ಮಾರ್ಗವನ್ನು ಸರಳ ಮಾಡುತ್ತಿದ್ದಳು. ನಾನವಳನ್ನು ನಿಜರೂಪದಲ್ಲಿ ಕಂಡಿದ್ದೇನೆ ಸಾಮ್ರಾಟ್!

ಅಶೋಕ:— ಅವಳು ಯಾರು?

ಭಿಕ್ಷು:— ಸರಿಯಾಗಿ ಗುರುತಿಸಲಾಗಲಿಲ್ಲ ಸಾಮ್ರಾಟ್! ಅವಳು ದೊಡ್ಡಕುಲದ ಹೆಣ್ಣೆಂಬುದಕ್ಕೆ ಅವಳ ರೂಪರಾಶಿಯೇ ಸಾಕ್ಷಿ. ನಿನ್ನೆ ನಾನವಳನ್ನು ಕಂಡಾಗ ಸಾಮಾನ್ಯ ಸ್ತ್ರೀಯ ರೂಪದಲ್ಲವಳು ಮನೆಮನೆಗಳಿಗೆ ಹೋಗಿ ಅರ್ಧ ವಿಕ್ಷಿಪ್ತ ಜನರನ್ನು ಯುದ್ಧಕ್ಕಾಗಿ ಸಿದ್ಧ ಮಾಡುತ್ತಿದ್ದಳು.

ಅಶೋಕ:— ನಿಜ. ಆದರೆ ಅವಳು ಒಮ್ಮೆಂದೊಮ್ಮೆಲೆ ಭಿಕ್ಷುಣಿಯೇಕಾದಳು?

ಭಿಕ್ಷು:— ಏಕೆಂದರೆ ನಿಷ್ಕಂಟಕವಾಗಿ ನೀವಿದ್ದಲ್ಲಿಗೆ ಬರಬಹುದು. ಮತ್ತು.........

ಕಾರುವಾಕಿ:— ಮತ್ತು..... ...?

ಭಿಕ್ಷು:— ಬಂಧುಜೀವನ ಜಿಹ್ವೆ ಆ ಶಬ್ದಗಳನ್ನುಚ್ಚರಿಸಲು ಇಚ್ಛೆ ಪಡುವುದಿಲ್ಲ ದೇವೀ!

ಅಶೋಕ:— ನಮ್ಮ ಜಿಹ್ವೆ ಹೇಳುತ್ತಿದೆ ಅವಳು ನನ್ನನ್ನು ಹತ್ಯೆ ಮಾಡಬಯಸುತ್ತಾಳೆಂದು.

ಭಿಕ್ಷು:— ನಿಮ್ಮ ಮಾತು ನಿಜ ಸಾಮ್ರಾಟ್.

ಅಶೋಕ:— (ಕ್ರೋಧದಿಂದ) ಸಾಮ್ರಾಟನು ಯಾವಾಗಲೂ ಸರಿಯನ್ನೇ ತಿಳಿಯುತ್ತಾನೆ. ಕೊಲೆಗಾರನಿಂದ ಹೇಗೆ ರಕ್ಷಣೆ ಮಾಡಿಕೊಳ್ಳಬೇಕೆಂಬುದೂ ತಿಳಿದಿದೆ.

ಭಿಕ್ಷು:— ತಿಳಿದಿದೆ ಸಾಮ್ರಾಟ್! ಅವಶ್ಯಕತೆಯಿದ್ದಲ್ಲಿ ಸೈನಿಕ ಸಹಾಯ ಸಿಗುವಂತೆ ವ್ಯವಸ್ಥೆ ಮಾಡಿದ್ದೇನೆ. ಒಳ್ಳೇದು ಪ್ರಣಾಮ, ಈಗ ಹೋಗಿ ಪ್ರಾವ್ರಜ್ಯ ಕೊಡಲು ಪ್ರಾರಂಭ ಮಾಡುತ್ತೇನೆ. ಚಂಡಾಗಿರನಿಗೆ ಕೆಲಸ ಬಹಳವಾಯ್ತೆಂಬುದೇ ವಿಷಾದ ಸಂಗತಿ.

[ಎದ್ದು ನಿಲ್ಲುತ್ತಾನೆ]

ಅಶೋಕ:— (ಒಮ್ಮೆಲೆ) ಬಂಧುಜೀವ!

ಭಿಕ್ಷು:— ಏನು ಸಾಮ್ರಾಟ್?

ಅಶೋಕ:— (ಕೂಡಲೇ ಮೌನವಾಗುತ್ತಾನೆ)

ಭಿಕ್ಷು:— ಏನಾಜ್ಞೆಯಿದೆ ಸಾಮ್ರಾಟ್?

ಅಶೋಕ:— (ಬೆಚ್ಚಿಬಿದ್ದು) ಏನೂ ಇಲ್ಲ ಹೋಗು!

ಭಿಕ್ಷು:— ಅಪ್ಪಣೆ. (ಹೋಗಲು ತಿರುಗುತ್ತಾನೆ)

ಅಶೋಕ:— (ಕರೆದು) ಬಂಧುಜೀವ, ಈ ರಾತ್ರಿ ಪ್ರಾವೃಜ್ಯದ ಕೆಲಸ ನಿಲ್ಲಿಸಬಹುದೇನು?

ಭಿಕ್ಷು:— ಆದರೆ ರಾತ್ರಿಯಲ್ಲಿ ಪ್ರಾವೃಜ್ಯ ಕೊಡಲಾಗುವುದಿಲ್ಲ ಸಾಮ್ರಾಟ್!

ಅಶೋಕ:— ಹಾಗಾದರೆ ನೀನು ಹೋಗು.

[ಬಂಧುಜೀವ ಹೊರಟುಹೋಗುತ್ತಾನೆ. ಪ್ರತಿಹಾರಿ ಪ್ರವೇಶಿಸುತ್ತಾನೆ]

[**ವಿ.ಸೂ.** ಸಮಯದ ಅಭಾವವಿದ್ದಲ್ಲಿ ಬಂಧುಜೀವನ ಪಾತ್ರವನ್ನು ನಾಟ್ಯ ಶಾಲೆಯಲ್ಲಿ ಬಿಟ್ಟುಬಿಡಬಹುದು]

ಪ್ರತಿಹಾರಿ:— ಸಾಮ್ರಾಟನಿಗೆ ಜಯವಾಗಲಿ. ಭಿಕ್ಷುಣಿ ಉಪಸ್ಥಿತಳಿದ್ದಾಳೆ.

ಅಶೋಕ:— ಅವಳನ್ನು ಒಳಗೆ ಕರೆದು ತಾ. ಮತ್ತು ನೀವೆಲ್ಲರೂ ಹೊರಗೆ ನಿಂತುಕೊಳ್ಳಿ.

ಪ್ರತಿಹಾರಿ:— ಅಪ್ಪಣೆ.

[ಬಗ್ಗಿ ನಮಸ್ಕರಿಸುತ್ತಾ ಹೊರಟುಹೋಗುತ್ತಾಳೆ]

ಕಾರುವಾಕಿ:— ಸಾಮ್ರಾಟ್, ನೀವು ಈಗಾದರೂ ಭಿಕ್ಷುಣಿ ಷಡ್ಯಂತ್ರದ ಸೂತ್ರಧಾರಿಣಿ ಎಂದು ಒಪ್ಪುತ್ತೀರಿ ತಾನೇ? ಖಂಡಿತವಾಗಿಯೂ ಅವಳು ಪ್ರತಿಶೋಧಕ್ಕಾಗಿಯೇ ಬಂದಿದ್ದಾಳೆ.

ಅಶೋಕ:— ನಾವೀರ್ವರೂ ಒಂದೇ ಸ್ಥಳದಲ್ಲಿದ್ದೇವೆ ದೇವೀ. ಅವಳು ಹೇಗೆ ಪ್ರತಿಶೋಧ ಮಾಡುತ್ತಾಳೋ ನೋಡುವ.

[ಭಿಕ್ಷುಣಿಯ ಪ್ರವೇಶ. ಹಳದಿ ವಸ್ತ್ರದಿಂದ ಸುತ್ತಲ್ಪಟ್ಟ ನಸು ಶ್ಯಾಮವರ್ಣದ ದೇಹ, ಆಕರ್ಷಕ ನಯನಗಳು, ಕಲಾಮಯ ಭ್ರೂಬಂಕ ಮತ್ತು ವಿಶ್ವಾಸ, ದೃಢತೆ ತುಂಬಿದ ಮುದ್ರೆ, ಛದ್ಮವೇಷಧಾರಿಯಾದ ಭಿಕ್ಷುಣಿಯಂತೆ ಕಾಣಿಸುತ್ತಾಳೆ. ಸಾಮ್ರಾಟನು ಅವಳಲ್ಲಿ ಏನೋ ಹುಡುಕಲಿಚ್ಛಿಸಿ ಅವಳನ್ನೇ ನೋಡಿದರೂ ನಂತರ ತನ್ನ ಪದಮರ್ಯಾದೆಗಾಗಿ ತನ್ನ ಮುಖ ತಿರುಗಿಸುತ್ತಾನೆ. ರಾಣಿ ಕಾರುವಾಕಿಯು ಅವಳ ಅಂಗಾಂಗಗಳನ್ನು ಈಕ್ಷಿಸುತ್ತಾ ಚಕಿತಳಾಗು

ತ್ತಾಳೆ. ಸ್ವಲ್ಪವೇ ಸಮಯದಲ್ಲಿ ಸಾಮ್ರಾಟನು ತನ್ನ ಮನಸ್ಸನ್ನು ಹತೋಟಿಗೆ ತಂದುಕೊಳ್ಳುತ್ತಾನೆ]

ಅಶೋಕ:— ನೀನು ಯಾರು?

ಭಿಕ್ಷುಣಿ:— ಸಾಮ್ರಾಟರು ನೋಡುತ್ತಲೇ ಇದ್ದಾರೆ ಓರ್ವ ಭಿಕ್ಷುಣಿ!

ಅಶೋಕ:— (ಕಠೋರ ಸ್ವರದ ಅಭಿನಯ) ಈ ಅಪಸಮಯದಲ್ಲಿ ರಣಭೂಮಿಯಲ್ಲೇನು ಮಾಡುತ್ತಿದ್ದೆ?

ಭಿಕ್ಷುಣಿ:— ಅದನ್ನು ಸಾಮ್ರಾಟರು ಈ ಹಿಂದೆಯೇ ಅರಿತಿದ್ದಾರೆ.

ಅಶೋಕ:— (ಅಧಿಕಾರ ವಾಣಿ) ಸಾಮ್ರಾಟನು ನಿನ್ನ ಬಾಯಿಯಿಂದಲೇ ಕೇಳಲಪೇಕ್ಷಿಸುತ್ತಾನೆ. ಕಣ್ಣಾರೆ ಕಂಡದ್ದೂ ಕೆಲವು ಸಲ ಸತ್ಯವಾಗಿರುವುದಿಲ್ಲ.

ಭಿಕ್ಷುಣಿ:— ಸತ್ಯ ಸುಳ್ಳಿನ ನಿರ್ಣಯವನ್ನು ಕೊಡಲೂ ಸಾಮ್ರಾಟರು ಬಲ್ಲರೇನು? (ಮುಗುಳ್ನಗು)

ಕಾರುವಾಕಿ:— ಭಿಕ್ಷುಣಿ! ಸಾಮ್ರಾಟನೊಡನೆ ವಿವಾದ ಮಾಡದೆ ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಕೊಡು.

ಭಿಕ್ಷುಣಿ:— (ಪುನಃ ಮುಗುಳ್ನಕ್ಕು) ಓಹ್ ಮಹಾರಾಣೀ, ಸಾಮ್ರಾಟರ ಅವಹೇಳನ ಕೇಳಿ ದುಃಖವಾಯ್ತೇನು? ಆದರೆ ಮಹಾರಾಣೀ, ನಿಮ್ಮ ಪ್ರಶ್ನೆಗೆ ಉತ್ತರ ಕೊಡದಿರಲು ನನಗೇನೂ ಇಚ್ಛೆಯಿಲ್ಲ. ನನ್ನಲ್ಲಿ ಮತ್ತು ನನ್ನ ಕಾರ್ಯದಲ್ಲಿ ನೀವೇಕೆ ಇಷ್ಟು ಅಭಿರುಚಿ ತೋರಿಸುತ್ತಿರುವಿರೆಂದು ನನಗೆ ಮೊದಲು ತಿಳಿಸಿ.

ಕಾರುವಾಕಿ:— ಹಾಗಾದರೆ ಕೇಳು, ನೀನು ಶತ್ರುಪಕ್ಷದವಳಿರಬಹುದು. ನಿನ್ನ ಕಾರ್ಯಗಳಲ್ಲಿ ಏನಾದರೂ ಉದ್ದೇಶ್ಯವಿರಬಹುದು.

ಭಿಕ್ಷುಣಿ:— (ನಕ್ಕು) ಉದ್ದೇಶ್ಯ! ನನ್ನಲ್ಲಿಯೂ ಉದ್ದೇಶ್ಯವಿರಬಹುದು ಅಲ್ಲವೇ? ಮಹಾರಾಣೀ, ನಿನ್ನ ಯೋಚನೆ ತಪ್ಪಲ್ಲ. ನನಗೂ ಒಂದು ಉದ್ದೇಶ್ಯವಿದೆ.

ಅಶೋಕ:— (ಒಮ್ಮೆಲೆ) ಏನು ಉದ್ದಿಶ್ಯ? ನೀನು ಪ್ರತಿಶೋಧ ತೆಗೆದುಕೊಳ್ಳಲು ಬಂದಿರುವಿ ತಾನೇ?

ಭಿಕ್ಷುಣಿ:— ಯಾರ ಪ್ರತಿಶೋಧ? (ಕಂಪಿಸುತ್ತಾಳೆ)

ಅಶೋಕ:— ತನ್ನ ದೇಶದ ಪ್ರತಿಶೋಧ! ಕಳಿಂಗದ ಸೋಲಿನ ಪ್ರತಿಶೋಧ! (ಆವೇಶದಲ್ಲಿ) ನೀನು ಪ್ರತಿಶೋಧ ತೆಗೆದುಕೊಳ್ಳಲಾರೆ ಎಂಬುದನ್ನು ಮರೆಯಬೇಡ! ನೀನು ನನ್ನ ಹತ್ಯೆ ಮಾಡಲಾರೆ......ನಾನು...... ನಾ...... (ಒರೆಯಿಂದ ಕಠಾರಿ ಎಳೆಯುತ್ತಾನೆ)

ಭಿಕ್ಷುಣಿ:— ಹತ್ಯೆ ಮಾಡುತ್ತಾ ಮಾಡುತ್ತಾ ನಿಮ್ಮ ತಲೆಯಲ್ಲಿ ಈಗ ಹತ್ಯೆಯ ವಿನಃ ಇನ್ನಾವ ವಿಷಯವೂ ಬರಲು ಸಾಧ್ಯವಿಲ್ಲ. ರಾತ್ರಿ ಸ್ವಪ್ನದಲ್ಲಿ ಬೆಕ್ಕನ್ನು ಕಂಡ ಇಲಿಯಂತಾಗಿದೆ ನಿಮ್ಮ ಪಾಡು!

ಕಾರುವಾಕಿ:— ಭಿಕ್ಷುಣಿ! ನೀನು ಭಾರತ ಸಾಮ್ರಾಟನೊಡನೆ ಮಾತಾಡುತ್ತಿರುವಿ ಎಂಬುದನ್ನು ಮರೆಯಬೇಡ.

ಭಿಕ್ಷುಣಿ:— ನಿಜವನ್ನು ಹೇಳಲು ಹೆದರಿಕೆಯೇಕೆ ದೇವಿ? (ಹಿಂತಿರುಗಿ) ಸಾಮ್ರಾಟ್ ನಾನು ಹೇಳಿದ್ದೆ ಇಲ್ಲಿಗೆ ಬರುವುದರಲ್ಲಿಯೂ ನನ್ನ ಉದ್ದೇಶ್ಯವಿದೆ ಎಂದು. ಕಳಿಂಗದ ಜನರ ಸಂದೇಶವನ್ನು ನಿಮ್ಮಲ್ಲಿ ತರುವುದೇ ನನ್ನ ಉದ್ದೇಶ್ಯ.

ಅಶೋಕ:— ಕಳಿಂಗ ನಿವಾಸಿಗಳ ಸಂದೇಶ? ಸಂದೇಶ ಕಳುಹಿಸುವಂತವರು ಕಳಿಂಗದಲ್ಲಿ ಇನ್ನೂ ಉಳಿದಿದ್ದಾರೇನು?

ಭಿಕ್ಷುಣಿ:— ಬಹಳ ಉಳಿದಿದ್ದಾರೆ ಸಾಮ್ರಾಟ್, ಬಹಳ ಉಳಿದಿದ್ದಾರೆ! ತನ್ನ ಸೌಭಾಗ್ಯ ಸಿಂಧೂರವನ್ನು ಕಳೆದುಕೊಂಡ ಲಲನೆಯರು ಜೀವಂತರಿದ್ದಾರೆ. ತನ್ನ ಕಂದಮ್ಮಗಳನ್ನು ಹದ್ದುವಿನ ಬಾಯಿಗೆ ಕೊಟ್ಟ ಆ ತಾಯಿಯರಿದ್ದಾರೆ. ಕಣ್ಣಿದ್ದೂ ಕಾಣಲಾಗದ ಮುದುಕರಿದ್ದಾರೆ. ಅವರಲ್ಲಿ ಶರೀರವಿದೆ; ತ್ರಾಣವಿಲ್ಲ, ಕಿವಿಯಿದೆ ಆದರೆ ಕೇಳುವುದಿಲ್ಲ. ಅವರೀಗಲೇ ಒದ್ದಾಡಿ ಪ್ರಾಣದಾನ ಮಾಡುತ್ತಿದ್ದಾರೆ.

ಅಶೋಕ:— ಭಿಕ್ಷುಣಿ...ಭಿಕ್ಷುಣೀ ನಿನ್ನ ಶಬ್ದಜಾಲವನ್ನು ನಿಲ್ಲಿಸು.

ಭಿಕ್ಷುಣಿ:— (ಕೇಳಿದರೂ ಕೇಳದವಳಂತೆ) ಸಾಮ್ರಾಟ್, ದಾನವೀ ಲೀಲೆಯ ರಕ್ತ ಕುಡಿದೇ ಬೆಳೆಯುತ್ತಿರುವ ಬಾಲಕರೂ ಇದ್ದಾರೆ. ಹದ್ದು ಗೂಗೆಗಳು ಕುಳಿತು ದಿನರಾತ್ರಿ ನಿಮ್ಮ ಗುಣಗಾನ ಮಾಡುತ್ತಿರುವ ಮುರಿದ ಮನೆಗಳಿನ್ನೂ ಸಂಪೂರ್ಣವಾಗಿ ಇನ್ನೂ ಅನಾಥವಾಗಿಲ್ಲ. ಅವರೆಲ್ಲರೂ ಕೂಡಿ ನಿನಗೆ ಹೇಳಲು ಹೇಳಿದ್ದಾರೆ— 'ಎಲೈ ಮಗಧದ ಅತ್ಯಾಚಾರೀ ರಾಜನೇ, ಮೃತ್ಯುವು ಲೋಕದ ಸಾಮಾನ್ಯ ಯಾ ನೈಸರ್ಗಿಕ ನಿಯಮ. ಅದಕ್ಕಾಗಿ

ನೀನೇಕೆ ಇಷ್ಟು ಕಷ್ಟಪಡಬೇಕು? ಒಂದುವೇಳೆ ಜೀವನಕ್ಕಾಗಿ ನೀನು ಇದರ ದಶವು ಅಂಶ ಶಕ್ತಿಯನ್ನು ವ್ಯಯ ಮಾಡುತ್ತಿದ್ದರೂ, ಪ್ರಪಂಚ ಬ್ರಹ್ಮನನ್ನು ಮರೆಯುತ್ತಿತ್ತು' ಎಂದು.

ಅಶೋಕ:— ಭಿಕ್ಷುಣಿ!......ಭಿಕ್ಷುಣೀ!......

ಭಿಕ್ಷುಣಿ:— ನಿನಗೆ ಇದೇ ವಿಷಯ ಹೇಳಲಿಕ್ಕಿತ್ತು. ಆದುದರಿಂದಲೇ ಇಲ್ಲಿ ವರೆಗೆ ಬರಬೇಕಾಯ್ತು.

ಅಶೋಕ:— (ಖಿನ್ನನಾಗಿ) ನೀನು ಬರೀ ಹೇಳಲಿಕ್ಕಾಗಿ ಬಂದಿರುವಿಯೇನು? ಪ್ರತಿಶೋಧ ತೆಗೆದುಕೊಳ್ಳಲು ಬರಲಿಲ್ಲವೇನು? ಇಲ್ಲ, ನೀನು ಸುಳ್ಳಾಡುತ್ತಿರುವೆ. ನೀನು ನಿಜವಾಗಿಯೂ ಪ್ರತಿಶೋಧಕ್ಕಾಗಿಯೇ ಬಂದಿರುವೆ.

ಭಿಕ್ಷುಣಿ:— ನಾನು ಪ್ರತಿಶೋಧ ತೆಗೆದುಕೊಳ್ಳಲು ಬಂದಿರುವೆ! ಯಾರ ಪ್ರತಿಶೋಧ? ಎಂಥ ಪ್ರತಿಶೋಧ? ನೀನು ಕಳಿಂಗ ನಿವಾಸಿಗಳ ನಾಶ ಮಾಡಿರುವಿ ಎಂದು ತಿಳಿದಿರುವಿಯಾದರೆ ಅದು ನಿನ್ನ ಭ್ರಮೆ! ಪರಾಜಯ ನಿನ್ನದಲ್ಲದೆ ಅವರದಲ್ಲ ರಾಜನ್. ಕಳಿಂಗ ಸೋತೂ ಗೆದ್ದಿತು; ನೀನು ಗೆದ್ದೂ ಸೋತೆ.

ಅಶೋಕ:— ನಾನು ಗೆದ್ದೂ ಸೋತೆ!

ಭಿಕ್ಷುಣಿ:— ಹಾಂ ಸಾಮ್ರಾಟ್. ನೀನೂ ಗೆದ್ದೂ ಸೋತೆ. ಏಕೆಂದರೆ ನೀನು ಜೀವನಾಶ ಮಾಡಿರುವಿ. ಜೀವನಾಶ ಮಾಡಿದವನು ಎಂದೂ ವಿಜಯ ಪ್ರಾಪ್ತಿಸಿಕೊಳ್ಳಲಾರ.

ಕಾರುವಾಕಿ:— ನಿನ್ನ ಉಡುಗೆ ಮಾತ್ರ ಹಳದಿ. ಆದರೆ ಮಾತಿನಲ್ಲಿ ಭಯಂಕರ ಅಗ್ನಿಜ್ವಾಲೆಯಿದೆ.

ಭಿಕ್ಷುಣಿ:— ಮಹಾರಾಣೀ, ಹಳದಿ ವಸ್ತ್ರದ ಅರ್ಥ ನಿಷ್ಕ್ರಿಯತೆಯಲ್ಲ; ಕ್ರಿಯೆ. ಕ್ರಿಯೆಯಲ್ಲಿ ಸದಾ ಅಗ್ನಿಯಿರುತ್ತದೆ. ಬೆಂಕಿಯೇ ಜೀವನದ ಪಣವಾಗಿದೆ. ಅಗ್ನಿಯು ಪ್ರಕಾಶವನ್ನೂ ಕೊಡಬಲ್ಲದು ಸುಡಲೂ ಬಲ್ಲದು. ಇದರಲ್ಲಿಯ ವಿಶೇಷತೆಯೆಂದರೆ ಕೆಲವರು ತನ್ನಿಂದ ತಾನೇ ಸುಡುತ್ತಾರೆ, ಕೆಲವರು ತನ್ನ ದುರ್ಬಲತೆಯನ್ನು ಸುಡುತ್ತಾರೆ.

ಕಾರುವಾಕಿ:— ಭಿಕ್ಷುಣೀ, ಅಗ್ನಿಯು ಜೀವನದ ಪಣವಾಗಿರ

ಬಹುದು. ಆದರೆ ಶಬ್ದಜಾಲ ಸತ್ಯದ ಪಣವಲ್ಲ. ವಾಕ್ಚಾತುರ್ಯದಿಂದ ಉದ್ದೇಶ ಪೂರ್ಣವಾಗುವುದಿಲ್ಲ.

ಭಿಕ್ಷುಣಿ:— ಗೊತ್ತು ಮಹಾರಾಣೀ, ಉದ್ದೇಶ ವಾಕ್ಚತುರತೆಯಿಂದಲ್ಲ ಕರ್ಮಚಾತುರ್ಯದಿಂದ ಪೂರ್ಣವಾಗುತ್ತದೆ. ಆದರೆ ಬಂಧಿನಿಗೆ ಕರ್ಮ ಮಾಡುವ ಸ್ವಾತಂತ್ರ್ಯತೆ ಎಲ್ಲಿದೆ?

ಅಶೋಕ:— ನೀನು ಬಂಧಿನಿಯೇನು?

ಭಿಕ್ಷುಣಿ:— ನಾನಿಲ್ಲಿರುವುದರ ಅರ್ಥ ಅದೇ ಅಲ್ಲವೇ ಸಾಮ್ರಾಟ್!

ಕಾರುವಾಕಿ:— (ಕಠೋರ ಸ್ವರ) ಹಾಗಾದರೆ ಬಂಧಿನಿಯೊಡನೆ ನಾವು ಎಂತಹ ವ್ಯವಹಾರ ಮಾಡುತ್ತೇವೆ ಎಂದೂ ನಿನಗೆ ತಿಳಿದಿರಬಹುದು.

ಭಿಕ್ಷುಣಿ:— ತಿಳಿದಿರುವೆ. ಮಗಧದಲ್ಲಿಯಾದರೆ ತಲೆ ಹಾರಿಸಲಾಗುತ್ತದೆ. (ಹಿಂತಿರುಗಿ) ಸಾಮ್ರಾಟ್, ಕಠಾರಿಯನ್ನೆತ್ತಿರಿ! ನಾನು ಸಿದ್ಧಳಿದ್ದೇನೆ. [ಶೀಘ್ರತೆಯಿಂದ ಸಾಮ್ರಾಟನ ಕಾಲಬಳಿ ಮಂಡಿಯೂರಿ ಕುಳಿತುಕೊಳ್ಳುತ್ತಾಳೆ]

ಕಾರುವಾಕಿ:— (ಕಂಪಿಸಿ) ಭಿಕ್ಷುಣೀ......

ಅಶೋಕ:— ಭಿಕ್ಷುಣೀ...ಭಿಕ್ಷುಣೀ...ನೀನು ಏನಂದೆ?

ಭಿಕ್ಷುಣಿ:— ಸತ್ಯವಿರುವುದನ್ನೇ ಹೇಳಿರುವೆ ಸಾಮ್ರಾಟ್!

ಅಶೋಕ:— ಸತ್ಯವಿರುವುದನ್ನು ಹೇಳಿದೆ? ಹೆಂಗಸಿನ ತಲೆ ಹಾರಿಸುವುದು ಸತ್ಯವೇನು? ನಾರಿಯ ಹತ್ಯೆ ನಿಜವೇನು? ನಾನು ನಾರಿಯರ ಕೊಲೆ ಮಾಡುತ್ತೇನೇನು? ನಾರಿಯ ಮೇಲೆ ನಾನೆಂತು ಕೈಮಾಡಬಲ್ಲೆ?

ಭಿಕ್ಷುಣಿ:— ಮಗಧ ಸಾಮ್ರಾಟನು ಕ್ರೂರನಿರುವಷ್ಟೇ ಡಂಬಾಚಾರಿಯೂ ಆಗಿರುವನೆಂದು ನಾನು ತಿಳಿದಿರಲಿಲ್ಲ. ಈಗತಾನೇ ಕಠಾರಿಯನ್ನೆತ್ತಿದ್ದರು, ನಾರಿಯ ಹತ್ಯೆಯ ಜ್ಞಾಪಕವಾಗುತ್ತಲೇ ಅವರ ಹೃದಯ ಕಂಪಿಸಿತೇನು? ಆದರೆ (ಆವೇಶ) ಕಳಿಂಗ ಯುದ್ಧದಲ್ಲಿ ಹತಾಹತ ಲಕ್ಷಾಂತರ ಮಂದಿಗೆ ಹೆಂಡತಿ, ತಾಯಿ, ಅಕ್ಕ-ತಂಗಿಯರು ಯಾರೂ ಇರಲಿಲ್ಲವೇನು? ಅವರ ಆ ಹೆಂಡತಿ, ತಾಯಿ, ಅಕ್ಕ-ತಂಗಿಯರು ಸ್ತ್ರೀಯರೇ ಅಲ್ಲವೇನು?

ಕಾರುವಾಕಿ:— ಪುನಃ ಅದೇ ಶಬ್ದಜಾಲ! ಪುನಃ ಅದೇ ಆವೇಶ!

ಭಿಕ್ಷುಣಿ:— ಮಹಾರಾಣೀ, ಸತ್ಯವನ್ನು ಶಬ್ದಜಾಲವೆಂದು ತಿರಸ್ಕರಿಸ

ಬೇಡ. ನಾನು ಕಳಿಂಗದ ಆಹತ ಆತ್ಮದ ಪ್ರತಿನಿಧಿ. ನನ್ನಿಂದ ನೀನು ವೀಣೆಯ ಮಧುರ ಆಲಾಪನೆ ಕೇಳಲಾರೆ. ನೀನೂ ಸ್ತ್ರೀ ತಾನೇ? ಬಾ ನನ್ನೊಡನೆ. ಕಳಿಂಗದ ಪ್ರತಿ ನಗರದಲ್ಲೂ, ಪ್ರತಿ ಹಳ್ಳಿಯಲ್ಲಿಯೂ ಅಸಂಖ್ಯ ಜೀವನ್ಮರಣ ಹೊಂದಿದ ಅನಾಥ ಸ್ತ್ರೀಯರನ್ನು ತೋರಿಸುತ್ತೇನೆ. ಅವರಾತ್ಮ ಅಲ್ಲೋಲ ಕಲ್ಲೋಲವಾಗಿದೆ. (ಸಾಮ್ರಾಟನತ್ತ ತಿರುಗಿ) ಸಾಮ್ರಾಟ್, ಆ ಸ್ತ್ರೀಯರದ್ದೂ ತಲೆ ಹಾರಿಸಿ ಅವರಿಗೂ ಏಕೆ ಈ ಯಾತನೆಯಿಂದ ಮುಕ್ತಿ ಕೊಡಬಾರದು? ತಾವಿಷ್ಟು ರಕ್ತ ಹರಿಸಿದ್ದೀರಿ, ಇನ್ನೂ ಸ್ವಲ್ಪ ಹರಿಸಿ! ಈ ರಕ್ತದಿಂದ ನಿಮ್ಮ ಮಹಾನಾಶದ ಯಜ್ಞ ಪೂರ್ಣವಾಗಬಹುದು. ಈ ವರೆಗೆ ನೀವು ಮಾಡಿರುವುದು ಹತ್ಯೆ; ಈಗ ಮಾಡುತ್ತಿರುವುದು ಬೇಗೆಯಿಂದ ತಪ್ಪಿಸಿಕೊಳ್ಳುವ ಉಪಕಾರ!

ಅಶೋಕ:— (ನಡುಗುತ್ತಾ) ಭಿಕ್ಷುಣಿ, ಸಾಕು ಮಾಡು... ಭಿಕ್ಷುಣಿ. ನನಗೆ ಎಲ್ಲಿಯೋ.........

[ಎರಡೂ ಕೈಗಳಿಂದ ತಲೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಾನೆ. ರಾಣಿ ಅಲ್ಲಿಗೆ ಶೀಘ್ರವಾಗಿ ಬರುತ್ತಾಳೆ]

ಕಾರುವಾಕಿ:— ಸಾಮ್ರಾಟ್, ಸಾಮ್ರಾಟ್! ಏನಾಯ್ತು? ತಾವು ಸ್ವಸ್ಥವಾಗಿಲ್ಲವೇನು?

ಅಶೋಕ:— (ಹತೋಟಿಗೆ ಬಂದು) ಏನೂ ಆಗಿಲ್ಲ ದೇವೀ! ನಾನು ಸ್ವಸ್ಥನಾಗಿದ್ದೇನೆ. ನಾನು ಈ ವಾಣಿಯನ್ನು ಮೊದಲು ಕಳಿಂಗದ ಯುವರಾಜನಿಂದ ಕೇಳಿದಂತೆ ನೆನಪಾಯ್ತು ಅಷ್ಟೇ.

ಭಿಕ್ಷುಣಿ:— ಕಳಿಂಗದ ಯುವರಾಜನಾದರೇನು? ಓರ್ವ ಸಾಮಾನ್ಯ ಸ್ತ್ರೀಯಾದರೇನು? ಈ ಸಂದರ್ಭದಲ್ಲಿ ಎಲ್ಲರ ಭಾಷೆಗಳೂ ಒಂದೇ ಆಗಿವೆ ಸಾಮ್ರಾಟ್! ಭಾವನೆ, ಗತಿ, ಮತಿಗಳು ಕೂಡಾ ಎಲ್ಲರದ್ದೂ ಒಂದೇ ಆಗಿದೆ. ನೀವು ಮನುಷ್ಯರನ್ನಲ್ಲ ಶವಗಳನ್ನು, ನಗರಗಳನ್ನಲ್ಲ ಪಾಳುಭೂಮಿಯನ್ನು ಗೆದ್ದಿರುವಿರಿ. ನೀವು ಸ್ಮಶಾನದ ಸಾಮ್ರಾಟರು!.......

ಅಶೋಕ:— ಅವನೂ ಹಾಗೇ ಅಂದಿದ್ದ. ಸಂಪೂರ್ಣವಾಗಿ ಹೀಗೇ ಹೇಳಿದ್ದ! ನಾನು ಮನುಷ್ಯರದ್ದಲ್ಲ—ಶವಗಳದ್ದು, ನಗರಗಳದ್ದಲ್ಲ—ಪಾಳು ಭೂಮಿಯ ಸಾಮ್ರಾಟನಾಗಿದ್ದೇನೆ. (ಒಮ್ಮೆಲೆ) ಭಿಕ್ಷುಣೀ! ನಿನ್ನ ಮಾತು

ನಿಜ. ನಾನು ನರಹತ್ಯ ಮಾಡಿದ್ದೇನೆ. ನಾನು ನಗರಗಳನ್ನು ಪಾಳುಭೂಮಿಯನ್ನಾಗಿ ಮಾಡಿದ್ದೇನೆ. ಆದರೆ ಅದೇ ಪಾಳುಭೂಮಿಯನ್ನು ಪುನಃ ನಗರವನ್ನಾಗಿ ಮಾಡಲು ಸಾಧ್ಯವಿಲ್ಲವೇನು?

ಭಿಕ್ಷುಣಿ:— ಸಾಧ್ಯವಿಲ್ಲ!

ಅಶೋಕ:— ಸಾಧ್ಯವಿಲ್ಲ! ಏಕೆ?

ಭಿಕ್ಷುಣಿ:— ಏಕೆಂದರೆ ನಿನ್ನ ಈ ಕಾರ್ಯವು ಪರಾಜಿತರಾದವರಲ್ಲಿ ಪ್ರತಿಶೋಧದ ಕಿಡಿಯನ್ನೆಬ್ಬಿಸುತ್ತದೆ. ಪ್ರತಿಶೋಧದ ಭಾವನೆಯನ್ನು ಯಾರು ಪ್ರಜ್ವಲಿತ ಮಾಡುತ್ತಾನೋ ಅವನು ಗೆದ್ದೂ ಸೋಲುತ್ತಾನೆ. ಸಾಮ್ರಾಟ್, ಶಸ್ತ್ರಗಳ ಗೆಲುವೊಂದು ಗೆಲುವೇ? ಯಾವ ದೇಶದಲ್ಲಿ ಈ ರೀತಿಯಲ್ಲಿ ಜನರ ವಧೆ ಮತ್ತು ಮರಣಗಳಾಗುತ್ತವೋ ಮತ್ತು ಆಗಾಗ ಬರಗಾಲ ಬರುತ್ತದೋ ಅಲ್ಲಿ ಗೆದ್ದವನಿಗೂ ಅಪಜಯವಾದಂತೆಯೇ ಸರಿ.

ಅಶೋಕ:— (ಗುಣುಗುಟ್ಟುತ್ತಾನೆ) ಈ ರೀತಿಯಲ್ಲಿ ಜನರ ವಧೆ ಮತ್ತು ಮರಣಗಳಾಗುವಲ್ಲಿ, ದೇಶ ಆಗಾಗ್ಗೆ ಬರಗಾಲವಾಗುವಲ್ಲಿ ವಿಜಯ ಹೊಂದಿದರೂ ಅಪಜಯ ಹೊಂದಿದಂತೆಯೇ ಸರಿ. ಎಲ್ಲರೂ ಈ ರೀತಿಯಲ್ಲಿ ಜನರ ವಧೆ ಮತ್ತು ಮರಣ... (ಒಮ್ಮೆಲೆ) ಭಿಕ್ಷುಣಿ, ನೀನು ಕಳಿಂಗದ ಸಾಮಾನ್ಯ ಸ್ತ್ರೀಯಲ್ಲ. ಯಾರೋ ತತ್ವದರ್ಶಿಯಾಗಿರಬೇಕು ಯಾ ತತ್ವದರ್ಶಿಯ ಪ್ರತಿಯಾಗಿರಬೇಕು. ವಿಜಯ ಪ್ರಾಪ್ತಿ ಮಾಡುವ ಇತರ ಯಾವುದಾದರೂ ಮಾರ್ಗವಿದೆಯೋ? ನನಗೆ ತಿಳಿಸು.

ಕಾರುವಾಕಿ:— ಭಿಕ್ಷುಣಿಯೊಡನೆ ನಾಳೆ ಮಾತಾಡಬಹುದು. ಅವಳನ್ನು ಆದರಪೂರ್ವಕವಾಗಿ ನಾನು ನೋಡಿಕೊಳ್ಳುತ್ತೇನೆ. ನೀವು ಬಹಳ ಸೋತಿರುವಿರಿ, ನಿಮಗೆ ವಿಶ್ರಾಂತಿ ಬಹಳ ಅಗತ್ಯವಿದೆ.

ಅಶೋಕ:— ದೇವೀ ಹೆದರಿದಿಯೇನು? ಅಶೋಕನು ಈ ರೀತಿಯಲ್ಲಿ ವ್ಯತಿಥನಾಗುವವನಲ್ಲ. ಅಲ್ಲದೆ ಭಿಕ್ಷುಣಿಯ ಶಬ್ದಗಳು ಗಾಯಗೊಂಡಿರುವ ನನ್ನ ಮನಸ್ಸಿಗೆ ಅವ್ಯಕ್ತಸೇಚನೆ ಮಾಡುತ್ತಿದೆ. (ಭಿಕ್ಷುಣಿಯೊಡನೆ) ಹಾಂ ದೇವೀ, ವಿಜಯದ ಇನ್ನಾವ ಮಾರ್ಗವಾದರೂ ನಿನಗೆ ತಿಳಿದಿದೆಯೇನು?

ಭಿಕ್ಷುಣಿ:— ಸಾಮ್ರಾಟರು ನನ್ನಲ್ಲಿ ಕೇಳುತ್ತಿದ್ದಾರೇನು?

ಅಶೋಕ:— ಹೌದು, ಏನಾದರೂ ಭಯವಿದೆಯೇ?

ಭಿಕ್ಷುಣಿ:— ಹಾಂ.

ಅಶೋಕ:— ಏನು?

ಭಿಕ್ಷುಣಿ:— ನಾನು ಸಾಮ್ರಾಟನ ಶತ್ರುಪಕ್ಷದವಳು.

ಅಶೋಕ:— ಅಲ್ಲ ದೇವೀ! ನನಗಾವ ಶತ್ರುಪಕ್ಷವೂ ಇಲ್ಲ! ನಾನು ಯುವರಾಜನನ್ನು ಕ್ಷಮಿಸಿದ್ದೇನೆ.

ಭಿಕ್ಷುಣಿ:— ಯುವರಾಜನನ್ನು...?

ಅಶೋಕ:— ಹಾಂ, ಕಳಿಂಗ ಯುವರಾಜನನ್ನು ಕ್ಷಮಿಸಿ, ಅವನ ರಾಜ್ಯ ಅವನಿಗೇ ಕೊಟ್ಟಿದ್ದೇನೆ. ಅವನ ತಂದೆ ಮತ್ತು ಸಂಬಂಧಿಕರು ನನ್ನಿಂದ ಕೊಲ್ಲಲ್ಪಟ್ಟರೆಂಬ ಬಗ್ಗೆ ನನಗೆ ತುಂಬಾ ಖೇದವಾಗಿದೆ. ಅವನ ತಂಗಿಯೊಬ್ಬ ಳಿದ್ದಾಳೆಂಬುದನ್ನು ಕೇಳಿದ್ದೇನೆ. ಅವಳೆಲ್ಲಿರುವಳೆಂಬುದೇ ನನಗೆ ತಿಳಿಯದು, ಮತ್ತು ಆಶ್ಚರ್ಯದ ವಿಷಯವೇಂದರೆ ಅವನ ಮತ್ತು ನಿನ್ನ ಸ್ವರ, ರೂಪ, ವಿಚಾರ, ನಡತೆಗಳು ಬಹುಮಟ್ಟಿಗೆ ಪರಸ್ಪರ ಹೋಲುತ್ತಿವೆ.

ಭಿಕ್ಷುಣಿ:— (ಒಮ್ಮೆಲೆ) ಇದೆಲ್ಲಾ ಸುಯೋಗ ಸಾಮ್ರಾಟ್! ಇಲ್ಲ ದಿದ್ದರೆ ಎಲ್ಲಿ ಕಳಿಂಗ ಯುವರಾಜ ಎಲ್ಲಿ ಕಳಿಂಗದ ಓರ್ವ ಸಾಮಾನ್ಯ ನಾಗರಿಕನ ಪುತ್ರಿ!

ಅಶೋಕ:— ಹಾಗಾದರೆ ಕಳಿಂಗದ ಪ್ರತಿಯೊಂದು ಸಂತಾನವೂ ಭಯಹೀನವಾಗಿದೆ ಎಂಬ ಮಾತು ಗೌರವಯುಕ್ತವಾಗಿದೆ. ಭಯವು ಮನು ಷ್ಯನ ದೊಡ್ಡ ಶತ್ರು. ಯಾರು ಭಯವನ್ನು ಗೆಲ್ಲುತ್ತಾನೋ ಅವನು ಮಹಾನ್ ಆಗುತ್ತಾನೆ. ನೀನು ಮಹಾನಳು, ಯುವರಾಜನು ಮಹಾನ್ ಆಗಿದ್ದಾನೆ. ನಾನು ಮಹಾನತೆಯನ್ನು ಅಪೇಕ್ಷಿಸುತ್ತೇನೆ. ನಾನು ನಿಮ್ಮೆಲ್ಲರ ಮಿತ್ರನಾಗ ಲಿಚ್ಛಿಸುತ್ತೇನೆ. ಆದುದರಿಂದಲೇ ಯುವರಾಜನನ್ನು ಕ್ಷಮಿಸಿದ್ದೇನೆ.

ಭಿಕ್ಷುಣಿ:— ಅದೆಲ್ಲಾ ಸರಿ ಸಾಮ್ರಾಟ್, ಪರಂತು......

ಅಶೋಕ:— ಪರಂತು? ಪರಂತು ಏನು?

ಭಿಕ್ಷುಣಿ:— ಪರಂತು ಸಾಮ್ರಾಟ್, ಯುವರಾಜನು ನಿಮ್ಮ ಕ್ಷಮೆ ಯನ್ನು ಗ್ರಹಣ ಮಾಡಲಾರನು.

ಅಶೋಕ:— ಯುವರಾಜನು ನನ್ನ ಕ್ಷಮೆಯನ್ನು ಗ್ರಹಣಮಾಡಲಾರ?

ಭಿಕ್ಷುಣಿ:— ಹಾಂ ಸಾಮ್ರಾಟ್.

ಅಶೋಕ:— ಆದರೆ ಏಕೆ? ಭಿಕ್ಷುಣಿ, ನೀನು ನಿಜವಾಗಿಯೂ ರಹಸ್ಯಮಯಿಯಾಗಿರುವಿ !ನೀನು ಯಾರು? ಯುವರಾಜನು ಕ್ಷಮಾಗ್ರಹಣ ಮಾಡಲಾರ ಎಂದು ನಿನಗೆ ಹೇಗೆ ತಿಳಿಯಿತು? ಮತ್ತವನು ಏಕೆ ಗ್ರಹಣ ಮಾಡಲಾರ?

ಭಿಕ್ಷುಣಿ:— ಅವನು ವೀರನಾಗಿದ್ದಾನೆ ಸಾಮ್ರಾಟ್. ವೀರಪುರುಷರೆಂದೂ ಯಾರ ಕ್ಷಮೆಯನ್ನೂ ಗ್ರಹಣ ಮಾಡಲಾರರು!

ಅಶೋಕ:— (ಕಂಪಿಸಿ) ವೀರಪುರುಷರು ಯಾರ ಕ್ಷಮೆಯನ್ನೂ ಗ್ರಹಣ ಮಾಡುವುದಿಲ್ಲ! ವೀರಪುರುಷರು ಯಾರ ಕ್ಷಮೆಯನ್ನೂ ಗ್ರಹಣ ಮಾಡುವುದಿಲ್ಲ! ಹೀಗೆಯೇ...ಹೀಗೆಯೇ...ಅವನೂ ಅಂದಿದ್ದ.

ಭಿಕ್ಷುಣಿ:— ಅವನು ನಿಜ ನುಡಿದಿದ್ದ. ಅವನು ಹೇಳಿದ ಮಾತನ್ನು ಪಾಲಿಸುತ್ತಾನೆ. ಅವನು ನಿನ್ನಿಂದ ಕೊಡಲ್ಪಟ್ಟ ಪ್ರಾಣಭಿಕ್ಷೆಯನ್ನು ಸ್ವೀಕರಿಸಲಾರ!

ಅಶೋಕ:— ನನ್ನಿಂದ ಕೊಡಲ್ಪಟ್ಟ ಪ್ರಾಣಭಿಕ್ಷೆಯನ್ನು ತೆಗೆದುಕೊಳ್ಳಲಿಕ್ಕಿಲ್ಲ?

ಭಿಕ್ಷುಣಿ:— ಹಾಂ, ಅವನೆಂದೂ ತೆಗೆದುಕೊಳ್ಳಲಾರ!

ಅಶೋಕ:— (ಒಮ್ಮೆಲೆ) ಹೇಗೆ ತೆಗೆದುಕೊಳ್ಳುವುದಿಲ್ಲ? ನಾನು ಪ್ರಾಣದಂಡನೆಯ ಆಜ್ಞೆಯನ್ನು ಹಿಂತೆಗೆದುಕೊಂಡಿದ್ದೇನೆ. ಅವನು ನನ್ನ ಬಂಧಿ. ನನ್ನಾಜ್ಞೆಯ ವಿನಃ ಯಾರೂ ಅವನ ಕೂದಲೂ ಕೊಂಕಿಸಲೂ ಸಾಧ್ಯವಿಲ್ಲ. ನಾನು ಸಾಮ್ರಾಟನಾಗಿದ್ದೇನೆ.

ಭಿಕ್ಷುಣಿ:— (ನಕ್ಕು) ಸಾಮ್ರಾಟನಿಗೆ ತನ್ನಾಜ್ಞೆಯಲ್ಲಿ ಬಹಳ ಅಭಿಮಾನವಿದೆ. ಆದರೆ ಕುಮಾರನು ನಿಮ್ಮ ಆಜ್ಞೆಯ ಸೀಮೆಯಿಂದ ಬಹುದೂರ ವಿದ್ದಾನೆ ಸಾಮ್ರಾಟ್!

ಅಶೋಕ:— (ಕ್ರೋಧ) ಇಷ್ಟು ದೃಢ ವಿಶ್ವಾಸ! ನೋಡುತ್ತೇವೆ ಅವನನ್ನಾರು ಕೊಲ್ಲುತ್ತಾರೆಂದು?

ಭಿಕ್ಷುಣಿ:— ಕಳಿಂಗದ ರಕ್ತಯಜ್ಞ ಇನ್ನೂ ಪೂರ್ಣವಾಗಿಲ್ಲ ಸಾಮ್ರಾಟ್! ಕುಮಾರನನ್ನು ಅವನ ಕರ್ತವ್ಯವೇ ಕೊಲ್ಲುತ್ತದೆ. 'ಮಹತಿನಿಶಾ ಆನಿ' ಇನ್ನೂ ಶೇಷವಿದೆ. ಹಲವಾರು ಹೃದಯಗಳಿನ್ನೂ ಬಿರಿಯಲಿವೆ. ನಿಮ್ಮ

ಪರಾಜಯುವನ್ನು ನೀವೇ ಕಣ್ಣಾರೆ ಕಾಣುವುದು ಬಾಕಿಯಿದೆ. ಯುವರಾಜನ ಬಲಿದಾನವಿನ್ನೂ ಶೇಷವಿದೆ.

[ಆವೇಶ ಮತ್ತು ದೃಢತೆಯ ಈ ಭವಿಷ್ಯ ವಾಣಿಯನ್ನು ಕೇಳಿ ಸಾಮ್ರಾಟ ಮತ್ತು ರಾಣಿ ಕಂಪಿಸುತ್ತಾರೆ. ಕೂಡಲೇ ರಾಣಿ ಮುಂದೆ ಬರುತ್ತಾಳೆ]

ಕಾರುವಾಕಿ:— ನಿಜ ಹೇಳು ಭಿಕ್ಷುಣಿ ನೀನು ಯಾರು? ನೀನು ಇನ್ನೂ ಮೋಸ ಮಾಡಲಾರೆ. ನೀನೋರ್ವ ಸಾಧಾರಣ ನಾಗರಿಕನ ಕನ್ಯೆ ಯಲ್ಲ. ನೀನಿವತ್ತು ಭಿಕ್ಷುಣಿಯಾಗಿರಬಹುದು, ಆದರೆ ನಿನ್ನೆ......

ಭಿಕ್ಷುಣಿ:— (ಒಮ್ಮೆಲೆ) ನಿಸ್ಸಂದೇಹವಾಗಿ ನಿನ್ನೆ ನಾನು ಭಿಕ್ಷುಣಿ ಯಾಗಿದ್ದಿಲ್ಲ!

ಅಶೋಕ:— ನಿನ್ನೆ ನೀನು ಭಿಕ್ಷುಣಿಯಾಗಿದ್ದಿಲ್ಲ. (ಸ್ವಲ್ಪ ಆಲೋಚಿಸಿ) ನಿನ್ನೆ ನೀನು ಭಿಕ್ಷುಣಿಯಾಗಿದ್ದಿಲ್ಲ. ನನ್ನ ಅನುಮಾನವೇ ಸರಿ! ನೀನು...... ನೀನು ಕಳಿಂಗ ರಾಜಕುಮಾರಿಯಲ್ಲವೇನು?

ಭಿಕ್ಷುಣಿ:— ನಿಜ ಸಾಮ್ರಾಟ್. ನಿಮ್ಮ ಅನುಮಾನವೇ ಸರಿ. ನಾನೇ ಕಳಿಂಗ ರಾಜಕುಮಾರಿ.

ಅಶೋಕ:— ಕಳಿಂಗದ ರಾಜಕುಮಾರಿ! ಯುವರಾಜನ ತಂಗಿ!

ಕಾರುವಾಕಿ:— ಕಳಿಂಗದ ರಾಜಕುಮಾರಿ! ನೀನು ಕಳಿಂಗದ ರಾಜ ಕುಮಾರಿಯಾದರೂ ಈ ವೇಷದಲ್ಲಿ! (ಓಡಿಬಂದು ಎದೆಗಪ್ಪಿಕೊಳ್ಳುತ್ತಾಳೆ) ರಾಜಕುಮಾರೀ......

ಅಶೋಕ:— ರಾಜಕುಮಾರೀ......ರಾಜಕುಮಾರೀ... (ಎರಡೂ ಕೈಗಳಿಂದ ಮುಖಮುಚ್ಚಿ) ರಾಜಕುಮಾರೀ ನಾನು ನಿನ್ನ ತಂದೆಯ ಕೊಲೆ ಗಾರ. ನಾನೇ ನಿನ್ನ ದೇಶವನ್ನು ಹಾಡುಗೆಡಹಿದವ.

ಭಿಕ್ಷುಣಿ:— (ಗಂಭೀರ ಸ್ವರ) ಹಾಂ ಸಾಮ್ರಾಟ್! ನೀನು ನನ್ನ ತಂದೆಯ ಕೊಲೆಗಾರ. ನನ್ನ ದೇಶವನ್ನೂ ಹಾಳುಗೆಡಹಿದವ. ನಾನೂ ನಿನ್ನ ಹತ್ಯೆಗಾಗಿ ಮನೆಯಿಂದ ಹೊರಬಿದ್ದೆ. ನಿನ್ನ ನಾಶ ಮಾಡಲಿಕ್ಕಾಗಿಯೇ ಈ ವಸ್ತ್ರ ಧರಿಸಿದೆ. ಆದರೆ......ಆದರೆ......

ಕಾರುವಾಕಿ:— ನೀನು ಕೊಲ್ಲಲುಬಂದಿದ್ದಿಯೇನು? ಹತ್ಯೆಮಾಡಲು...

ಅಶೋಕ:— ನೀನು ನನ್ನ ನಾಶ ಮಾಡಲು ಹೊರಟಿದ್ದೆ. ಆದರೆ...

ಆದರೆ ಏನಾಯ್ತು? ನೀನು ನನ್ನ ನಾಶದ ಕಾರ್ಯವನ್ನೇಕೆ ಬಿಟ್ಟುಬಿಟ್ಟೆ?

ಭಿಕ್ಷುಣಿ:— ಬಿಡಲೇಬೇಕಾಯ್ತು.

ಅಶೋಕ:— ಬಿಡಲೇಬೇಕಾಯ್ತು ಏಕೆ?

ಭಿಕ್ಷುಣಿ:— ಸಾಮ್ರಾಟ್, ನಾನು ಭಿಕ್ಷುರಾಜನಿಂದ ಪ್ರಾವ್ರಜ್ಯ ಗ್ರಹಣ ಮಾಡಿ ತಥಾಗಥದ ಪವಿತ್ರ ಮಂತ್ರ ಓದಿದ ನಂತರ...

ಕಾರುವಾಕಿ:— ಓದಿದ ನಂತರ...

ಅಶೋಕ:— (ಮಂತ್ರಮುಗ್ಧನಂತೆ) ನಂತರ... ನಂತರ ಏನಾಯ್ತು ರಾಜಕುಮಾರೀ?

ಭಿಕ್ಷುಣಿ:— ನನ್ನ ಮನಸ್ಸಿನ ಎಲ್ಲಾ ಕಲ್ಮಶಗಳು ತೊಳೆಯಲ್ಪಟ್ಟುವು. ಶಸ್ತ್ರದ ಪ್ರತಿಶೋಧದ ಬಗ್ಗೆ ನನಗೆ ತಿರಸ್ಕಾರವುಂಟಾಯ್ತು. ಆಗ ನಾನು ಎಲ್ಲಾ ವಿಷಯಗಳನ್ನೂ ಅವರಿಗೆ ತಿಳಿಸಿ, ಪ್ರತಿಶೋಧ ತೆಗೆದುಕೊಳ್ಳಲು ಬೇರಾವ ಮಾರ್ಗವಾದರೂ ಇದೆಯೇ ಎಂದು ಭಿಕ್ಷುರಾಜರಲ್ಲಿ ವಿಚಾರಿಸಿದೆ.

ಅಶೋಕ:— ಆಗ ಅವರೇನೆಂದರು?

ಭಿಕ್ಷುಣಿ:— ಬುದ್ಧಮಾರ್ಗದಲ್ಲಿ ಪ್ರತಿಶೋಧದ ಭಾವನೆಯ ತ್ಯಾಗವೇ ನಿಜವಾದ ಪ್ರತಿಶೋಧ ಎಂದರವರು.

ಅಶೋಕ:— ಓಹ್ ಅವರೂ ನನಗೂ ಹಾಗೇ ಹೇಳಿದರು.

[ರಾಧಾಗುಪ್ತನ ಪ್ರವೇಶ]

ರಾಧಾಗುಪ್ತ:— ಸಾಮ್ರಾಟರಿಗೆ ಜಯವಾಗಲಿ! ರಾಜಕುಮಾರಿ ಸಂಘಮಿತ್ರಾ ಬಹಳ ಸಮಯದಿಂದ ಕಳಿಂಗ ಕುಮಾರನೊಂದಿಗಿದ್ದಾಳೆ. ಉಪಗುಪ್ತ, ಮಹೇಂದ್ರರೂ ಅಲ್ಲಿಗೆ ಹೋಗಿ ಮುಟ್ಟಿರಬಹುದು. ತಾವೂ...

ಅಶೋಕ:— ಹಾಂ, ಹಾಂ ನಾನೂ ಬರುತ್ತೇನೆ. ಮಹಾಮಾತ್ಯಾ! ಇವಳನ್ನು ನೋಡು. ಇವಳು ಕಳಿಂಗದ ರಾಜಕುಮಾರಿ. ಇವಳು ನನ್ನ ವಧೆಗೋಸ್ಕರ ಭಿಕ್ಷುಣಿಯಾದಳು. ಮತ್ತು ಇವಳಿಗೆ ಬಹುಶಃ ಬಹಳಷ್ಟು ಸಫಲತೆಯೂ ಪ್ರಾಪ್ತವಾಯ್ತು.

ರಾಧಾಗುಪ್ತ:— (ಚಕಿತನಾಗಿ) ಏನು... ಏನು ಸಾಮ್ರಾಟ್? (ಒರೆಯಿಂದ ಕತ್ತಿ ಎಳೆಯುತ್ತಾನೆ) ಯಾರವನು ಸಾಮ್ರಾಟನ ವಧೆ ಮಾಡುವಷ್ಟು ಬಿಸಿರಕ್ತದವನು?

ಅಶೋಕ:— (ಮುಗುಳ್ನಕ್ಕು) ಯಾರೂ ಇಲ್ಲ...ಯಾರೂ ಇಲ್ಲ ಮಹಾಮಾತ್ಯಾ! ವಿಷ್ಣುಗುಪ್ತ ಚಾಣಕ್ಯನ ಶಿಷ್ಯನಿಗೆ ಈ ರೀತಿಯಲ್ಲಿ ಭಯ ಪಡುವುದು ಶೋಭಿಸುವುದಿಲ್ಲ. ರಾಜಕುಮಾರಿಗೆ ಮಾನವರ ವಧೆಯನ್ನು ನವ್ಯರೀತಿಯಿಂದ ಮಾಡುವ ಕಲೆ ಸಾಧಿಸಿದೆ. ಈ ರೀತಿಯಲ್ಲಿ ಮಾನವನು ಸಾಯುತ್ತಾನೆ, ಆದರೆ ಪ್ರಾಣ ಹೋಗುವುದಿಲ್ಲ. ಬಹುಶಃ ನಿನಗೆ ವಿಶ್ವಾಸ ವಾಗಲಿಕ್ಕಿಲ್ಲ, ನಿನಗೂ ವಿಶ್ವಾಸ ಬಂದುಬಿಡಬಹುದು. ಈಗ ನಾವು ಹೋಗುವ ಬಾ ರಾಜಕುಮಾರಿ. ನೀನೂ ಬಾ ಕಾರುವಾಕಿ. ಅರುಣೋದಯವಾಗಲಿದೆ. ಇಂದಿನ **'ನವ-ಪ್ರಭಾತ'**ವು ಬಂಧೀಗೃಹದಲ್ಲೇ ಆಗಲಿ.

[ಸಾಮ್ರಾಟನು ತೀವ್ರತೆಯಿಂದ ರಂಗಮಂಚದಿಂದ ಹೊರಟುಹೋಗುತ್ತಾನೆ. ರಾಜಕುಮಾರಿಯೊಡನೆ ಕಾರುವಾಕಿಯು ದೃಢತೆಯಿಂದ ಅದೇ ಕಡೆ ಸಾಗುತ್ತಾಳೆ. ರಾಧಾಗುಪ್ತ ಎಲ್ಲರ ನಂತರ ಏನೋ ಕಳಕೊಂಡವನಂತೆ ಖಿನ್ನನಾಗಿ ಹೋಗುತ್ತಾನೆ]

ರಾಧಾಗುಪ್ತ:— ಇದೆಲ್ಲಾ ಏನು ನಡೆಯುತ್ತಿದೆ ಎಂದೇ ತಿಳಿಯುವುದಿಲ್ಲ! ಎಲ್ಲವೂ ವಿಚಿತ್ರ, ಎಲ್ಲವೂ ಅವಿಶ್ವಾಸನೀಯ ಹಾಗೂ ಅದ್ಭುತಗಳಾಗಿವೆ!.........

[ಅವನೂ ಹೊರಟುಹೋಗುತ್ತಾನೆ]

[ಪರದೆ ಬೀಳುತ್ತದೆ]

೩

ತೃತೀಯ ಅಂಕ

[ರಂಗಮಂಚದಲ್ಲಿ ರಾತ್ರಿಯ ಭಯಂಕರ ಅಂಧಕಾರ ತುಂಬಿದೆ. ಆಗಾಗ್ಗೆ ಚೌಕಿದಾರನ ಪಾದ ಶಬ್ದ ಕೇಳಿಸುತ್ತದೆ. ರಂಗಭೂಮಿಯ ಒಂದು ಬದಿಗೆ ಒಂದು ಮುದಿ ದೀಪವು ಉರಿಯುತ್ತಿದೆ. ಸ್ವಲ್ಪ ಸಮಯಾನಂತರ ಅಲ್ಲಿ ಒಂದು ನೆರಳು ಗೋಚರಿಸುತ್ತದೆ. ಅದು ಶಿಲೆಯ ಮೇಲೆ ಕುಳಿತು ಆಳವಾದ ಯೋಚನೆಯಲ್ಲಿ ನಿಮಗ್ನನಾದಂತೆ ಕಂಡುಬರುತ್ತದೆ. ಅವನ ನೆರಳು ಓರ್ವ ಕುಶಲ ಚಿತ್ರಕಾರನಿಂದ ಬಿಡಿಸಲ್ಪಟ್ಟ ನಿಶ್ವಾಸ ಚಿತ್ರದಂತೆ ಭಾಸವಾಗುತ್ತದೆ. ಆ ಯುವಕನೇ ಕಳಿಂಗದ ರಾಜಕುಮಾರ, ಅಶೋಕನ ಆಜ್ಞೆಯಿಂದ ಬಂಧಿಸಲ್ಪಟ್ಟು, ಮೃತ್ಯುವನ್ನೆದುರು ನೋಡುತ್ತಿದ್ದಾನೆ. ಅದೇ ಸಮಯದಲ್ಲಿ ಅಲ್ಲಿಗೆ ರಾಜ ಸಹೋದರಿ ಸಂಘಮಿತ್ರಾ ಮತ್ತು ಚಂಡಾಗಿರ (ಚಂಡಾಲ)ರು ಆಗಮಿಸುತ್ತಾರೆ. ರಾಜಕುಮಾರಿ ಸಂಘಮಿತ್ರಾಳು ಅಡಿಯಿಂದ ಮುಡಿಯ ವರೆಗೂ ಕಪ್ಪು ವಸ್ತ್ರ ಉಟ್ಟಿದ್ದಾಳೆ. ಅವಳ ಚಲನೆ ಸ್ಥಿರವಿದೆ. ಕಣ್ಣುಗಳು ಕೋರೈಸುತ್ತಿವೆ. ಚಂಡಾಗಿರನ ವಿಶಾಲ ಎದೆ, ದೊಡ್ಡ ಮೀಸೆ, ಕರಾಳ ಮುಖ, ಕೈಯಲ್ಲಿರುವ ಹಿರಿದಾದ ಕತ್ತಿ ಎಲ್ಲವೂ ಭಯೋತ್ಪಕವಾಗಿದೆ. ಇಬ್ಬರೂ ರಂಗಭೂಮಿಯ ದ್ವಾರದಲ್ಲಿ ಬಂದು ನಿಲ್ಲುತ್ತಾರೆ. ಸಂಘಮಿತ್ರಾಳು ಚಂಡಾಗಿರನೊಡನೆ]

ಸಂಘಮಿತ್ರಾ:— ನೀನು ಹೊರಗೆ ನಿಲ್ಲು ಚಂಡಾಗಿರ. ನನಗೆ ಏಕಾಂತದ ಅವಶ್ಯಕತೆ ಇದೆ.

ಚಂಡಾಗಿರ:— ಆದರೆ ದೇವೀ, ಸಾಮ್ರಾಟರ ಆಜ್ಞೆ......

ಸಂಘಮಿತ್ರಾ:— ಸಾಮ್ರಾಟರ ಆಜ್ಞೆ ನನಗೆ ತಿಳಿದಿದೆ ಚಂಡಾಗಿರ. ನಿನ್ನಲ್ಲೂ ವಿಶ್ವಾಸವಿದೆ. ಕುಮಾರನು ಕ್ಷಮೆ ಕೇಳಿದರೆ ಸಾಮ್ರಾಟನು ಅವನನ್ನು ಸ್ವತಂತ್ರನನ್ನಾಗಿ ಮಾಡುತ್ತಾನೆ. ನಾನವನನ್ನು.........

ಚಂಡಾಗಿರ:— ಅದೆಲ್ಲಾ ಸರಿ ದೇವೀ, ಆದರೆ ನನ್ನ ಕರ್ತವ್ಯ......

ಸಂಘಮಿತ್ರಾ:— (ವಿನಯದಿಂದ) ಚಂಡಾಗಿರ, ನನಗೆ ಕುಮಾರನಲ್ಲಿ ತುಂಬಾ ಅವಶ್ಯಕವಾಗಿ ಮಾತಾಡಲಿದೆ. ಭಿಕ್ಷು ಉಪಗುಪ್ತ ಬರುವ ಮೊದಲು ನಾನು ನನ್ನ ಕೆಲಸ ಮುಗಿಸಲಿಚ್ಛಿಸುತ್ತೇನೆ.

ಚಂಡಾಗಿರ:— (ಚಕಿತನಾಗಿ) ಭಿಕ್ಷು ಉಪಗುಪ್ತರು ಇಲ್ಲಿಗೆ ಬರುವರೇನು?

ಸಂಘಮಿತ್ರಾ:— ಹಾಂ ಚಂಡಾಗಿರ. ಅವರು ಸಾಮ್ರಾಟನಿಂದ ಅಪ್ಪಣೆ ತೆಗೆದುಕೊಳ್ಳಲು ಹೋಗಿದ್ದಾರೆ.

ಚಂಡಾಗಿರ:— ಸಾಮ್ರಾಟರು ಓರ್ವ ಬಿಕ್ಷುವಿಗೆ ಆಜ್ಞೆ ಕೊಡುವರೇನು? ಅಸಂಭವ, ಇದು ಅಸಂಭವ!

ಸಂಘಮಿತ್ರಾ:— ಅಸಂಭವವಲ್ಲ ಚಂಡಾಗಿರ, ಪೂರ್ಣ ಸಂಭವ. ಅವರಿಗೆ ಅಪ್ಪಣೆ ಸಿಕ್ಕೇ ಸಿಗುತ್ತದೆ. ಸಾಮ್ರಾಟರಿಂದ ಅಸಾಧ್ಯವಾದ ಕೆಲಸವನ್ನು ಒಬ್ಬ ಭಿಕ್ಷು ಮಾಡಿ ತೋರಿಸುತ್ತಾರೆ. ನೀನು ಹೋಗಿ ಅವರನ್ನು ಸ್ವಾಗತಿಸು.

[ಚಂಡಾಗಿರನು ಕೂಡಲೇ ಉತ್ತರಕೊಡದೆ ಶೂನ್ಯದೃಷ್ಟಿಯಿಂದ ನೋಡುತ್ತಾನೆ]

ಸಂಘಮಿತ್ರಾ:— (ವಿನಮ್ರ ಸ್ವರ) ಹೋಗು ಚಂಡಾಗಿರ!

ಚಂಡಾಗಿರ:— (ಒಮ್ಮೆಲೆ) ಹೋಗಲೇ! ಸರಿ ಹೋಗುತ್ತೇನೆ. ಆದರೆ ರಾಜಕುಮಾರೀ ದಂಡವಂತೂ ಸ್ಥಿರ.

ಸಂಘಮಿತ್ರಾ:— ಸಾಮ್ರಾಟನ ಮತ್ತೊಂದು ಆಜ್ಞೆ ಬರುವ ವರೆಗೆ ಅದು ಸ್ಥಿರ!

ಚಂಡಾಗಿರ:— ಒಳ್ಳೆದು ದೇವೀ, ನಾನು ಹೊರಗೆ ನಿಲ್ಲುತ್ತೇನೆ. ನೆನಪಿಡಿ, ಉಷಾಕಾಲದ ಸೂರ್ಯನ ಪ್ರಥಮ ರಶ್ಮಿಯು ಹುಟ್ಟುವ ಮೊದಲು ತಾವು ಬಂಧೀಗೃಹದಿಂದ ಹೊರಟುಹೋಗಬೇಕು.

ಸಂಘಮಿತ್ರಾ:— ತಿಳಿದಿರುವೆ.

[ಚಂಡಾಗಿರನು ಹೋಗುತ್ತಾನೆ. ಅವನ ಹೋಗುವಿಕೆಯನ್ನು ಸಂಘಮಿತ್ರಾ, ಅಲ್ಲಿಯೇ ನಿಂತು ನೋಡುತ್ತಾಳೆ. ನಂತರ ರಾಜಕುಮಾನತ್ತ ತಿರುಗುತ್ತಾಳೆ. ಆದರೆ ಮುಂದುವರಿಯುವುದಿಲ್ಲ. ಅಲ್ಲಿಯೇ ನಿಂತು ದೀರ್ಘ ಉಚ್ಛ್ವಾಸ ಬಿಡುತ್ತಾಳೆ]

ಸಂಘಮಿತ್ರಾ:— (ಒಂದು ದೀರ್ಘ ಉಚ್ಛ್ವಾಸ-ಸ್ವಗತ) ಇದೆಲ್ಲಾ ಏನು? ಇದೆಂಥಾ ಆಕರ್ಷಣೆ? ಹೃದಯವೇಕೆ ಈ ರೀತಿ ಬಡಿದುಕೊಳ್ಳುತ್ತಿದೆ? ಈ ಸ್ಪಂದನದ ಅರ್ಥವೇನು? (ಉಚ್ಛ್ವಾಸಿತ ಸ್ವರ) ಇದು ಪ್ರೇಮವೇನು?

(ಕಿಂಚಿತ್ ಉಚ್ಚಸ್ವರ) ನಾನು ನಿಜವಾಗಿಯೂ ರಾಜಕುಮಾರನನ್ನು ಪ್ರೀತಿ ಸುತ್ತೇನೇನು? ನಾನವನನ್ನು ನಿಜವಾಗಿಯೂ ಶಿಕ್ಷೆಯಿಂದ ತಪ್ಪಿಸಲಪೇಕ್ಷಿ ಸುತ್ತೇನೇನು? ಶಿಕ್ಷೆಯಿಂದ ತಪ್ಪಿಸುವುದು ಸರಿಯೇನು? ಅವನು...ಶತ್ರು! ಹಾಂ ಅವನು ಶತ್ರು. ಆದರೂ ನಾನವನನ್ನು ಪ್ರೇಮಿಸುತ್ತಿದ್ದೇನೆ. ನನ್ನ ದೇಶದ ಶತ್ರು ನನ್ನ ಹೃದಯದ ಸಿಂಹಾಸನವನ್ನು ಆಕ್ರಮಿಸಿದ್ದಾನೆ! ಓಹ್... ಆದರೆ...ಆದರೆ ಶತ್ರುವಾದರೇನಾಯ್ತು? ಅವನು ವೀರ, ಸಿರ್ಭೀತ ಸುಂದರ ನಾಗಿದ್ದಾನೆ. ಆ ದಿವಸ ಅವನ ಹಸ್ತಿಯು ಮಗಧ ಸೇನೆಯಲ್ಲಿ ನುಗ್ಗಿ ನುಚ್ಚು ನೂರು ಮಾಡಿ, ಹಾಹಾಕಾರವನ್ನೆಬ್ಬಿಸಿತ್ತು! ಹಲವಾರು ಸಲ ಅಸಂಖ್ಯಾತ ಸೈನಿಕರು ಅವನನ್ನು ಮುತ್ತಿಗೆ ಹಾಕಲು ಪ್ರಯತ್ನಿಸಿದರು. ಆದರೆ ಅದರ ಛತ್ರಧಾರೀ ಆರೋಹಿಯು ತನ್ನ ಶರವೃಷ್ಟಿಯಿಂದ ಇತರರ ಶೌರ್ಯವನ್ನೇ ಕುಂಠಿತವನ್ನಾಗಿ ಮಾಡಿದನು. ಆ ಸಮಯದಲ್ಲವನು ದೇವಸೇನಾಪತಿ ಕುಮಾರ ಕಾರ್ತಿಕೇಯನೇ ಯುದ್ಧ ಮಾಡುತ್ತಿರುವಂತೆ ಕಾಣುತ್ತಿತ್ತು. ಸ್ವಯಂ ಸಾಮ್ರಾಟರೇ ಒಂದು ದಿವಸ ಅವನ ಪರಾಕ್ರಮವನ್ನು ಪ್ರಶಂಸಿ ಸಿದ್ದರು. ಅವರಿಂದು ಸಹ ಅವನ ಮೇಲೆ ಎಷ್ಟು ಕಠೋರವಾಗಿ ಕಾಣು ತ್ತಾರೋ ಒಳಗೆ ಅಷ್ಟೇ ತೃಸ್ತರಾಗಿದ್ದಾರೆ. ಅವರು ನನ್ನಲ್ಲಿ ಸ್ವತಃ ವಿಚಾರಿಸಿ ದರು ಶಸ್ತ್ರದ ವಿನಃ ಮಾನವನ ವಧೆ ಮಾಡುವ ರೀತಿ ಇನ್ಯಾವುದಾದರೂ ಇದೆಯೇ ಎಂದು. ಇದು ಅವರ ಮನಸ್ಸಿನ ಡೋಲಾಯಮಾನ ಸ್ಥಿತಿಯ ನ್ನಷ್ಟು ತೋರಿಸುವುದಲ್ಲದೆ ಅವರ ಅಂತರ್ಮನ ಕುಮಾರನನ್ನು ಕ್ಷಮಿಸುವ ಮಾರ್ಗವನ್ನವರು ಹುಡುಕುತ್ತಿದ್ದಾರೆ ಎಂಬ ಮಾತನ್ನು ನಿರ್ವಿವಾದವಾಗಿ ತೋರಿಸುತ್ತಿದೆ. ನಾನು ಅದೇ ಮಾರ್ಗವನ್ನು ತೋರಿಸಿ ಸಾಮ್ರಾಟನ ಮನ ಶ್ಶಾಂತಿ ಮಾಡುವುದಲ್ಲದೆ, ಕುಮಾರನನ್ನು ರಕ್ಷಿಸುತ್ತೇನೆ. ಆದರೆ...ಆದರೆ... ಕುಮಾರ...ಇಲ್ಲ, ಇಲ್ಲ ನಾನೀ ವಿಷಯದಲ್ಲೇನೂ ಈಗ ಯೋಚಿಸಲಾರೆ. ಸಮಯ ಬಹಳ ಕಡಿಮೆಯಿದೆ ಮತ್ತು ಕುಮಾರನನ್ನು ಕ್ಷಮಾಗ್ರಹಣ ಮಾಡ ಲಿಕ್ಕಾಗಿ ಒಪ್ಪಿಸಬೇಕಾಗಿದೆ.

[ಅವಳು ಶೀಘ್ರತೆಯಿಂದ ಕುಮಾರನತ್ತ ಹೋಗುತ್ತಾಳೆ. ಮಂದವಾಗಿ ಉರಿ ಯುತ್ತಿರುವ ನಂದಾದೀಪದ ಎದುರಿನಲ್ಲಿ ಕುಮಾರನು ವಿಚಾರಮಗ್ನನಾಗಿ ಕುಳಿತಿದ್ದಾನೆ. ಯಾರೋ ಬರುವ ಸಪ್ಪಳ ಕೇಳಿ ಅವನು ಬೆಚ್ಚಿಬೀಳುತ್ತಾನೆ]

ಕುಮಾರ:— ಯಾರು? ಚಂಡಾಗಿರ? ಏನು ಸಮಯವಾಯ್ತೇನು?

ಸಂಘಮಿತ್ರಾ:— (ಮೌನ)

ಕುಮಾರ:— ನೀನೇಕೆ ಮಾತಾಡುವುದಿಲ್ಲ? ಯಾರದು? (ಎದ್ದು ರಾಜಕುಮಾರಿಯನ್ನು ಕಂಡು ಯಾರೋ ಸ್ತ್ರೀಯೆಂದು ಭಾವಿಸಿ ಸ್ತಂಭಿತ ನಾಗುತ್ತಾನೆ) ಯಾರೋ ಸ್ತ್ರೀ! ಈ ಸಮಯದಲ್ಲಿ! ಇಲ್ಲಿ! ತಾವು ಯಾರು?

ಸಂಘಮಿತ್ರಾ:— (ಮೌನ)

ಕುಮಾರ:— ತಾವೇಕೆ ಮಾತಾಡುವುದಿಲ್ಲ? (ಹತ್ತಿರ ಬಂದು ನೆಟ್ಟ ದೃಷ್ಟಿಯಿಂದ ರಾಜಕುಮಾರಿಯನ್ನು ಕಂಡು ಕಂಪಿಸುತ್ತಾನೆ) ನೀವು ರಾಜ ಕುಮಾರಿ ಸಂಘಮಿತ್ರಾ? ತಾವೀಗ ಇಲ್ಲಿ? ಹೂಂ ತಿಳಿಯಿತು.

ಸಂಘಮಿತ್ರಾ:— (ಮೌನ)

ಕುಮಾರ:— ಹೇಗೂ ಬಂದಿರುವಿ ಮತ್ತು ಮಾತಾಡುವುದಿಲ್ಲವೇಕೆ?

ಸಂಘಮಿತ್ರಾ:— (ಪೂರ್ವತಃ ಮೌನ)

ಕುಮಾರ:— ಬಹುಶಃ ಬಂಧಿಯಿಂದ ಏನೋ ತಪ್ಪಾಗಿರಬೇಕು. ಓಹ್ ತಿಳಿಯಿತು, ದೇವಿಗೆ ಪ್ರಣಾಮ ಮಾಡಲು ಮರೆತೇಹೋಗಿತ್ತು. ಸರಿ, ಬಂಧಿ ಕಳಿಂಗ ಕುಮಾರನು ರಾಜಕುಮಾರಿ ದೇವೀ ಸಂಘಮಿತ್ರಾಳಿಗೆ ಪ್ರಣಾಮ ಮಾಡುತ್ತಿದ್ದೇನೆ. (ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸು ತ್ತಾನೆ) ಬನ್ನಿ ಬನ್ನಿ, ಬಂಧೀಗೃಹಕ್ಕೆ ಹೇಗೆ ಬರೋಣವಾಯ್ತು? ಅಣ್ಣನಿಂದ ಯುದ್ಧಭೂಮಿಯಲ್ಲಿ ಮಾಡಲಾಗದುದನ್ನು ತಂಗಿ ಕಾರಾಗೃಹದಲ್ಲಿ ಮಾಡ ಲಪೇಕ್ಷಿಸಿ ಬರೋಣವಾಯ್ತೇನು?

ಸಂಘಮಿತ್ರಾ:— (ಮೆಲ್ಲನೆ ಸ್ವಲ್ಪ ಮುಂದುವರಿದು) ಕುಮಾರನು ನನ್ನನ್ನು ಮರೆತಿಲ್ಲ ಎಂದು ನಾನು ತುಂಬಾ ಸಂತೋಷಿಸುತ್ತೇನೆ.

ಕುಮಾರ:— (ನಕ್ಕು) ದೇವೀ, ತನ್ನ ಶತ್ರುಗಳನ್ನು ಮರೆಯುವಷ್ಟು ಕಳಿಂಗ ಕುಮಾರನ ಸ್ಮೃತಿ ಕುಂಠಿತವಾಗಿಲ್ಲ!

ಸಂಘಮಿತ್ರಾ:—(ನಡುಗುತ್ತಾಳೆ) ಶತ್ರು! ನಾನು ನಿಮ್ಮ ಶತ್ರುವೇನು?

ಕುಮಾರ:— ಕಳಿಂಗದ ಪವಿತ್ರಭೂಮಿಯನ್ನೂ, ಕಳಿಂಗಪುತ್ರರನ್ನೂ, ರಕ್ತಪ್ಲವಿತ ಮಾಡಿದ ಅತ್ಯಾಚಾರಿ ಚಂಡಾಶೋಕನ ತಂಗಿ ಶತ್ರುವಾಗದೆ ಇನ್ನೇನಾದಾಳು?

ಸಂಘಮಿತ್ರಾ:— (ದೃಢ ಸ್ವರ) ಆಗಲೂ ಬಹುದು.

ಕುಮಾರ:— (ಚಕಿತನಾಗಿ) ಆಗಲೂ ಬಹುದು?

ಸಂಘಮಿತ್ರಾ:— ಹಾಂ.

ಕುಮಾರ:— ದೇವೀ ಬಹುಶಃ ಹಿಂದಿನ ಮಾತುಗಳನ್ನು ನೆನೆಯುತ್ತಿದ್ದಾಳೆ.

ಸಂಘಮಿತ್ರಾ:— ಮಾತುಗಳು ಎಂದೂ ಹಿಂದಿನದಾಗುವುದಿಲ್ಲ ಕುಮಾರ್! ಸ್ಮೃತಿಯು ಅದನ್ನು ಯಾವಾಗಲೂ ಹೊಸದಾಗಿರಿಸುತ್ತದೆ.

ಕುಮಾರ:— ಆದರೆ ಮಾತು ಹಳೆಯದಾಗಿರದ್ದಾಗ್ಯೂ ಅದರ ಪ್ರಭಾವ ಬದಲಾಗುತ್ತದೆ ದೇವೀ!

ಸಂಘಮಿತ್ರಾ:— ಇಲ್ಲ ಕುಮಾರಾ, ಅದರ ಪ್ರಭಾವ ಬದಲಾಗುವುದಿಲ್ಲ. ಆದರೆ ಬೇರೊಂದು ಅಧಿಕ ಶಕ್ತಿಶಾಲೀ ಪ್ರಭಾವದಿಂದ ಅಡಗಿ ಕುಳಿತುಕೊಳ್ಳುತ್ತದೆ ಅಷ್ಟೆ.

ಕುಮಾರ:— (ನಕ್ಕು) ಶಬ್ದಗಳ ಈ ಮಾಯಾಜಾಲ ನಾರಿಯರಿಗೇ ಶೋಭೆಯಿಾಯುತ್ತವೆ ರಾಜಕುಮಾರೀ!

ಸಂಘಮಿತ್ರಾ:— (ಹತ್ತಿರ ಬಂದು) ಶಬ್ದಗಳ ಮಾಯಾಜಾಲ! ಕುಮಾರ! ಶಬ್ದಗಳ ಮಾಯಾಜಾಲವು ಭಾವನೆಯ ಭಿತ್ತಿಯಲ್ಲಿ ಮೊದಲು ಉಂಟಾಗುತ್ತದೆ. ಸ್ವಲ್ಪ ಸಮಯದ ಹಿಂದೆ ಸ್ವತಃ ನೀನೇ ಸಾಮ್ರಾಟನಿಗೆ 'ಹೂಂ ಇದೇ ನಿನ್ನ ವೀರತೆಯೇನು? ಇದೇ ನಿನ್ನ ಶೌರ್ಯವೇನು? ಈ ಬಲದಿಂದಲ್ಲವೇ ನೀನು ಸಾಮ್ರಾಟನಾದುದು? ಓರ್ವ ಕೈದಿಯ ತಲೆ ತಗ್ಗಿಸಲು ನಿನ್ನಿಂದಾಗಲಿಲ್ಲ. ತಲೆಬುರುಡೆ ಉರುಳಿಸಲು ಸ್ಮಶಾನದಲ್ಲಿ ಹದ್ದುಗಳೂ ತಿರುಗುತ್ತಿವೆ. ಆದರೆ ಅದು ವೀರಪುರುಷರ ಲಕ್ಷಣವಲ್ಲ' ಎಂದಿದ್ದೆ! ಈ ಸುಂದರ ಶಬ್ದಜಾಲದ ಹಿಂದೆಯೂ ಭಾವನೆಯ ಶಕ್ತಿಯಿತ್ತು ತಾನೇ!

ಕುಮಾರ:— ಇಲ್ಲ ದೇವೀ ಸಂಘಮಿತ್ರಾ! ಈ ಶಬ್ದಗಳ ಹಿಂದೆ ಭಾವನೆಯಲ್ಲ; ನಗ್ನಸತ್ಯವಡಗಿತ್ತು.

ಸಂಘಮಿತ್ರಾ:— ಕುಮಾರ್, ಮೊಟ್ಟೆಯೊಳಗೆ ಜೀವವಿದ್ದರೂ ಅದು ತನ್ನಿಂದ ತಾನೇ ಹೇಗೆ ಜೀವಿಯಾಗಲಾರದೋ ಅಂತೆಯೇ ನಗ್ನಸತ್ಯದ ಮತ್ತು ಭಾವನೆಯ ನನ್ನ ಕಲ್ಪನೆಯೂ ಒಂದಕ್ಕೊಂದು ಪೂರ್ಣಪೂರಕವಾಗಿವೆ.

ಭಾವನೆಯು ಮಾನವನನ್ನು ಎಂದೂ ಶಾಂತಿ ಹೊಂದಲು ಬಿಡದ ಶಕ್ತಿಯಾಗಿದೆ.

ಕುಮಾರ:— (ನಗುತ್ತಾನೆ) ಬಹುಶಃ ಸಂಘಮಿತ್ರಾಳು ತನ್ನ ಅಣ್ಣನಂತೆ ಸೋಲಲಾರೆ ಎಂದು ಪಣವಿಟ್ಟಂತೆ ತೋರುತ್ತಿದೆ.

ಸಂಘಮಿತ್ರಾ:— ಪಣದಲ್ಲಿ ನನಗೆ ವಿಶ್ವಾಸವಿಲ್ಲ. ನನಗೆ ಉತ್ತರ ಬೇಕು.

ಕುಮಾರ:— (ಗಂಭೀರ ಶಾಂತ ಸ್ವರ) ಉತ್ತರ ಕೊಡುವುದು ಕಠಿಣವಲ್ಲ ರಾಜಕುಮಾರಿ. ಆದರೆ ಆಶ್ವಸ್ಥ ಮಾಡುವುದು ಮಾತ್ರ ಕಠಿಣ ಕಾರ್ಯ; ಅಲ್ಲದೆ ಬಂಧಿಗೆ ಉತ್ತರ ಕೊಡುವಷ್ಟು ಅವಕಾಶವೂ ಇರುವುದಿಲ್ಲ ಎಂಬುದನ್ನು ನೀನು ಮರೆಯಬಾರದು ದೇವೀ. ಏಕೆಂದರೆ ಅವನ ಜೀವನದ ಸಮಯವೂ ನಿಯಮಿತವಾಗಿದೆ.

ಸಂಘಮಿತ್ರಾ:— (ಶಾಂತ) ನಾನು ಆ ನಿಯಮಿತ ಸಮಯದ ಸೀಮೆಯನ್ನು ಮುರಿಯಲು ಬಂದಿದ್ದೇನೆ.

ಕುಮಾರ:— (ಚಕಿತನಾಗಿ) ಸಮಯದ ಸೀಮೆಯನ್ನು ಮುರಿಯಲು ಬಂದಿರುವಿ? ನನಗೆ ನಿನ್ನಾಶಯ ತಿಳಿಯಲಿಲ್ಲ ದೇವೀ!

ಸಂಘಮಿತ್ರಾ:— ಆಶಯ ಸ್ಪಷ್ಟವಾಗಿದೆ ಕುಮಾರ್! ನಾನು ನಿನ್ನ ಪ್ರಾಣಭಿಕ್ಷೆಯನ್ನು ನಿನ್ನಿಂದ ಕೇಳಲು ಬಂದಿದ್ದೇನೆ.

[ದೃಢವಾಗಿರಲು ಬಯಸಿದರೂ ಕಂಪಿಸುತ್ತಾನೆ]

ಕುಮಾರ:— (ಚಕಿತನಾಗಿ) ನನ್ನಿಂದ! (ಅಟ್ಟಹಾಸ) ನನ್ನಿಂದ ಬಹಳ ಒಳ್ಳೇದು! ರಾಜಕುಮಾರಿ ತರ್ಕದಂತೆಯೇ ನಟನಾ ಕಲೆಯಲ್ಲಿಯೂ ಪ್ರವೀಣಳಿದ್ದುದರಿಂದಲೇ ತನ್ನ ಅಣ್ಣನ ಹತ್ತಿರ ಹೋಗದೆ ನನ್ನ ಹತ್ತಿರ ಬಂದಿದ್ದಾಳೆ!

ಸಂಘಮಿತ್ರಾ:— (ಅದೇ ಶಾಂತ ಸ್ವರ) ಅಣ್ಣನ ಹತ್ತಿರ ಹೋಗಿ ಏನು ಮಾಡಲಿ? ಅವನು ಪ್ರಾಣ ತೆಗೆಯಬಲ್ಲ, ಆದರೆ ಕೊಡಲಾರ. ಪ್ರಾಣ ಬೇಕಾದರೆ ನಿನ್ನಲ್ಲೇ ಕೇಳಬೇಕು. ಏಕೆಂದರೆ ನೀನಾದರೆ ಕೊಡಬಲ್ಲೆ.

[ಕುಮಾರನು ಕಂಪಿಸಿ ಮರುಕ್ಷಣದಲ್ಲಿಯೇ ತೀವ್ರನಾಗುತ್ತಾನೆ]

ಕುಮಾರ:— (ತೀವ್ರ ಸ್ವರ) ನಿನ್ನ ಅಣ್ಣನ ಹತ್ತಿರ ಹೋಗಿ ಅವನಿಂದ ಕ್ಷಮೆಯನ್ನು ಸ್ವೀಕರಿಸಿ, ಅವನ ಅಧೀನತೆಯನ್ನು ಸ್ವೀಕರಿಸು ಎಂದು

ಹೇಳುತ್ತಿರುವಿಯೇನು?

ಸಂಘಮಿತ್ರಾ:— (ವ್ಯಾಕುಲ ಸ್ವರ) ಹಾಗಲ್ಲ ಕುಮಾರ, ನಾನು ಹಾಗನ್ನಲಿಲ್ಲ!

ಕುಮಾರ:— ಮತ್ತೇನೆಂದಿ ರಾಜಕುಮಾರಿ?

ಸಂಘಮಿತ್ರಾ:— ಸಾಮ್ರಾಟನು ನಿನ್ನ ಮುಕ್ತಿಯ ಆದೇಶವಿತ್ತಲ್ಲಿ ನೀನದನ್ನು ತಿರಸ್ಕರಿಸಬೇಡ ಎಂದಷ್ಟೇ ವಿನಂತಿಸುತ್ತಿದ್ದೇನೆ.

ಕುಮಾರ:— (ತಲೆ ಸುತ್ತಿಬರುತ್ತದೆ) ಏನು? ಮಗಧದ ಕ್ರೂರ ಸಾಮ್ರಾಟ ಚಂಡಾಶೋಕ ನನ್ನ ಮುಕ್ತಿಯ ಆದೇಶವೀಯುವನೇನು?

ಕುಮಾರ:— ಕೊಡಲೂ ಬಹುದು.

ಕುಮಾರ:— ಆದರೆ ಏಕೆ? ಹೇಗೆ?

ಸಂಘಮಿತ್ರಾ:— ಏಕೆ ಮತ್ತು ಹೇಗೆಂಬುದನ್ನು ತಿಳಿಯಲು ಆತುರ ಪಡಬೇಡ ಕುಮಾರ! ಮನುಷ್ಯ ಯಾವಾಗ ಏನು ಮಾಡುತ್ತಾನೆಂಬುದು ತಿಳಿಯಲಸಾಧ್ಯ. ಈಗ ಮಗಧ ಸಾಮ್ರಾಟನ ಮನಸ್ಸು ಎಷ್ಟು ಚಂಚಲ ವಾಗಿದೆಯೆಂದರೆ ನಾನು ಹೇಳಿದರೂ ಆವರು ನಿನ್ನನ್ನು ಕ್ಷಮಿಸುತ್ತಾರೆ.

ಕುಮಾರ:— ನೀನು ಹೇಳಿದರೂ ಅವರು ಕ್ಷಮಿಸುವರೇನು? ನೀನು ನನ್ನ ಮುಕ್ತಿಗಾಗಿ ಪ್ರಾರ್ಥಿಸುತ್ತಿಯೇನು?

ಸಂಘಮಿತ್ರಾ:— ನೀನು ಒಪ್ಪಿದರೆ.

ಕುಮಾರ:— ಆದರೆ ಏಕೆ?

ಸಂಘಮಿತ್ರಾ:— ಏಕೆ?

ಕುಮಾರ:— ಹಾಂ, ಏಕೆ? ನೀನು ನನ್ನ ಸ್ವಾತಂತ್ರ್ಯಕ್ಕಾಗಿ ಏಕೆ ಪರದಾಡುತ್ತಿರುವೆ? ನೀನೇಕೆ ನನ್ನನ್ನು ರಕ್ಷಿಸಲಪೇಕ್ಷಿಸುತ್ತಿರುವೆ? ಏಕೆ... ಏಕೆ?...

ಸಂಘಮಿತ್ರಾ:— (ಖಿನ್ನಳಾಗಿ) ಏಕೆ ಪ್ರಾರ್ಥಿಸುತ್ತೇನೆ? ಏಕೆ ರಕ್ಷಿಸ ಲಪೇಕ್ಷಿಸುತ್ತೇನೆ? (ಮೆಲ್ಲನೆ) ನಿನಗೂ ತಿಳಿಯದೇನು?

ಕುಮಾರ:— ಬಹುಶಃ... ಬಹುಶಃ... ಗೊತ್ತಿಲ್ಲ. ಆದುದರಿಂದಲೇ ಕೇಳುತ್ತಿರುವೆ.

ಸಂಘಮಿತ್ರಾ:— (ಉಚ್ಛ್ವಾಸಿತ - ಸ್ವಗತ) ಗೊತ್ತಿಲ್ಲ; ಆದುದ

ರಿಂದಲೇ ಕೇಳುತ್ತಿರುವೆ. ಓಹ್, ಎಷ್ಟೊಂದು ನಿಷ್ಟುರ ನೀನು ಕುಮಾರ! 'ಆಖೇಡ'ದ ನಂತರದ ಆ ರಾತ್ರಿ ಮರೆತುಹೋಯ್ತೇನು? ಆ ಒಲುಮೆಯ ಮಾತುಗಳೂ ಮರೆತುಹೋದುವೇನು? ನೀನು ಹೇಳಿದೆ... ನೀನು ಹೇಳಿದ್ದೆ... ನಿನಗೆ ಹೇಗೆ ಹೇಳಲಿ! ನೀನು ಹೀಗೆ ಅಂದಿದ್ದೆ ಎಂದು ನಾನು ನಿನಗೆ ಹೇಗನ್ನಲಿ? ನೀನಂದಿದ್ದೆ- ನಿನ್ನ ನಯನದ್ವಯಂಗಳು ಶರತ್‌ಜ್ಯೋತ್ಸ್ನವನ್ನು ನಾಚಿಸುತ್ತವೆ, ನಿನ್ನ ಹಾಸ್ಯವು ಹಿಮಶಿಖರದ ಪ್ರಭಾತಕ್ಕಿಂತಲೂ ಮನೋರಮಯವಾಗಿದೆ, ನಿನ್ನ ವಾಣಿಯಲ್ಲಿ ಮಲಯಮಾರುತದ ಸಂಗೀತವಿದೆ, ಗಾಯನದಲ್ಲಿ ಯೌವನದ ನೃತ್ಯವಿದೆ. ಆಹ್! ಎಂದಿದ್ದೆ.

[ಮಾತಾಡುತ್ತಾ ಮಾತಾಡುತ್ತಾ ಭಾವಾತಿರೇಕವಾಗುತ್ತದೆ ಕುಮಾರಿಯು ಗೋಡೆಗೆ ಕೈಕೊಟ್ಟು ನಿಂತು ಮೌನವಾಗುತ್ತಾಳೆ. ರೆಪ್ಪೆ ಕೂಡುತ್ತದೆ. ದೇಹ ಶಿಥಿಲವಾಗುತ್ತದೆ. ಕೇವಲ ತೀವ್ರಶ್ವಾಸವು ನಿಯಮಿತರೂಪದಲ್ಲಿ ಕೇಳಿಬರುತ್ತದೆ. ಆ ಗಂಭೀರ ವಾತಾವರಣದಲ್ಲಿ ಅವಳ ಶ್ವಾಸೋಚ್ಛ್ವಾಸವು ಚೀತ್ಕಾರದಂತೆ ಭಾಸವಾಗುತ್ತದೆ. ಕುಮಾರನು ಸ್ಥಿರಭಾವದಿಂದ ಅವಳನ್ನೇ ದೃಷ್ಟಿಸುತ್ತಾನೆ. ಕ್ಷಣಕ್ಷಣಗಳು ಕಳೆದುಹೋಗುತ್ತವೆ]

ಕುಮಾರ:— (ಮೆಲ್ಲನೆ) ರಾಜಕುಮಾರೀ, ನೀನು ಮೌನವೇಕಾದಿ? ಮಾತಾಡು ದೇವಿ!

ಮೌನ

ಕುಮಾರ:— ಬಹುಶಃ ಕುಮಾರಿ ಪುನಃ ಏನೋ ಆಲೋಚಿಸುತ್ತಿದ್ದಾಳೆ.

[ರಾಜಕುಮಾರಿಯು ಮೊದಲಿನಂತೆಯೇ ಮೌನವಾಗಿರುತ್ತಾಳೆ. ಆದರೆ ಅವಳ ರೂಪವು ಪ್ರೇಮಲಜ್ಯೋತಿಯಂತೆ ಭಾಸಮಾನವಾಗುತ್ತದೆ. ಕುಮಾರಿಯ ನೇತ್ರಗಳಿಂದ ಪರಮಶಾಂತಿಯ ಪರಮೋಜ್ವಲ ಪ್ರಕಾಶವು ಹರಿಯುತ್ತಿರುವಂತೆ ಕಾಣುತ್ತದೆ. ಅದರಲ್ಲಿಯೇ ಲುಪ್ತಳಾದ ರಾಜಕುಮಾರಿಯು ತನ್ನ ನೇತ್ರದ ಮೂಲಕ ತನ್ನ ಶರೀರವನ್ನು ಪ್ರವೇಶಿಸಿದಂತೆ ಭಾಸವಾಗಿ ಕುಮಾರನು ಕಿರುಚುತ್ತಾನೆ]

ಕುಮಾರ:— ರಾಜಕುಮಾರೀ, ರಾಜಕುಮಾರೀ ನೀನೆಲ್ಲಿರುವೆ? ನೀನೇಕೆ ಮೌನಳಾಗಿದ್ದಿ? ನೀನೆಲ್ಲಿರುವೆ ದೇವೀ.........?

ಸಂಘಮಿತ್ರಾ:— (ಎಚ್ಚರಗೊಂಡವಳಂತೆ) ಹಾಂ ಕುಮಾರ್, ನಾನಿಲ್ಲಿಯೇ ಇದ್ದೇನೆ ಕುಮಾರ್!

ಕುಮಾರ:— (ಏನೋ ಕಳೆದುಕೊಂಡವನಂತೆ) ರಾಜಕುಮಾರೀ, ನೀನೆಲ್ಲಿ ಹೋಗಿದ್ದೆ? ಇದೆಲ್ಲಾ ಏನು? ಮಾಯಾಜಾಲವೇನು? ಆ ಪ್ರಣಯ ಜ್ವಾಲೆ ಹೇಗಿತ್ತು? ಈ ಪ್ರಣಯ ಪಿಪಾಸೆಯನ್ನಾರು ಹುಟ್ಟಿಸಿದರು? ಮಹಾ ನಾಶದ ಈ ಸಂದರ್ಭದಲ್ಲೂ ನಿನಗೆ ಪ್ರಣಯಲೀಲೆ ರುಚಿಸುತ್ತೇನು?

ಸಂಘಮಿತ್ರಾ:— (ಕಳವಳಗೊಂಡ ನಂತರ ದೃಢ ಸ್ವರದಲ್ಲಿ) ಕುಮಾರ್! ನಾರಿ ಓರ್ವನನ್ನು ಒಮ್ಮೆಯೇ ಪ್ರೀತಿಸುತ್ತಾಳೆ. ನಂತರ ಅವನು ಅವಳ ರಕ್ತ ಕುಡಿದರೂ ಅವಳು ಅವನನ್ನೇ ಪ್ರೀತಿಸುತ್ತಾಳೆ.

ಕುಮಾರ:— (ಕಂಪಿಸಿ) ರಾಜಕುಮಾರೀ!

ಸಂಘಮಿತ್ರಾ:— (ನಕ್ಕು) ಭಯಪಡದಿರು ಕುಮಾರ, ಭಯಪಡಬೇಡ.

ಕುಮಾರ:— ಹಾಂ ರಾಜಕುಮಾರೀ, ನಾನು ಹೆದರಿದೆ. ಯುದ್ಧಭೂಮಿಯ ಮಹಾಪ್ರಲಯ ನೋಡಿದಾಗ ಕಂಪಿಸದ ನಾನು, ಯುದ್ಧಭೂಮಿಯಲ್ಲಿಯೇ ಮಡಿದು ಧರಾಶಾಯಿಯಾದ ಪಿತೃವನ್ನು ನೋಡಿ 'ಆಹ್' ಎನ್ನದ ನಾನು, ಮಗಧದ ಮಹಾಕ್ರೂರ ಸಾಮ್ರಾಟನ ಕ್ರೋಧದ ಹುಬ್ಬು ಯಾರ ದೃಷ್ಟಿಯನ್ನು ತಗ್ಗಿಸಲು ಸಮರ್ಥವಾಗಲಿಲ್ಲವೋ ಅಂಥಹ ಆ ಕುಮಾರನು ಈ ಕ್ಷಣದಲ್ಲಿ ಭಯಪಟ್ಟ ರಾಜಕುಮಾರೀ!

ಸಂಘಮಿತ್ರಾ:— (ನಗುತ್ತಾ) ಕಳಿಂಗ ಪರಾಕ್ರಮಿ ಕುಮಾರನು ಭಯಪಟ್ಟುದುದೂ ಆಶ್ಚರ್ಯವೇ ಸರಿ. ಕುಮಾರನ ಈ ಕಂಪನ, ಭಯಗಳಿಗೆ ಕಾರಣವೇನೆಂದು ನಾನು ವಿಚಾರಿಸಬಹುದೇನು?

ಕುಮಾರ:— ದಯೆ!

ಸಂಘಮಿತ್ರಾ:— (ಕಂಪಿಸಿ) ದಯೆ?

ಕುಮಾರ:— ಹಾಂ ದೇವೀ, ನಿನ್ನ ಪ್ರಣಯದ ವರ್ತಮಾನ ಸ್ಥಿತಿಯು ನನ್ನ ಪ್ರಾಣರಕ್ಷಣೆಯ ಕಾರಣವಾಗದಿರಲಿ ಎಂದೇ ನಾನು ಭಯಪಟ್ಟೆ. ನಿನ್ನ ಪ್ರೇಮವು ನನ್ನನ್ನು ನನ್ನ ಕರ್ತವ್ಯಪಥದಿಂದ ವಿಚಲಿತನನ್ನಾಗಿ ಮಾಡದಿರಲಿ.

ಸಂಘಮಿತ್ರಾ:— (ಕಂಪಿಸಿ) ಹಾಗಾದರೆ...ಹಾಗಾದರೆ ನಿನಗೆಲ್ಲವೂ

ತಿಳಿದಿದೆ. ಮಗಧದ ಅತಿಥಿಯಾಗಿ ಬೇಟೆಯಾಡಲು ಬಂದ ದಿನ ನಿನಗೆ ನೆನಪಿದೆ. ಸಾಮ್ರಾಟನು ನಿನಗೆ ಹಸ್ತಲಾಘವವನ್ನಿತ್ತು ಪ್ರಶಂಸಿಸಿದ್ದನು. ನೀನು ನನ್ನ ರೂಪದ ಕುರಿತು ಪ್ರಶಂಸೆ ಮಾಡಿದೆ.

ಕುಮಾರ:— ಕಳಿಂಗದ ಕುಮಾರನು ಎಲ್ಲಾ ಆಗುವುದಕ್ಕೆ ಮೊದಲು ಒಬ್ಬ ಪುರುಷನಾಗಿದ್ದಾನೆ ರಾಜಕುಮಾರೀ! ಮತ್ತು ಪುರುಷನು ಪ್ರಶಂಸನೀಯ ವಸ್ತುವನ್ನು ಪ್ರಶಂಸಿಸುವುದು ತನ್ನ ಕರ್ತವ್ಯವೆಂದು ತಿಳಿಯುತ್ತಾನೆ.

ಸಂಘಮಿತ್ರಾ:— (ಹತೋಟಿಗೆ ಬಂದು) ನನಗೆ ಗೊತ್ತಿದೆ. ಆದುದರಿಂದಲೇ ನನ್ನ ಪ್ರೀತಿಯು ನಿನ್ನ ಪ್ರಾಣರಕ್ಷಣೆಯನ್ನಪೇಕ್ಷಿಸುತ್ತದೆ. ಅದರಲ್ಲಿ ದೋಷವೇನು?

ಕುಮಾರ:— ಪ್ರಣಯ ಪ್ರಾಣದ ಭಿಕ್ಷೆ ಕೇಳುವುದಿಲ್ಲ ರಾಜಕುಮಾರೀ! ಮಗಧ ಸಾಮ್ರಾಟನು ನನ್ನ ತಲೆ ಕಡಿಯುವ ಆಜ್ಞೆ ಕೊಟ್ಟಿದ್ದಾನೆ. ನಾನು ಆ ಆಜ್ಞೆಯನ್ನು ಸನ್ಮಾನಿಸುತ್ತೇನೆ. ಸ್ವಲ್ಪ ಸಮಯಾನಂತರ ಅರುಣೋದಯದ ಮನಮೋಹಕ ಉಷೆಯು ಸುಶ್ರಾವ್ಯ ಸಂಗೀತಾಲಾಪನೆಯಲ್ಲಿ ಲೀನವಾಗುವಾಗ ಅದರೊಂದಿಗೆ ಮೃತ್ಯು ಬಂದು ನನ್ನನ್ನಾಲಿಂಗಿಸುತ್ತದೆ. ನನ್ನ ಮೃತ್ಯುವಿನಲ್ಲಿಯೇ ನನ್ನ ಕಲ್ಯಾಣವಿದೆ. ಕಳಿಂಗ ಮಹಾನಾಶದ ಈ ವೇಳೆಯಲ್ಲಿ ಲಕ್ಷಾಂತರ ಯುವತಿಯರ 'ಕುಂಕುಮ'ವು ರಕ್ತಧಾರೆಯಾಗಿ ಹರಿದಿದೆ. ಅಂಥಹ ಸಂದರ್ಭದಲ್ಲಿ ನಾನು ನೀನಾಪೇಕ್ಷಿಸುವ ಸಿಂಧೂರವನ್ನು ಕೊಡಲಾರೆ. ಇಂದಿನ ನನ್ನ ಕಣ್ಣುಗಳು ನಿನ್ನ ರೂಪರಾಶಿಯನ್ನು ನೋಡಲು ಅಸಮರ್ಥವಾಗಿವೆ. ನನ್ನ ಕಿವಿಗಳೆರಡೂ ನಿನ್ನ ಪ್ರಣಯರಾಗವನ್ನು ಕೇಳಲು ಅಯೋಗ್ಯವಾಗಿದೆ ರಾಜಕುಮಾರೀ!

ಸಂಘಮಿತ್ರಾ:— ಕುಮಾರ... ಕುಮಾರಾ!

[ಚಂಡಾಗಿರನ ಪ್ರವೇಶ]

ಚಂಡಾಗಿರ:— ದೇವೀ!

ಸಂಘಮಿತ್ರಾ:— ಯಾರು? ಚಂಡಾಗಿರ? ನೀನು ಬಂದುಬಿಟ್ಟಿಯೇನು?

ಚಂಡಾಗಿರ:— ಹಾಂ ದೇವೀ. ನೀವು ಬಂದು ತುಂಬಾ ಹೊತ್ತಾಯಿತು.

ಸಂಘಮಿತ್ರಾ:— ಯಾರಾದರೂ ಬಂದರೇನು?

ಚಂಡಾಗಿರ:— ಇಲ್ಲ ದೇವೀ!

ಸಂಘಮಿತ್ರಾ:— ಹಾಗಾದರೆ ಸ್ವಲ್ಪ ತಡೆ...

ಚಂಡಾಗಿರ:— ಇಂದು ಸಾಮ್ರಾಟನ ಆಜ್ಞೆಯು ಉಲ್ಲಂಘನೆಯಾಗುತ್ತಿದೆ ದೇವೀ.

ಸಂಘಮಿತ್ರಾ:— (ವಿನಯದಿಂದ) ಸ್ವಲ್ಪ, ಇನ್ನು ಸ್ವಲ್ಪ ಸಮಯ ಕೊಡು ಚಂಡಾಗಿರ. ಮಾತು ಅರ್ಧಕ್ಕೆ ನಿಂತಿದೆ.

ಚಂಡಾಗಿರ:— ತಮ್ಮಿಚ್ಛೆ.

[ಚಂಡಾಗಿರನ ನಿರ್ಗಮನ]

ಸಂಘಮಿತ್ರಾ:— (ನಿಶ್ವಾಸ) ಉಫ್! ಹೋಃಹ್...ಕುಮಾರ...

ಕುಮಾರ:— (ವ್ಯಂಗ್ಯವಾಗಿ) ದೇವಿ ಸಂಘಮಿತ್ರ ತನ್ನ ಪ್ರಣಯಕ್ಕಾಗಿ ಮತ್ತೊಬ್ಬರಿಗೆ ಬಗ್ಗುತ್ತಾಳೇನು?

ಸಂಘಮಿತ್ರಾ:— (ಗಾಯಗೊಂಡು) ಮನಸ್ಸನ್ನು ಗೆಲ್ಲಲು ಏನು ಮಾಡಿದರೂ ಅದು ಚಾತುರ್ಯವೆಂದು ಗಣಿಸಲಾಗುತ್ತದೆ.

ಕುಮಾರ:— (ಆವೇಶ) ಆದರೆ ನಾನಿಂಥಾ ಚಾತುರ್ಯವನ್ನು ತಿರಸ್ಕರಿಸುತ್ತೇನೆ ದೇವೀ. ನಾನು ನನ್ನ ಮಸ್ತಕವನ್ನೆಂದೂ ತಗ್ಗಿಸಲಾರೆ; ಎಂದೆಂದೂ ತಗ್ಗಿಸಲಾರೆ. ನಾನು ಮೃತ್ಯುವಿನ ಆಲಿಂಗನಕ್ಕೆ ಸಿದ್ಧನಿದ್ದೇನೆ. ಆದರೆ ಪ್ರಾಣವಿರುವ ತನಕ ನತಮಸ್ತಕನಾಗಲಾರೆ. ನಾನು ಯಾರ ದಯೆಯ ಭಿಕ್ಷುಕನಾಗಲೂ ಸಿದ್ಧನಿಲ್ಲ.

ಸಂಘಮಿತ್ರಾ:— (ಆಳವಾದ ವಿಶ್ವಾಸ) ಕುಮಾರ್! ಆದುದರಿಂದಲೇ ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ.

ಕುಮಾರ:— ಆದರೆ ದೇವೀ, ನಾನು ಮಗಧ ಸಾಮ್ರಾಟನ ಬಂಧಿಯಾಗಿದ್ದೇನೆ. ನನಗೆ ನಿನ್ನನ್ನು ಪ್ರೀತಿಸುವ ಅಧಿಕಾರವೂ ಇಲ್ಲ.

ಸಂಘಮಿತ್ರಾ:— ನಾನು ನಿನ್ನನ್ನೀಗಲೇ ಮುಕ್ತನನ್ನಾಗಿ ಮಾಡುತ್ತೇನೆ.

ಕುಮಾರ:— ಬೇಡ ದೇವೀ...ಬೇಡ! ನಾನು ಮಗಧ ಸಾಮ್ರಾಟನ ದಯೆಯನ್ನಪೇಕ್ಷಿಸುವುದಿಲ್ಲ. ಯಾರು ನನ್ನ ತಂದೆಯ ಕೊಲೆಪಾತಕನೋ,

ಯಾರು ನನ್ನ ಮಾತೃಭೂಮಿಯ ಹಗೆಯೋ ಅವನ ದಯೆಯನ್ನು ನಾನು ಅಪೇಕ್ಷಿಸುವುದಿಲ್ಲ. ಎಲ್ಲಿ ವರೆಗೆ ನನ್ನ ಶರೀರದಲ್ಲಿ ಪ್ರಾಣವಿದೆಯೋ ಅಲ್ಲಿ ವರೆಗೆ ಶತ್ರುವಿನ ದಯೆಯನ್ನು ಸ್ವೀಕರಿಸಿ ಕಳಿಂಗ ಕುಮಾರನು ಶೌರ್ಯ ವನ್ನು ಕಲಂಕಿತವನ್ನಾಗಿ ಮಾಡಲಾರನು.

ಸಂಘಮಿತ್ರಾ:— (ಶಾಂತ) ಅದು ದಯೆಯಲ್ಲ ಕುಮಾರ್, ಅದು ದಯೆಯಲ್ಲ.

ಕುಮಾರ:— ಹಾಗಾದರೆ ಅದು ದಯೆಯಲ್ಲದೆ ಮತ್ತೇನು?

ಸಂಘಮಿತ್ರಾ:— ಪಶ್ಚಾತ್ತಾಪ!

ಕುಮಾರ:— ಪಶ್ಚಾತ್ತಾಪ! (ಅಟ್ಟಹಾಸ) ಹೂಂ, ಅತ್ಯಾಚಾರಿ ಅಶೋಕನ ಪಶ್ಚಾತ್ತಾಪ! ಇದು ಸರ್ಪದಂತದಲ್ಲಿದ್ದ ಅಮೃತದಂತೆ ಅಸಂಭವ ವಾಗಿದೆ. ನೀನೇನೆನ್ನುತ್ತಿರುವೆ ದೇವಿ?

ಸಂಘಮಿತ್ರಾ:— ನಾನು ನಿಜವನ್ನುತ್ತಿರುವೆ ಕುಮಾರ. ನಿನ್ನ ನಿರ್ಗಮನದ ನಂತರ ಸಾಮ್ರಾಟರು ಉದ್ವಿಗ್ನರಾಗಿ ಪಶ್ಚಾತ್ತಾಪದ ಬೆಂಕಿ ಯಲ್ಲಿ ಸುಡಲಾರಂಭಿಸಿದ್ದಾರೆ. ನಿನ್ನ ಆ ವಾಕ್ಯಗಳು ಅವರ ಮೇಲೆ ಭಯಂ ಕರ ಪ್ರಹಾರ ಮಾಡಿವೆ. ಅವರ ಮನಸ್ಸು ಅಲ್ಲೋಲಕಲ್ಲೋಲವಾಗಿದೆ. ನಿನ್ನ ಮುಕ್ತಿಯ ಸಂದೇಶ ಬರಲಿದೆ. ಆದುದರಿಂದಲೇ ನಾನು ಚಂಡಾಗಿರ ನಿಂದ ಸಮಯ ಕೇಳಿ ಬಂದಿದ್ದೇನೆ. ಭಿಕ್ಷು ಉಪಗುಪ್ತರು ಸಾಮ್ರಾಟನಲ್ಲಿಗೆ ಹೋಗಿದ್ದಾರೆ.

ಕುಮಾರ:— ಭಿಕ್ಷು ಉಪಗುಪ್ತರು ಸಾಮ್ರಾಟನಲ್ಲಿಗೆ ಹೋಗಿ ದ್ದಾರೆ?

ಸಂಘಮಿತ್ರಾ:— ಹೆದರಬೇಡ ಕುಮಾರ, ಅವರು ನಿನ್ನ ಪ್ರಾಣದ ಭಿಕ್ಷೆ ಕೇಳಲು ಬಂದಿಲ್ಲ!

ಕುಮಾರ:— ಮತ್ತೇಕೆ ಬಂದಿದ್ದಾರೆ?

ಸಂಘಮಿತ್ರಾ:— ನಿನ್ನೊಡನೆ ಮಾತಾಡುವ ಆಜ್ಞೆ ತೆಗೆದುಕೊಳ್ಳಲು ಬಂದಿದ್ದಾರೆ. ಸಾಮ್ರಾಟನಲ್ಲಿ ಸೆರಗೊಡ್ಡಿ ನಿನ್ನನ್ನು ಬೇಡಬೇ ಎಂದು ಆಶೆ ಯಾಗುತ್ತಿದೆ. ಆದರೆ...

ಕುಮಾರ:— ಆದರೆ?

ಸಂಘಮಿತ್ರಾ:— ಆದರೆ ನಾನು ನಿನ್ನನ್ನು ಅಪಮಾನ ಮಾಡಲಿಚ್ಛಿಸುವುದಿಲ್ಲ.

ಕುಮಾರ:— (ಚಕಿತನಾಗಿ) ನನಗೆ ದೇವಿಯ ಆಶಯ ತಿಳಿಯಲಿಲ್ಲ!

ಸಂಘಮಿತ್ರಾ:— ಆಶಯ ಸ್ಪಷ್ಟವಿದೆ ಕುಮಾರ. ನಾನೂ ನಿನ್ನಂತೆಯೇ ದಯೆಯನ್ನು ಬೇಡುವುದು ನಿನಗೆ ಅಪಮಾನ ಎಂದು ತಿಳಿದಿರುವೆ. ನಿನ್ನ ಬಗ್ಗೆ ಸಾಮ್ರಾಟನಲ್ಲಿ ಒಂದು ಮಾತನ್ನೂ ನಾನು ಆಡಲಿಲ್ಲ. ಆದರೆ ಪಶ್ಚಾತ್ತಾಪದ ಬೆಂಕಿ ಸರಿಯಾಗಿ ಉರಿಯುವಂತೆ ಮಾತಿನ ಕಟ್ಟಿಗೆ ಇಟ್ಟುಬಂದೆ. ನಾನು ಭಿಕ್ಷು ಉಪಗುಪ್ತನ ಆಜ್ಞೆಯಿಂದ......

ಕುಮಾರ:— ಏನು?...ನೀನು ಭಿಕ್ಷು ಉಪಗುಪ್ತನ ಆಜ್ಞೆಯಲ್ಲಿ ವಿಶ್ವಾಸವಿಡುತ್ತಿಯೇನು?

ಸಂಘಮಿತ್ರಾ:— ಅವರೇ ನನ್ನ ಗುರು.

ಕುಮಾರ:— ರಾಜಕುಮಾರೀ!

ಸಂಘಮಿತ್ರಾ:— ಇದು ನಿಜ ಕುಮಾರ.

ಕುಮಾರ:— ನೀನು ಈ ಘಟ್ಟದ ವರೆಗೆ ಬಂದಿರುವಿ? ನನ್ನ ರಕ್ಷಣೆಗಾಗಿ ಇಷ್ಟೆಲ್ಲಾ ಮಾಡಿರುವಿ?

ಸಂಘಮಿತ್ರಾ:— ನಿನ್ನ ರಕ್ಷಣೆಯಲ್ಲ ಕುಮಾರ ನನ್ನ ರಕ್ಷಣೆ. ಇದೆಲ್ಲಾ ನನ್ನ ಸ್ವಾರ್ಥಕ್ಕಾಗಿ.

ಕುಮಾರ:— ನಿಜ ದೇವಿ! ಇದು ಸ್ವಾರ್ಥವೇ ಸರಿ. ಎಲ್ಲವೂ ಸ್ವಾರ್ಥ! ಈ ಸ್ವಾರ್ಥ ಯಾರನ್ನೂ ಬಿಟ್ಟಿಲ್ಲ. ಅದು ನನ್ನನ್ನೂ ಬಿಟ್ಟಿಲ್ಲ. ನನ್ನ ದೇಶಪ್ರೇಮ, ವೀರತೆ ಎಲ್ಲವೂ ಸ್ವಾರ್ಥಪೂರ್ಣವಾಗಿದೆ. ಆದರೆ ನನ್ನದು ಬಹುದೊಡ್ಡ ಸ್ವಾರ್ಥ. ಅದಿನ್ನೂ ಪೂರ್ತಿಯಾಗಿಲ್ಲ! ಸಾಮ್ರಾಟನ ಪಶ್ಚಾತ್ತಾಪವಿನ್ನೂ ತಳದಲ್ಲಿಯೇ ಇದೆ. ಅದು ಮೇಲಕ್ಕೇರಲು ಇನ್ನೂ ನೋವಿನ ಅವಶ್ಯಕತೆ ಇದೆ. ವಿನಾಶವು ಸಂಪೂರ್ಣವಾಗದ ವಿನಃ ನಿರ್ಮಾಣವು ಅಸಂಭವ ದೇವೀ.

ಸಂಘಮಿತ್ರಾ:— ಇನ್ನೂ ವಿನಾಶ ಬಾಕಿಯಿದೆಯೇನು?

ಕುಮಾರ:— ತುಂಬಾ ಬಾಕಿಯಿದೆ ದೇವೀ!

ಸಂಘಮಿತ್ರಾ:— ಏನನ್ನುತ್ತಿರುವಿ ಕುಮಾರ?

ಕುಮಾರ:— (ಆವೇಶದ ಪ್ರವಾಹ) ನಾನು ನಿಜ ಹೇಳುತ್ತಿರುವೆ ರಾಜಕುಮಾರೀ. ಕಳಿಂಗದ ರಕ್ತಯಜ್ಞವಿನ್ನೂ ಪೂರ್ಣವಾಗಿಲ್ಲ. ನನ್ನ ವಧೆ ಶೇಷವಿದೆ. ನಿನ್ನ ಹೃದಯ ಮುರಿಯಲಿದೆ. ನಂತರ ಅಶೋಕನಿಗೆ ತನ್ನ ಪಶ್ಚಾತ್ತಾಪದಿಂದ ಉತ್ಪನ್ನವಾಗಿ ಕೊಟ್ಟ ಆಜ್ಞೆಯ ಉಲ್ಲಂಘನೆ ಕಾಣಲು ಬಾಕಿ ಇದೆ.

ಸಂಘಮಿತ್ರಾ: (ಹುಚ್ಚಳಂತೆ) ಏನು ಏನು ಹೇಳುತ್ತಿರುವೆ?...

ಕುಮಾರ:— ನಿಜ ಹೇಳುತ್ತಿದ್ದೇನೆ. ಅದೋ ಚಂಡಾಗಿರ ಪುನಃ ಬಂದ, ಈಗವನು ಹಿಂದಿರುಗಲಾರ. ನನ್ನ ಸಮಯವಾಯ್ತು.

[ಚಂಡಾಗಿರನ ಪ್ರವೇಶ]

ಚಂಡಾಗಿರ:— ದೇವೀ, ಸಾಮ್ರಾಟನ ಆಜ್ಞಾಪಾಲನೆಯ ಸಮಯ ವಾಯ್ತು.

ಸಂಘಮಿತ್ರಾ:— (ವ್ಯಾಕುಲಳಾಗಿ) ಚಂಡಾಗಿರ, ಎರಡು ಕ್ಷಣ ತಡೆ, ಅವರು ಬರುತ್ತಲೇ ಇರಬಹುದು.

ಕುಮಾರ:— ಇಲ್ಲ ಚಂಡಾಗಿರ! ಇನ್ನಾರ ಪ್ರತೀಕ್ಷೆಯೂ ಇಲ್ಲ. ನೀನು ಇಲ್ಲಿಯೇ ನಿಂತು ಕೇಳು. ಸಂಘಮಿತ್ರಾ, ನಾನು ನಿನ್ನನ್ನು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತೇನೆ. ಆದರೆ ನಿನ್ನಿಂದಲೂ ಅಧಿಕವಾಗಿ ನಾನು ನನ್ನ ಮಾತೃಭೂಮಿಯನ್ನು ಪ್ರೀತಿಸುತ್ತೇನೆ. ಅದರಿಂದಲೂ ಹೆಚ್ಚಾಗಿ ನಾನು ಜನಸಾಮಾನ್ಯರನ್ನು ಪ್ರೀತಿಸುತ್ತೇನೆ. ಅವರನ್ನೆಚ್ಚರಿಸಲಿಕ್ಕಾಗಿ ಇನ್ನೂ ಬಲಿ ದಾನದ ಅವಶ್ಯಕತೆ ಇದೆ.

ಸಂಘಮಿತ್ರಾ:— (ತಡೆಯುತ್ತಾ) ಕುಮಾರ್...ಕೇಳು ಕುಮಾರ್.

ಕುಮಾರ:— ನಾನು ಬಹಳ ಕೇಳಿದ್ದೇನೆ ಸಂಘಮಿತ್ರಾ. ಈಗ ನೀನು ಕೇಳು ಕಳಿಂಗ ಕುಮಾರನು ಪ್ರಣಯಕ್ಕಾಗಲೀ ನಾರಿಗಾಗಲೀ ಎಂದೂ ಹೆದರುವುದಿಲ್ಲ ಸಂಘಮಿತ್ರಾ! ನೀನು ನನ್ನನ್ನು ನಿಜವಾಗಿಯೂ ಪ್ರೀತಿಸುವು ದಾದರೆ ನಿನ್ನ ಪ್ರಿಯತಮನು ಕಳಿಂಗ ರಕ್ತಯಜ್ಞದಲ್ಲಿ ಪೂರ್ಣಾಹುತಿ ಕೊಟ್ಟು ಅವನ್ನು ನಿಲ್ಲಿಸಲು ಹೋಗಿದ್ದಾನೆಂದು ತಿಳಿ ಮತ್ತು ಅವನು ನಿನ್ನನ್ನೂ ಈ ರಕ್ತ ಯಜ್ಞಕ್ಕೆ ನಿನ್ನ ಪ್ರಣಯವನ್ನರ್ಪಿಸಲು ಪ್ರೇರೇಪಿಸುತ್ತಾನೆ. ನೀನು ಕಳಿಂಗದ ಸಹಸ್ರಾರು ನಾರಿಯರ ರೋದನದಲ್ಲಿ ತನ್ನ ಸ್ವರಗೂಡಿಸು. ಇದನ್ನು ಕೇಳಿ

ಯಾದರೂ ಭೂಮ್ಯಾಕಾಶಗಳು ಕಂಪಿಸಲಿ! ಮಹಾನಾಶದ ಯಜ್ಞ ಪೂರ್ಣವಾಗಲಿ! 'ಮಹತಿನಿಶೆ'ಯ ನಂತರದ ಉಷೆಯು ಉದಯವಾಗಲಿ.........

[ಹೇಳುತ್ತಾ ಹೇಳುತ್ತಾ ಅವನು ಭೂತದಂತೆ ನಿಂತಿರುವ ಚಂಡಾಗಿರನ ಕಡೆ ತಿರುಗುತ್ತಾನೆ]

ನಿನ್ನ ಕಠಾರಿ ಎಲ್ಲಿದೆ ಚಂಡಾಗಿರ? ನನ್ನ ಬಾಹುಗಳಲ್ಲಿಯೂ ನಿನ್ನ ಬಾಹುಗಳಿಂದ ಕಡಿಮೆ ಶಕ್ತಿಯೇನೂ ಇಲ್ಲ.

[ಚಂಡಾಗಿರನು ಹುಚ್ಚನಂತಾಗಿ ಏನೂ ಅರ್ಥವಾಗದೆ ಮೌನವಾಗಿರುತ್ತಾನೆ. ಚಂಡಾಗಿರನ ಒರೆಯಲ್ಲಿ 'ಮಿಂಚಿ'ನಂತೆ ತೀಕ್ಷ್ಣಪ್ರಕಾಶದಿಂದ ಕೂಡಿರುವ ಕಠಾರಿಯನ್ನು ಎಳೆದು ತೆಗೆದುಕೊಳ್ಳುತ್ತಾನೆ. ಕೂಡಲೇ ಸಂಘಮಿತ್ರಾ ಮತ್ತು ಚಂಡಾಗಿರನು ಜಾಗೃತರಾಗಿ ಅವನ ಹತ್ತಿರ ಓಡಿಬರುತ್ತಾರೆ]

ಚಂಡಾಗಿರ:— ಕುಮಾರ ಏನು ಮಾಡುತ್ತಿರುವೆ? ನನ್ನ ಕಠಾರಿ ಕೊಡು.

ಸಂಘಮಿತ್ರಾ:— ಕುಮಾರ್...ಕುಮಾರ್ ಕಠಾರಿ. (ಅವರಿಬ್ಬರೂ ಕಠಾರಿಯನ್ನು ಎಳೆದುಕೊಳ್ಳಲಪೇಕ್ಷಿಸುವ ಮುಂಚಿತವಾಗಿಯೇ ಕುಮಾರನು ಅದನ್ನು ತನ್ನೆದೆಗೆ ಚುಚ್ಚಿಕೊಳ್ಳುತ್ತಾನೆ. ರಾಜಕುಮಾರಿ ಕಿರುಚುತ್ತಾಳೆ) ಕುಮಾರ್...ಕುಮಾರ್ ಇದೇನು ಮಾಡಿದೆ? ನೀನೇಕೆ ಆತ್ಮಹತ್ಯೆ ಮಾಡಿಕೊಂಡೆ? (ಅಳುತ್ತಾಳೆ) ಯಾರಲ್ಲಿ ಚಂಡಾಗಿರ.

[ಕಠಾರಿ ತೆಗೆಯಲಪೇಕ್ಷಿಸುತ್ತಾಳೆ, ಕುಮಾರನು ತಡೆಯುತ್ತಾನೆ]

ಕುಮಾರ:— (ಕ್ಷೀಣಸ್ವರ) ಚಂಡಾಗಿರ...ಕಠಾರಿ ತೆಗೆ.

ಚಂಡಾಗಿರ:— (ಕಠಾರಿ ತೆಗೆಯುತ್ತಾನೆ, ಕುಮಾರನು 'ಆಹ್' ಎನ್ನುತ್ತಾನೆ) ನಾನು ಹೋಗಿ ಸಾಮ್ರಾಟನಿಗೆ ಕುಮಾರನು ತನ್ನ ಕೈಯಿಂದಲೇ ಆತ್ಮಹತ್ಯೆ ಮಾಡಿಕೊಂಡನೆಂದು ತಿಳಿಸುತ್ತೇನೆ.

ಸಂಘಮಿತ್ರಾ:— (ವ್ಯಾಕುಲ) ಚಂಡಾಗಿರ! ನನಗೆ ಕಠಾರಿ ಕೊಟ್ಟು ಹೋಗು. ಆ ಕಠಾರಿಯನ್ನು ನನಗೆ ಕೊಡು.

ಚಂಡಾಗಿರ:— (ಹಿಂತಿರುಗಿ) ಕಠಾರಿಯನ್ನು ನಿಮಗೆ ಕೊಟ್ಟು ನಿಮ್ಮ ಹತ್ಯೆಯೂ ಆಗುವ ಸಂದರ್ಭವನ್ನು ಕಲ್ಪಿಸಿಕೊಡುವಷ್ಟು ಮೂರ್ಖನಲ್ಲ ಚಂಡಾಗಿರ.

[ಹೊರಟುಹೋಗುತ್ತಾನೆ]

ಸಂಘಮಿತ್ರಾ:— (ಓಡಲು ನಿಲ್ಲುತ್ತಾಳೆ) ನಿಲ್ಲು ಚಂಡಾಗಿರ ನಿಲ್ಲು!

ಕುಮಾರ:— (ಸಂಘಮಿತ್ರಾಳ ಸೆರಗು ಹಿಡಿಯುತ್ತಾನೆ) ಎಲ್ಲಿಗೆ ಹೋಗುತ್ತಿರುವೆ ಸಂಘಮಿತ್ರಾ? ಈ ಪ್ರಣಯ ವೇಳೆಯಲ್ಲಿ ನನ್ನೊಬ್ಬನನ್ನೇ ಬಿಟ್ಟು ಹೋಗಬೇಡ ದೇವೀ. ಬಹುದೂರ ಹೋಗುತ್ತಿರುವ ನನ್ನನ್ನು ಮನತುಂಬ ಪ್ರೀತಿಸು ಮತ್ತು....

ಮಹೇಂದ್ರ:— (ಪ್ರವೇಶ ಮಾಡುತ್ತಾ) ಸಂಘಮಿತ್ರಾ, ಕ್ಷಮಿಸಿದರು. ಸಾಮ್ರಾಟನು ಕುಮಾರನನ್ನೂ, ಅವನ ದೇಶವನ್ನೂ ಸ್ವತಂತ್ರವನ್ನಾಗಿ ಮಾಡಿದರು. (ಕೂಡಲೇ ಕೆಳಗೆ ನೋಡಿ) ಹಾಂ! ಏನು... ಏನಿದು ರಕ್ತ? ಓಹ್ ಕುಮಾರ! ಚಂಡಾಗಿರನು ಎರಡು ಕ್ಷಣವೂ ತಡೆಯಲಿಲ್ಲವೇನು?

ಸಂಘಮಿತ್ರಾ:— ಚಂಡಾಗಿರನು ಏನೊಂದು ಮಾಡುವ ಅವಕಾಶವೂ ಪ್ರಾಪ್ತವಾಗಲಿಲ್ಲ ಅಣ್ಣಾ! ಸಾಮ್ರಾಟನ ಕ್ಷಮಾಶ್ರವಣ ಮಾಡುವುದಕ್ಕೆ ಮುಂಚೆಯೇ ಅವನು ತನ್ನನ್ನು ಕೊನೆಗೊಳಿಸಿದನು.

ಮಹೇಂದ್ರ:— ಇದೇನಾಯ್ತು ತಂಗಿ? ಇದೇನಾಯ್ತು ಈ ನವಪ್ರಭಾತದಲ್ಲಿ?.........

ಭಿಕ್ಷು:— ಶಾಂತಳಾಗು ಸಂಘಮಿತ್ರಾ, ಶಾಂತನಾಗು ಮಹೇಂದ್ರ. ಏನೆಲ್ಲಾ ನಡೆಯಿತೋ ಅದೇ ಸರಿ. ಇದು ಆತ್ಮಹತ್ಯೆಯಲ್ಲ; ಕುಮಾರನು ಕಳಿಂಗ ರಕ್ತಯಜ್ಞಕ್ಕೆ ತನ್ನ ಪೂರ್ಣಾಹುತಿ ಕೊಟ್ಟಿದ್ದಾನೆ.

ಸಂಘಮಿತ್ರಾ:— (ಕಂಪಿಸಿ) ಭಿಕ್ಷು!

ಮಹೇಂದ್ರ:— ಏನನ್ನುತ್ತಿರುವಿರಿ ಭಿಕ್ಷು ರಾಜ್?

ಭಿಕ್ಷು:— ನಾನು ಸತ್ಯ ನುಡಿಯುತ್ತಿದ್ದೇನೆ. ಅವನು ತನ್ನ ಮಾರ್ಗವನ್ನು ಪ್ರಶಸ್ತ ಮಾಡಿದ. ಅವನ ಬಲಿದಾನದ ಮೇಲೆ ಮಾನವತೆಯು ಚಿರಕಾಲ ಜೀವಿಸಬಲ್ಲುದು. ಸಾಮ್ರಾಟನು ತನ್ನನ್ನು ತಾನು ಗುರುತಿಸಿಕೊಳ್ಳುತ್ತಾನೆ; ಅವಶ್ಯವಾಗಿ ತಿಳಿದುಕೊಳ್ಳುತ್ತಾನೆ. ಮಹಾನಾಶವು ಎಷ್ಟು ಪೂರ್ಣವಾಗುತ್ತದೋ ನಿರ್ಮಾಣವು ಅಷ್ಟೇ ದೃಢವಾಗಿದೆ.

ಕುಮಾರ:— (ಕಣ್ಣು ತೆರೆದು ಶಿಥಿಲವಾಗಿದ್ದರೂ ಶಾಂತಸ್ವರದಲ್ಲಿ) ಪ್ರಣಾಮ ಭಿಕ್ಷು, ಪ್ರಣಾಮ. ನಮೋ ಬುದ್ಧಾಯ; ಬುದ್ಧಂ ಶರಣಂ ಗಚ್ಛಾಮಿ, ಧಮ್ಮಂ ಶರಣಂ ಗಚ್ಛಾಮಿ. (ಹೇಳುತ್ತಾ ಹೇಳುತ್ತಾ ಕುಮಾರನ

ಶ್ವಾಸ ನಿಂತುಹೋಗುತ್ತದೆ, ಕಣ್ಣು ತನ್ನಷ್ಟಕ್ಕೆ ಮುಚ್ಚಿಕೊಳ್ಳುತ್ತದೆ. ರಾಜ ಕುಮಾರಿ ಕಿರುಚಿ ಬಿದ್ದುಬಿಡುತ್ತಾಳೆ. ಅಶೋಕನೂ, ಚಂಡಾಗಿರನೂ ಒಂದು ಬದಿಯಿಂದ ಶೀಘ್ರತೆಯಿಂದ, ಆದರೆ ಹೆದರಿಕೊಂಡು ಪ್ರವೇಶಿಸುತ್ತಾರೆ. ಚಂಡಾಗಿರನ ರುದ್ರಮುಖವೂ ಹೆದರಿಕೆಯಿಂದ ದಯನೀಯವಾಗಿದೆ. ಸಾಮ್ರಾಟನ ಮುಖದಲ್ಲಿ ಪರಾಜಯ ಕಂಡುಬರುತ್ತದೆ)

[ವಿ.ಸೂ. ರಂಗಮಂಚದಲ್ಲಿ ಪ್ರಸ್ತುತ ಮಾಡುವಾಗ ಈ ಅಂಕವು ಇಲ್ಲಿಗೆ ಕೊನೆಗೊಳ್ಳಬೇಕು]

ಚಂಡಾಗಿರ:— ಕುಮಾರನು ಸ್ವತಃ ನನ್ನ ಒರೆಯಿಂದ ಕಠಾರಿಯನ್ನೆಳೆದು ಎದೆಗೆ ಚುಚ್ಚಿಕೊಂಡನು. ದೇವೀ ಸಂಘಮಿತ್ರಾಳು ಪ್ರತ್ಯಕ್ಷವಾಗಿ ಕಂಡಿದ್ದಾಳೆ.

ಅಶೋಕ:— (ಕ್ರೋಧ) ನೀನಲ್ಲೇ ನೋಡುತ್ತಾ ನಿಂತಿಯೇನು? ನೀನು ಅಂಧನಾಗಿದ್ದೆಯೇನು? ನಿನ್ನ ಬಾಹುಬಲ ಸಮಾಪ್ತವಾಗಿತ್ತೇನು? ನಿನ್ನ ಕಣ್ಣೆದುರಿನಲ್ಲಿಯೇ ನನ್ನ ಆಜ್ಞೆಯ ಅವಹೇಳನವಾಗುತ್ತಿರುವಾಗ ನೋಡುತ್ತಾ ಕುಳಿತೆಯೇನು? ನಿನ್ನ ಕೈಯಿಂದ ಕುಮಾರನು ಕಠಾರಿ ಹೇಗೆ ಎಳೆದುಕೊಂಡ?

ಮಹೇಂದ್ರ:— (ಮುಂದೆ ಬಂದು) ಕಠಾರಿ ಹೇಗೆ ಎಳೆದುಕೊಂಡ ಎಂದು ನಿಮಗೂ ತಿಳಿದಿದೆ ಅಣ್ಣಾ! ಚಂಡಾಗಿರ ನಿಜವನ್ನುತ್ತಿದ್ದಾನೆ. ನಾನಿಲ್ಲಿಗೆ ಬರುವ ಮುಂಚೆಯೇ ಎಲ್ಲವೂ ಸಮಾಪ್ತವಾಗಿತ್ತು. ಕುಮಾರನು ನಿಮ್ಮ ಕ್ಷಮಾಗ್ರಹಣ ಮಾಡಲಿಲ್ಲ.

ಅಶೋಕ:— (ಮಹೇಂದ್ರನತ್ತ ತಿರುಗಿ) ಕುಮಾರನು ನನ್ನ ಕ್ಷಮಾಗ್ರಹಣ ಮಾಡಲಿಲ್ಲ. (ಕೂಡಲೇ ಕುಮಾರನ ಶವದ ಬಳಿ ಕುಳಿತು) ಕುಮಾರ್, ಕುಮಾರಾ! ನೀನು ವಿಜಯಿಯಾದೆ; ನಾನು ಪರಾಜಯ ಹೊಂದಿದೆ. ನೀನು ಕ್ಷಮಾಗ್ರಹಣ ಮಾಡಲಾರೆ ಎಂದು ನಿನ್ನ ಸಹೋದರಿಯೆಂದಳು. ನೀನು ಅಂತೆಯೇ ಮಾಡಿದೆ.

ಸಂಘಮಿತ್ರಾ:— (ಕಣ್ಣೀರು ಹರಿಯುತ್ತಿದ್ದರೂ ಚಕಿತಳಾಗಿ) ಕುಮಾರನ ಸಹೋದರಿ! ಅವಳು ನಿಮ್ಮ ಹತ್ತಿರ ಬಂದಿದ್ದಾಳೇನು? ಅವಳೆಲ್ಲಿದ್ದಾಳೆ?
[ಕೂಡಲೇ ರಾಧಾಗುಪ್ತನೊಡನೆ ಮಹಾರಾಣಿ ಕಾರುವಾಕಿ ಮತ್ತು ಭಿಕ್ಷುಣಿ ವೇಷಧಾರಿಯಾದ ಕಳಿಂಗ ಕುಮಾರಿಯು ಆಗಮಿಸುತ್ತಾರೆ. ಮಹಾರಾಣಿಯು

ದುಃಖಿತಳಾಗಿದ್ದಳು. ಕಳಿಂಗ ಕುಮಾರಿಯ ಮುಖವು ಅತಿಶಯ ಕರುಣ ಗಾಂಭೀರ್ಯದಿಂದ ತುಂಬಿದ್ದಿತು]

ರಾಧಾಗುಪ್ತ ಇಲ್ಲಿಂದ ಬನ್ನಿ ಮಹಾರಾಣೀ, ಇಲ್ಲಿಗೆ ಬನ್ನಿ.

[ಅವರೆಲ್ಲರೂ ಕುಮಾರನು ಚಿರನಿದ್ರೆಯಲ್ಲಿ ಮಲಗಿದ್ದಲ್ಲಿಗೆ ಬರುತ್ತಾರೆ. ಅವರನ್ನು ನೋಡಿ ಸಂಘಮಿತ್ರಾಳು ಎದ್ದುನಿಲ್ಲುತ್ತಾಳೆ]

ಸಂಘಮಿತ್ರಾ:— ಯಾರು ಅತ್ತಿಗೆ ಮತ್ತು... ಕಳಿಂಗ ಕುಮಾರಿ?

ಕಾರುವಾಕಿ:— ಹಾಂ. ಕಳಿಂಗ ರಾಜಕುಮಾರಿಯಾಗಿದ್ದವಳು ಇಂದು ಭಿಕ್ಷುಣಿ! ಆದರೆ ಇದೇನಾಯ್ತು ಸಂಘಮಿತ್ರಾ? ಇದನ್ನು ತಡೆಯಲಾಗಲಿಲ್ಲವೇನು?

ಸಂಘಮಿತ್ರಾ:— ಪ್ರೇಮಪಾಶಕ್ಕಿಂತಲೂ ಮಾನವತಾಪಾಶ ಬಿಗಿಯಾಯ್ತು ಅತ್ತಿಗೇ! ಕುಮಾರನು ಸಾಮ್ರಾಟನನ್ನು ಸೋಲಿಸಲೋಸುಗ ನಾರಿಯ ದರ್ಪವನ್ನು ಚೂರು ಮಾಡಿದನು.

ರಾಜಕುಮಾರಿ:— ಅಲ್ಲ ಸಂಘಮಿತ್ರಾ, ಕಳಿಂಗದ ರಕ್ತಯಜ್ಞವನ್ನು ಕುಮಾರನು ಪೂರ್ಣಮಾಡಲಿಚ್ಛಿಸಿದನು ಮತ್ತು ಅದನ್ನೇ ಮಾಡಿತೋರಿಸಿದನು. ರಾತ್ರಿಯ ನಂತರ ಉಷೆಯ ಪ್ರಾಣ ಹನನವಾದ ಬಳಿಕವಲ್ಲವೇ ಅರುಣೋದಯವಾಗುವುದು ದೇವೀ?

[ಹೇಳುತ್ತಾ ಹೇಳುತ್ತಾ ಭಿಕ್ಷುಣಿ ರಾಜಕುಮಾರಿಯು ಮೊಣಕಾಲೂರಿ ಕುಮಾರನ ಶವದ ಬಳಿ ಕುಳಿತುಕೊಳ್ಳಲಿಚ್ಛಿಸುತ್ತಾಳೆ. ಆದರೆ ಪ್ರೇಮ ತುಂಬಿ ಬಂದು ಎರಡೂ ಕೈಗಳಿಂದ ಕುಮಾರನನ್ನಪ್ಪಿ ಚೀತ್ಕರ ಮಾಡುತ್ತಾಳೆ] ಅಣ್ಣಾ! ಅಣ್ಣಾ! [ಕೂಡಲೇ ಆವೇಗದಿಂದ ಅಶೋಕನು ತನ್ನ ಮುಖ ಮುಚ್ಚಿಕೊಳ್ಳುತ್ತಾನೆ ಮತ್ತು ಹಿಂತಿರುಗುತ್ತಾನೆ. ರಾಧಾಗುಪ್ತ, ಮಹೇಂದ್ರರೂ ಸ್ವಲ್ಪ ಹಿಂದೆ ಸರಿಯುತ್ತಾರೆ. ಸಂಘಮಿತ್ರಾಳು ಮುಂದೆ ಹಾರಿ ರಾಜಕುಮಾರಿಯನ್ನು ಎದೆಗಪ್ಪಿಕೊಂಡು ಅಳತೊಡಗುತ್ತಾಳೆ]

ಸಂಘಮಿತ್ರಾ:— ಸಹೋದರೀ, ಸಹೋದರೀ! ನಾವಿಬ್ಬರೂ ಇಂದು ದುಃಖಿನಿಯರು. ನಾವಿಬ್ಬರೂ ದುಃಖದ ದಹನ ಮಾಡಬೇಕಾಗಿದೆ. ನಮ್ಮ ಶೋಕದಲ್ಲಿಯೇ ಮಾನವತೆಯ ಕಲ್ಯಾಣವಿದೆ.

[ಭಿಕ್ಷು ಉಪಗುಪ್ತ ಮುಂದೆ ಬರುತ್ತಾರೆ]

ಉಪಗುಪ್ತ:— ತಥಾಗಥದ ಮಾರ್ಗದಲ್ಲಿ ಶೋಕಕ್ಕೆಡೆಯಿಲ್ಲ ಭಿಕ್ಷುಣಿ!

[ರಾಜಕುಮಾರಿಯು ಸಂಘಮಿತ್ರಾಳ ಅಪ್ಪುಗೆಯಿಂದ ಬಿಡಿಸಿಕೊಂಡು ಅವರನ್ನು ನೋಡುತ್ತಾಳೆ]

ರಾಜಕುಮಾರಿ:— (ತೀವ್ರತೆಯಿಂದ) ನಾನು ತಥಾಗಥದ ವ್ರತವನ್ನಿಚ್ಛಿಸುವುದಿಲ್ಲ. ನಿನ್ನ ವಸ್ತ್ರಗಳನ್ನು ತೆಗೆದುಕೊಳ್ಳು. ನಾನು ಪುನಃ ರಾಜಕುಮಾರಿಯಾಗುತ್ತೇನೆ. ನಾನು ಪುನಃ ಸಾಮಾನ್ಯ ನಾರಿಯಾಗುತ್ತೇನೆ. ನಾನು ಪ್ರತಿಶೋಧ ತೆಗೆದುಕೊಳ್ಳುತ್ತೇನೆ. ನಾನು ಕಳಿಂಗದ ನಿರ್ಮಮ ಮಹಾನಾಶದ ಪ್ರತಿಶೋಧ ತೆಗೆದುಕೊಳ್ಳುತ್ತೇನೆ. ನಾನು ಕೊಲೆಗಾರ ಅಶೋಕನ ವಧೆ ಮಾಡುತ್ತೇನೆ.

ಸಂಘಮಿತ್ರಾ:— ಕುಮಾರೀ...ಕುಮಾರೀ...

[ಮುಂದೆ ಬಂದು ರಾಜಕುಮಾರಿಯನ್ನು ಪುನಃ ಅಪ್ಪಿಕೊಳ್ಳುತ್ತಾಳೆ. ರಾಜಕುಮಾರಿ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಾಳೆ]

ರಾಜಕುಮಾರಿ:— ನನ್ನನ್ನು ಬಿಡು...ನನ್ನನ್ನು ಬಿಟ್ಟುಬಿಡು...

ಅಶೋಕ:— (ಮುಂದೆ ಬಂದು ಕುಮಾರಿಯ ಎದುರಿನಲ್ಲಿ ಮೊಣಕಾಲೂರಿ ಕುಳಿತುಕೊಳ್ಳುತ್ತಾನೆ) ಕುಮಾರೀ, ನೀನನ್ನುವುದು ನಿಜ. ನಾನು ನಿನ್ನ ತಂದೆಯ ಕೊಲೆಗಾರ, ನಿನ್ನ ಅಣ್ಣನ ಕೊಲೆಗಾರ. ನೀನು ನನ್ನನ್ನು ಕೊಲ್ಲು, ಇಕೋ (ಕಠಾರಿ ಕೊಡುತ್ತಾನೆ) ಈ ಕಠಾರಿಯಿಂದ ನನ್ನನ್ನು ಕೊಲ್ಲು. ನನ್ನ ವಧೆಯ ನಂತರವೇ ಈ ಯಜ್ಞ ಪೂರ್ಣವಾಗುತ್ತದೆ. ಇಕೋ ಈ ಕಠಾರಿ ತೆಗೆದುಕೊಳ್ಳು...ಹಿಡಿ...

ರಾಜಕುಮಾರಿ:— (ವಿಚಲಿತಳಾಗಿ) ಇಲ್ಲ...ಬೇಡ...

ಅಶೋಕ:— (ಅದೇ ಆವೇಶದಲ್ಲಿ) ತೆಗೆದುಕೊಳ್ಳು ಕುಮಾರೀ... ನಾನು ಸಿದ್ಧನಿದ್ದೇನೆ.

ರಾಜಕುಮಾರಿ:— ಇಲ್ಲ...ಇಲ್ಲ...ಇದೆಲ್ಲಾ ಏನು? ನನಗೇನಾಗುತ್ತಿದೆ? ಅಣ್ಣಾ...ಅಣ್ಣಾ...!

[ಕುಮಾರಿ ಎರಡೂ ಕೈಗಳಿಂದ ಮುಖಮುಚ್ಚಿ ಚೀತ್ಕರಿಸುತ್ತಾಳೆ. ಭಿಕ್ಷು ಉಪಗುಪ್ತ ಅವಳ ಹತ್ತಿರ ಬಂದು, ಅವಳ ತಲೆ ಸೇವರಿಸುತ್ತಾರೆ]

ಉಪಗುಪ್ತ:— ಶಾಂತಳಾಗು ಭಿಕ್ಷುಣಿ ಶಾಂತಳಾಗು! ಅಶೋಕನ ವಧೆಗೆ ಇನ್ನೂ ಸಂಯಮದ ಅವಶ್ಯಕತೆ ಇದೆ. ಕುಮಾರನ ಪ್ರಾಣದಾನ ಅದಕ್ಕಾಗಿಯೇ ವಿನಿಯೋಗವಾಯ್ತು. ಅದಕ್ಕಾಗಿಯೇ ನೀನೂ ನಿನ್ನಿಚ್ಛೆಯನ್ನು ದಾನ ಮಾಡಬೇಕು.

[ಕುಮಾರಿ ಕೂಡಲೇ ಭಿಕ್ಷುವಿನ ಪಾದ ಸ್ಪರ್ಶಿಸುತ್ತಾಳೆ]

ರಾಜಕುಮಾರಿ:— ಕ್ಷಮಿಸಿ ಗುರುದೇವಾ ಕ್ಷಮಿಸಿ.

[ಭಿಕ್ಷು ಅವಳ ಬೆನ್ನು ಪೂಸುತ್ತಾರೆ. ಎಲ್ಲರೂ ಆಶೀರ್ವಾದ ತೆಗೆದುಕೊಳ್ಳುವಂತೆ ತಲೆ ಬಾಗಿಸುತ್ತಾರೆ. ಕರುಣವು ನವಪ್ರಕಾಶದಲ್ಲಿ ಪರಿವರ್ತಿತವಾದಂತೆ ಕಂಡುಬರುತ್ತದೆ. ರಂಗಮಂಚದಲ್ಲಿ ಅರುಣೋದಯ 'ನವ-ಪ್ರಭಾತ'ದ ಸೂರ್ಯರಶ್ಮಿಯು ಕಾಮನಬಿಲ್ಲಿನಂತೆ ಕಾಣುತ್ತದೆ]

[ಪರದೆ ಮೆಲ್ಲಮೆಲ್ಲನೆ ಬೀಳುತ್ತದೆ]

ಸಮಾಪ್ತ.

ಉಪಸಂಹಾರ.

[ಸಂಪೂರ್ಣವಾಗಿ ಮೊದಲನೆ ಅಂಕದ ದೃಶ್ಯ. ಅಶೋಕನು ಗಂಭೀರ ಮುದ್ರೆಯಲ್ಲಿ ಅತ್ತಿಂದಿತ್ತ ಅಡ್ಡಾಡುತ್ತಿದ್ದಾನೆ. ಅವನು ನೈಜವಾಗಿಯೇ ಉದ್ವಿಗ್ನನಾಗಿದ್ದನು. ಒಮ್ಮಿಂದೊಮ್ಮೆಲೆ ಅವನು ಶೂನ್ಯವನ್ನು ದಿಟ್ಟಿಸಿ ನೋಡುತ್ತಾ ತನ್ನಷ್ಟಕ್ಕೆ ಮಾತಾಡತೊಡಗುತ್ತಾನೆ]

ಅಶೋಕ:— (ಸ್ವಗತ) ಏನಿದ್ದದ್ದು ಏನಾಯ್ತು? ಕಳೆದ ಹತ್ತು ದಿವಸಗಳಿಂದ ವ್ಯಥೆಯಿಂದ ತುಂಬಿದ ನನ್ನ ಮನಸ್ಸು ಎಲ್ಲೆಲ್ಲಿಯೋ ಹಾರಾಡುತ್ತಿತ್ತು. ಅದೊಂದು ಭಯಂಕರ ಸ್ವಪ್ನದಂತೆ ಭಾಸವಾಗುತ್ತಿದೆ.........ನಾನು ಎಷ್ಟು ಶಕ್ತಿಶಾಲಿ ಎಂದು ಭಾವಿಸುತ್ತಿದ್ದೆ. ನನ್ನ ಹೆಸರೇ ಜಗತ್ತಿಗೆ ಭಯ, ಬೇಸರ ಬರಿಸುತ್ತಿತ್ತು. ನಾನು ಭಯದ ಸಾಕಾರರೂಪವಾಗಿದ್ದೆ. ಆದರೆ ಯುಕ್ತ ಸಮಯದಲ್ಲಿ ಓರ್ವ ಬಂಧಿಯಿಂದ ನನ್ನ ಆಜ್ಞೆಯನ್ನು ಪಾಲಿಸಲಾಗಲಿಲ್ಲ. ಯಾರು ಹತ್ತು ದಿವಸಗಳಲ್ಲಿ ಅಸಂಖ್ಯಾತ ಶವಗಳನ್ನೂ, ಗಾಯಗೊಂಡವರನ್ನೂ ಧರಾಶಾಯಿಯನ್ನಾಗಿ ಮಾಡಿದನೋ ಅಂತಹ ನಾನು ಒಬ್ಬನ ಪ್ರಾಣವನ್ನು ಉಳಿಸಬೇಕೆಂದರೆ ಅದು ಸಾಧ್ಯವಾಗಲಿಲ್ಲ. (ಮೇಲೆ ನೋಡಿ) ಒಬ್ಬ ವ್ಯಕ್ತಿಯ ಜೀವವನ್ನು ನಾನು ಬದುಕಿಸಲಾರದಾದೆ. ಅವನು ನನ್ನ ಶಕ್ತಿಶಾಲೀ ಜೀವನವನ್ನು ಭಂಗಗೊಳಿಸಿದನು. ಅವನು ನನ್ನನ್ನು ತಿರಸ್ಕರಿಸಿದನು– 'ನೀನು ಶಕ್ತಿಶಾಲಿಯಲ್ಲ; ತಲೆ ಉರುಳಿಸುವ ಹದ್ದು!...ಹದ್ದು!...' (ಕಾತರಭಾವ) ಹದ್ದು...ನಾನು ಹದ್ದು! ಆಶ್ಚರ್ಯವೆಂದರೆ ನಾನವನ ತಿರಸ್ಕಾರವನ್ನೂ ಘೃಣಿಸಲಾರದಾದೆ. ನೈಜವಾಗಿ ನೋಡಿದರೆ ಆ ತಿರಸ್ಕಾರವೇ ನನಗೆ ಮಾರ್ಗ ದರ್ಶನ ಮಾಡಿತು. ನೋಡುತ್ತಾ ನೋಡುತ್ತಾ ಭಯಂಕರ ಸ್ವಪ್ನದ ರಾತ್ರಿ ಕಳೆದು ಉಜ್ವಲ ಪ್ರಭಾತವಾದಂತೆ ಭಾಸವಾಯ್ತು. ಕಲಂಕವು ತೊಳೆದು ಹೋಗಿ ನಾನು ನಿರ್ಮಲನಾದೆ. ಆದರೆ...ಆದರೆ ಆ ಹಾಹಾಕಾರ, ಆ ದಾರುಣ ಚೀತ್ಕಾರ, ಅಸಂಖ್ಯಾತ ಜೀವಿಗಳ ಸಂತಪ್ತ ಚಿತೆಯಿಂದುಂಟಾಗುವ ಕರ್ಕಶ ಕಿರುಚುವಿಕೆ, ಅರೆ ಮುರಿದು ಪಾಳುಬಿದ್ದ ಮಹಲುಗಳಲ್ಲಿ ಗೂಗೆ ಮತ್ತಿತರ ಪಕ್ಷಿಗಳ ಮರ್ಮಭೇದೀ ಧ್ವನಿಗಳೂ, ಆಬಾಲ, ವೃದ್ಧ, ವನಿತೆಯರ ಅಕ್ಷಿಗಳಿಂದ ಹರಿಯುತ್ತಿರುವ ಅಶ್ರುಜಲ ಜ್ವಾಲೆ ಇವೆಲ್ಲಾ...ಇವೆಲ್ಲಾ ನನ್ನನ್ನು

ಹೊಸಸೃಷ್ಟಿ ಮಾಡಿಬಿಡುತ್ತವೇನು? (ಒಂದು ಕ್ಷಣ ಮೌನ) ಆದರೆ ಭಿಕ್ಷು ಹೇಳುತ್ತಾರೆ- 'ನೀನು ಹೊಸಸೃಷ್ಟಿ ಮಾಡಬಲ್ಲೆ' ಎಂದು. ತಥಾಗಥದ ಮಾರ್ಗವೇ ನವನಿರ್ಮಾಣದ ಸಂದೇಶವಾಹಕ... (ಭಾವಾವೇಶ) ತಥಾಗಥದ ಮಾರ್ಗ, ಅಹಿಂಸೆ ಮತ್ತು ಮಾನವತೆಯ ಮಾರ್ಗ, ನಾನಿದರಲ್ಲಿ ನಡೆಯಬಲ್ಲೆನೇನು? ನಾನು ಪ್ರೇಮದಿಂದ ದಿಗ್ವಿಜಯ ಮಾಡಬಲ್ಲೆನೇನು? ನನಗೆ ಏನೊಂದೂ ಹೊಳೆಯುವುದಿಲ್ಲ. ಈ ಯುದ್ಧ ಸಮಾಪ್ತವಾಗುತ್ತದೇನು? (ಕಠಾರಿ ಹಿಡಿದು) ಈ ಅಸ್ತ್ರಶಸ್ತ್ರಗಳು ಸಮಾಪ್ತವಾಗುತ್ತವೇನು? ಇನ್ನು ಸಂಘರ್ಷಣೆಗಳು ಮಾಯವಾಗುತ್ತವೇನು?

[ಮಹಾರಾಣಿ ಕಾರುವಾಕಿಯ ಪ್ರವೇಶ]

ಕಾರುವಾಕಿ:— ಪ್ರಭೋ!

ಅಶೋಕ:— (ಬೆಚ್ಚಿಬಿದ್ದು) ಯಾರು ದೇವೀ! ನೀನೇನು ಇತ್ತ ಬಂದೆ?

ಕಾರುವಾಕಿ:— ಹಾಂ ಪ್ರಭೋ, ನಿಮ್ಮನ್ನು ಬಹಳ ಹೊತ್ತು ಕಾಯ್ದು ಕುಳಿತ ನಂತರ ನಾನೇ ಇತ್ತ ಹೊರಟು ಬಂದೆ. ಇಲ್ಲಿಗೆ ಬಂದಾಗ ತಾವು ತುಂಬಾ ಯೋಚಿಸುತ್ತಿರುವಂತೆ ಕಾಣುತ್ತಿದೆ.

ಅಶೋಕ:— ಕಾರ್ಯವಿಲ್ಲದೆ ಆಲೋಚಿಸುತ್ತಿರುವುದು ಗರ್ಭಪಾತದಂತೆ ದೇವೀ. ಆದರೆ ದೇವೀ, ನಿಜವಾಗಿಯೂ 'ನವಯುಗ' ಬರುವುದೇನು? ನಿಜವಾಗಿಯೂ ಜೀವನ ಪ್ರೇಮ ಮತ್ತು ಸೌಂದರ್ಯದಿಂದ ತುಂಬಿಹೋಗುವುದೇನು? ಸ್ವಸುಖಕ್ಕಾಗಿ ಎಂದೂ ಯುದ್ಧವಾಗದೇನು?

ಕಾರುವಾಕಿ:— ತಾವೇ ಹಾಗೆ ಯೋಚಿಸಿದ ಬಳಿಕ ಅದೇಂದಾದರೂ ಹಾಗೆ ಆಗುವುದೇನು?

ಅಶೋಕ:— (ಉತ್ಸುಕತೆಯಿಂದ) ಆದರೆ ಹಾಗೆ ಆಗುವುದೇನು?... ಹಾಗೆ ನಿಜವಾಗಿಯೂ ಆಗುವುದೇನು?

ಕಾರುವಾಕಿ:— ಅವಶ್ಯವಾಗಿ ಆಗುತ್ತದೆ ಸ್ವಾಮಿ. ಸಾಮ್ರಾಟರು ಬಹಳ ಆಲೋಚಿಸುತ್ತಿದ್ದಾರೆ. ನವಯುಗದ ಉದಯ ಖಂಡಿತವಾಗಿಯೂ ಆಗುತ್ತದೆ ಎಂದು ಭಿಕ್ಷು ಹೇಳುತ್ತಿದ್ದರು. ಅದಕ್ಕಾಗಿಯೇ ಕುಮಾರನು ಜೀವದಾನವಿತ್ತನು.

ಅಶೋಕ:— ನಿಜವಾಗಿಯೂ?

ಕಾರುವಾಕಿ:— ಹಾಂ ಸ್ವಾಮಿ, ತನ್ನ ಅಂತರಂಗದಲ್ಲಿ ಸಂಘರ್ಷ ಉಂಟಾದಾಗಲೇ ಮಾನವನು ತನ್ನನ್ನು ಗುರುತಿಸುತ್ತಾನೆ. ತನ್ನನ್ನು ಗುರುತಿಸಿದ ನಂತರ ಮಾನವನಿಗೆ ಮಾನವತೆಯ ಗುರುತು ಹಚ್ಚಲು ಕಷ್ಟವಾಗುವುದಿಲ್ಲ ಸ್ವಾಮಿ.

ಅಶೋಕ:— ಎಷ್ಟು ಸುಂದರ ಮಾತಿದು ದೇವಿ! ನೀನೂ ಇಷ್ಟು ಸುಂದರವಾಗಿ ಮಾತಾಡುತ್ತಿ ಎಂದು ನನಗೆ ತಿಳಿದಿರಲಿಲ್ಲ!

ಕಾರುವಾಕಿ:— ನನಗೂ ಏನೂ ತಿಳಿಯದು ಪ್ರಭೋ. ಭಿಕ್ಷು ಉಪಗುಪ್ತರೇ ತಿಳಿಸಿ ಹೇಳಿದರು.

ಅಶೋಕ:— ಭಿಕ್ಷು ನಿಜವನ್ನೇ ನುಡಿದರು ದೇವೀ. (ಒಮ್ಮೆಲೆ) ಅವರೀಗ ಎಲ್ಲಿದ್ದಾರೆ ಮಹಾರಾಣೀ?

ಕಾರುವಾಕಿ:— ಅವರೀಗ ದೇವಿ ಸಂಘಮಿತ್ರಳೊಂದಿಗಿದ್ದಾರೆ. ದೇವಿಯು ದೀಕ್ಷೆ ತೆಗೆದುಕೊಳ್ಳಲು ನಿಶ್ಚಯಿಸಿದ್ದಾಳೆ. ನಾನು ನಿಮ್ಮನ್ನಲ್ಲಿಗೆ ಕರೆದುಕೊಂಡು ಹೋಗಲು ಬಂದಿದ್ದೆ. (ಕೂಡಲೇ ಬುದ್ಧಮಂತ್ರ ಕೇಳಿ ಬರುತ್ತದೆ) ಕೇಳಿ, ಕೇಳಿ ಸಾಮ್ರಾಟ್, ಎಷ್ಟೊಂದು ಮಧುರ, ಎಷ್ಟೊಂದು ಪ್ರಿಯ, ಎಷ್ಟೊಂದು ಆಶ್ವಸ್ಥ ಮಾಡುವ ಸ್ವರ ಇದು!

[ಸ್ವರ ಕೇಳಿ ಬರುತ್ತದೆ]

ಸ್ವರ:— ಬುದ್ಧಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ, ಧಮ್ಮಂ ಶರಣಂ ಗಚ್ಛಾಮಿ.

ಅಶೋಕ:— (ಭಾವುಕನಂತೆ) ನಿಜವಾಗಿಯೂ ಎಷ್ಟೊಂದು ಪ್ರಿಯವಾಗಿದೆ, ಎಷ್ಟೊಂದು ಮಧುರವಾಗಿದೆ! ಯಾರು ಹಾಡುತ್ತಿದ್ದಾರೆ ದೇವೀ?

ಕಾರುವಾಕಿ:— ಕಳಿಂಗ ಕುಮಾರಿ, ಸಂಘಮಿತ್ರಾ ಮತ್ತು ರೇಖಾ.

ಅಶೋಕ:— ರೇಖಾ! ರೇಖಾಳೂ ಭಿಕ್ಷುಣಿಯಾಗುತ್ತಾಳೇನು?

ಕಾರುವಾಕಿ:— ಮತ್ತು ನಾನು ಸಹ. ನನ್ನ ಮನಸ್ಸು ಈ ಮಂತ್ರ ಹಾಡಲಿಚ್ಛಿಸುತ್ತಿದೆ. ನೀವೂ ಹಾಡಿ ಸ್ವಾಮೀ ಹಾಡಿ– ಬುದ್ಧಂ ಶರಣಂ ಗಚ್ಛಾಮಿ, ಧಮ್ಮಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ.

ಅಶೋಕ:— ನಾನೂ ಹಾಡಲೇನು? ನೋಡುವ ಪ್ರಯತ್ನಿಸುತ್ತೇನೆ. ನಾವುದಾದರೊಂದು ದಿನ ಈ ಮಂತ್ರ ಹೇಳಲು ಯೋಗ್ಯನಾದೇನು.

(ಹಾಡುತ್ತಾನೆ) ಬುದ್ಧಂ ಶರಣಂ ಗಚ್ಛಾಮಿ, ಧಮ್ಮಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ.

[ಮುಖವು ಪ್ರಕಾಶಮಾನವಾಗುತ್ತದೆ. ರೆಪ್ಪೆ ಅರೆ ಮುಚ್ಚುತ್ತದೆ. ಮಹಾರಾಣಿಯು ಕಣ್ಣುಮುಚ್ಚಿಕೊಳ್ಳುತ್ತಾಳೆ. ಅವಳಿಗೆ ಆತ್ಮಾನಂದವಾಗುತ್ತದೆ. ಆಗಲೇ ರೇಖಾಳು ತನ್ಮಯಳಾಗಿ ಹಾಡತೊಡಗುತ್ತಾಳೆ.

೩

ಕಳೆದಿದೆ ಸ್ವಪ್ನ ಭಯಂಕರ ರಾತ್ರಿಯು,
ನವ-ಪ್ರಭಾತವು ಏಳುತಿದೇ ।
ದಶದಿಶೆಗಳಲ್ಲಿಂದು ತುಂಬಿದುತ್ಸಾಹ
ಭವ, ಭಯ, ಭಾದಾ, ದುಃಖಹರಣ ।
ಬುದ್ಧಂ ಶರಣಂ ಗಚ್ಛಾಮಿ ॥ ೧ ॥
ಮಾರ್ಗ ತಥಾಗಥಕ್ಕಿಂದು ತೋರಿಸುತಿಹ,
ಸುಪ್ರಭಾತದ ದಿನಕರನು ।
ಜೀವನದೊಳು ನಿರ್ವಾಣ ಸುಲಭವದು,
ಸ್ವರ್ಣಾವತರಣವಾಗಲಿ ಜಗದೊಳು ।
ಧಮ್ಮಂ ಶರಣಂ ಗಚ್ಛಾಮಿ ॥ ೨ ॥
ಸತ್ಯ-ಅಹಿಂಸೆಯ ಯುಗ ಬಂದಿದೆಯ್ಯೆ,
ಕರುಣೆಯ ಸಾಗರ ಉಕ್ಕುತಿದೆ ।
ಪ್ರಲಯಂಕರ ಜ್ವಾಲೆ ಶಾಂತವಾಗಿದೆಯಿಂದು,
ನಾಶವಾಗಿಹುದು ಸಂಘರ್ಷಣವೆಲ್ಲವೂ ।
ಸಂಘಂ ಶರಣಂ ಗಚ್ಛಾಮಿ ॥ ೩ ॥
ಧರ್ಮರಾಜ್ಯದ ಸಮಯವು ಬಂದಿದೆ,
ಅಳುತಿಹ ಮಾನವ ನಗುತಿಹನು ।
ಪ್ರೇಮ-ಪ್ರೀತಿಯೊಳಿಂದು ಜಯ ಮಾಲೆಯಿದೆ,
ಮಾನವತೆಗುಂಟಿಲ್ಲ ಜಯಜಯಾಕರವು ॥

ಬುದ್ಧಂಶರಣಂಗಚ್ಛಾಮಿ।ಧಮ್ಮಂಶರಣಂಗಚ್ಛಾಮಿ।ಸಂಘಂಶರಣಂಗಚ್ಛಾಮಿ
ಬುದ್ಧಂಶರಣಂಗಚ್ಛಾಮಿ।ಧಮ್ಮಂಶರಣಂಗಚ್ಛಾಮಿ।ಸಂಘಂಶರಣಂಗಚ್ಛಾಮಿ

[ಸ್ವರ ಒಮ್ಮೆ ಜೋರಾಗಿ ಮತ್ತೊಮ್ಮೆ ಮೆಲ್ಲಗೆ ಕೇಳಿಬರುತ್ತದೆ. ರೇಖಾ ಸಂಘಮಿತ್ರಾ ಮತ್ತು ಕಳಿಂಗ ರಾಜಕುಮಾರಿಯರೊಡನೆ ರಂಗಮಂಚ ಪ್ರವೇಶಿಸುತ್ತಾಳೆ. ರೇಖಾಳು ತನ್ಮಯಳಾಗಿ ಹಾಡುತ್ತಿದ್ದಾಳೆ. ಉಳಿದಿಬ್ಬರೂ ಪ್ರಶಾಂತ ಮುಖಮುದ್ರೆಯಲ್ಲಿ ಅವಳೊಂದಿಗೆ ಮುಂದುವರಿಯುತ್ತಾರೆ. ಎಲ್ಲರೂ ತೇಜಃಪೂರ್ಣರಾಗಿದ್ದಾರೆ. ಕೂಡಲೇ ಸಾಮ್ರಾಟ ಮತ್ತು ಸಾಮ್ರಾಜ್ಞಿ ಅವರೆಲ್ಲರಿಗೂ ನಮಸ್ಕರಿಸುತ್ತಾರೆ. ಅವರು ರಂಗಮಂಚದ ಒಂದು ಬದಿಯಿಂದ ಇನ್ನೊಂದು ಬದಿಗೆ ಹಾಡಿನಲ್ಲೇ ತನ್ಮಯರಾಗಿ ಮುಂದುವರಿಯುತ್ತಾರೆ. ಅಶೋಕ ಮತ್ತು ಕಾರುವಾಕಿ ಪ್ರಣಾಮಮುದ್ರೆಯಲ್ಲಿ ಬಗ್ಗಿಯೇ ಇರುತ್ತಾರೆ. ಸ್ವಲ್ಪದೂರ ಹೋದ ನಂತರ ಸಾಮ್ರಾಟನು ವಿಶ್ವಾಸ ಧ್ವನಿಯಲ್ಲಿ ಅನ್ನುತ್ತಾನೆ]

ಅಶೋಕ:— ದೇವೀ, ನಾನೀ ಮಂತ್ರದ ಅಧಿಕಾರಿ ಹೌದೋ ಅಲ್ಲವೋ ಎಂಬುದು ನನಗೆ ತಿಳಿಯದು. ನನ್ನ ಪರೀಕ್ಷೆ ನನಗೇ ತೆಗೆದುಕೊಳ್ಳಲಿದೆ. ಆದರೆ ಒಂದು ಮಾತಂತೂ ಸತ್ಯ. ಇಂದಿನಿಂದ ದಿಗ್ವಿಜಯದ ಬದಲು ಧರ್ಮವಿಜಯ ಪ್ರಾರಂಭವಾಗುವುದು. ಭೇರಿಘೋಷದ ಬದಲು ಧರ್ಮಘೋಷವು ನಡೆಯುವುದು. ಇಂದಿನಿಂದ ಭೂಮಾತೆಯು ತನ್ನ ಮಕ್ಕಳ ರಕ್ತ ಕುಡಿಯಲು ವಿವಶಳಾಗಲಾರಳು. ಇಂದಿನಿಂದ ಗಾಯಗೊಂಡವರ, ಆಹತರ ಹಾಹಾಕಾರದಿಂದ ಭೂಮ್ಯಾಕಾಶಗಳು ಕಂಪಿಸವು. ಇನ್ನು ಮುಂದೆ ವಿಧವೆಯರ ಮತ್ತು ಅನಾಥರ ಕರುಣಕ್ರಂದನದಿಂದ ಶಾಂತಿಯ ಕೊಲೆ ನಡೆಯಲಾರದು. ಮುಂದಕ್ಕೆ ರಕ್ತರಂಜಿತ ಇತಿಹಾಸವು ಉಚ್ಚರಿಸಲ್ಪಡದು. (ಆಳವಾದ ಉಚ್ಛ್ವಾಸ) ಮುಂದಿನ ಯುಗದ ಮಾನವರು ತಮ್ಮ ದುಃಖ ಮತ್ತು ಅಭಾವಗಳ ನಾಶವನ್ನು ಶಕ್ತಿಯಿಂದಲ್ಲ ಪ್ರೇಮಪ್ರಯೋಗದಿಂದ ಮಾಡುತ್ತಾರೆಂಬುದನ್ನು ನಾನೀಗಲೇ ಕಾಣುತ್ತಿದ್ದೇನೆ ಭಾಮೇ!

ಕಾರುವಾಕಿ:— ಪ್ರಿಯತಮಾ, ನೀವೆಷ್ಟು ಮಹಾತ್ಮರಾಗಿದ್ದೀರಿ!

ಅಶೋಕ:— ಮಹಾನತೆಯು ನನ್ನಿಂದ ಬಹುದೂರವಿದೆ ದೇವೀ, ಆದರೂ ನಾನು ಪ್ರಯತ್ನಿಸುತ್ತಿದ್ದೇನೆ. ಸಫಲವಾಗುವ ಭರವಸೆಯಿದೆ.

[ಭಿಕ್ಷು ಉಪಗುಪ್ತರ ಪ್ರವೇಶ]

ಉಪಗುಪ್ತ:— ಪ್ರಯತ್ನಿಸುವವರ ಕಾಲನ್ನು ಸಾಫಲ್ಯವು ಯಾವಾಗಲೂ ಚುಂಬಿಸುತ್ತಿರುತ್ತದೆ ಸಾಮ್ರಾಟ್!

[ಭಿಕ್ಷುವನ್ನು ಕಂಡು ಸಾಮ್ರಾಟ ಮತ್ತು ಮಹಾರಾಣಿ ಪುನಃ ಪ್ರಣಾಮ ಮುದ್ರೆಯಲ್ಲಿ ಬಗ್ಗುತ್ತಾರೆ. ಆಶೀರ್ವಾದ ಕೊಡಲು ಭಿಕ್ಷು ಕೈಯೆತ್ತುತ್ತಿರುವಾಗಲೇ ಪರದೆ ಬೀಳುತ್ತದೆ]

ನೇಪಥ್ಯದಲ್ಲಿ:— ಬುದ್ಧಂ ಶರಣಂ ಗಚ್ಛಾಮಿ । ಧಮ್ಮಂ ಶರಣಂ ಗಚ್ಛಾಮಿ । ಸಂಘಂ ಶರಣಂ ಗಚ್ಛಾಮಿ ॥

ಸಂಪೂರ್ಣಂ